ಪುಸ್ತಕ ಪ್ರಪಂಚ

ಡಿಸೆಂಬರ್-೧೯೯೬



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ಪುಸ್ತಕ ಪ್ರಪಂಚ

ಮಾಸಿಕ

ಸಂಪುಟ ೪೭ ಸಂಚಿಕೆ ೩

ಡಿಸೆಂಬರ್ ೧೯೯೬

ಮುಖ ಪುಟ: ವಿಜ್ಞಾನಿ ರಂಟ್ಜೆನ್

ರಕ್ಷಾಪುಟ-೪: ಕ್ರೈಸ್ತ ದೇವಾಲಯ

ಪರಿವಿಡಿ

PUSTAKA PRAPANCHA : Monthly

Published and printed by Karnataka State Adult Education Council, Mysore-6. Price : Rupees Six

ಬಿಡಿಪ್ರತಿ : ರೂ. ೬

ವಾರ್ಷಿಕ ಚಂದಾ : ರೂ. ೬೦

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೪೦೦

ಸಂಸ್ಥೆಗೆ : ರೂ. ೬೦೦

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು ೫೭೦ ೦೦೬

ಎಕ್ಸ್‌ಕಿರಣಾವಿಷ್ಕಾರಕ್ಕೆ ನೂರು ತುಂಬಿದೆ

ಡಾ|| ಎ. ಪಿ. ರಾಧಾಕೃಷ್ಣ

ಗೋಚರ ಬೆಳಕಿನ ಜ್ಞಾತಿ ಸಂಬಂಧಿ ಅಗೋಚರ ಎಕ್ಸ್‌ಕಿರಣ. ಛಾಯಾಗ್ರಾಹಕ ಫೊರೆಯನ್ನು ಇದು ಗೋಚರ ಬೆಳಕಿನಂತೆಯೇ ಮಬ್ಬುಗೊಳಿಸುತ್ತದೆ. ಗೋಚರ ಬೆಳಕು ನಮ್ಮ ಚರ್ಮವನ್ನು ಅಡ್ಡ ಹಾಯ್ದು ಒಳಹೋಗಲಾರದು. ಅಗೋಚರ ಎಕ್ಸ್‌ಕಿರಣವಾದರೋ ದೇಹದ ಅಡ್ಡ ಸಲೀಸಾಗಿ, ನಮ್ಮ ಅರಿವಿಗೆ ಬರದಂತೆ, ಧಾವಿಸಬಲ್ಲದು. ಈ ತತ್ತ್ವವನ್ನು ಆಧರಿಸಿ ದೇಹದ ಆಂತರಿಕ ಅಂಗೋಪಾಂಗಗಳ, ವಿಶೇಷವಾಗಿ ಮೂಳೆಗಳಿರುವ ಭಾಗಗಳ, ಎಕ್ಸ್‌ಕಿರಣ ಛಾಯಾಚಿತ್ರ ಪಡೆಯುವುದಾಗಿದೆ. ಮೂಳೆಗಳು ಎಕ್ಸ್‌ಕಿರಣಗಳಿಗೆ ಅಪಾರಕ. ಎಕ್ಸ್‌ಕಿರಣದ ಆವಿಷ್ಕಾರಕ್ಕೆ (ಡಿಸ್ಕವರಿ) ಈಗ ಶತಮಾನದ ಸಂಭ್ರಮ ಸಡಗರ. ಎಕ್ಸ್‌ಕಿರಣಾವಿಷ್ಕಾರದಿಂದ ಪ್ರೇರಿತವಾದ ಇನ್ನೊಂದೆಂದರೆ ವಿಕಿರಣ ಪಟುತ್ವ (ರೇಡಿಯೋ-ಆಕ್ಟಿವಿಟಿ) ಇಪ್ಪತ್ತನೆಯ ಶತಮಾನವನ್ನು ಆವಾಹಿಸಿದ ಮುಂಬೆಳಗುಗಳಿವು. ಈ ಲೇಖನದಲ್ಲಿ ಪ್ರಕಟವಾಗುವ ಖಚಿತತೆ ಮತ್ತು ನಾಟಕೀಯತೆ ನಮಗೊಂದು ಸಂದೇಶ ನೀಡುತ್ತವೆ: ಆಸಕ್ತ ಮತಿಗೆ ನಿಸರ್ಗ ಅಸಂಖ್ಯ ಆವಿಷ್ಕಾರಾವಕಾಶಗಳನ್ನು ಸದಾ ಒಡ್ಡುತ್ತಲೇ ಇರುವ ಅನರ್ಘ್ಯ ನಿಧಿ—ತೆರೆ ಕಣ್, ನಗೆ ನೀನ್, ಅಗೊ ಪಣ್ !

೧೮೯೬ ಜನವರಿ ೭. ಫ್ರಾನ್ಸಿನ ಪ್ಯಾರಿಸ್ ಸೈನ್ಸ್ ಅಕಾಡೆಮಿಯ ಅಧ್ಯಕ್ಷ ಅನ್ರಿಪ್ವಾನ್‌ಕ್ವಾರೆ (೧೮೫೪-೧೯೧೨) ಎಂದಿನಂತೆ ತಮ್ಮ ಕಚೇರಿಗೆ ಬಂದಾಗ ಅಲ್ಲಿ ಅವರನ್ನೊಂದು ಸಂಶೋಧನ ಲೇಖನ ಕಾಯುತ್ತಿತ್ತು. ಲೇಖಕ ವಿಲ್‌ಹೆಲ್ಮ್ ಕೊನ್ರಾಡ್ ರಂಟ್ಜನ್ (೧೮೪೫-೧೯೨೩), ಅಜ್ಞಾತ ಜರ್ಮನ್ ಭೌತ ವಿಜ್ಞಾನಿ. ತಾನು ಆವಿಷ್ಕರಿಸಿದ್ದ ಎಕ್ಸ್‌ಕಿರಣಗಳ ಬಗ್ಗೆ ಆ ಲೇಖನದಲ್ಲಿ ರಂಟ್ಜನ್ ವಿವರಿಸಿದ್ದರು.

ಗಣಿತ ಮತ್ತು ಭೌತ ವಿಜ್ಞಾನಗಳಲ್ಲಿ ಪ್ರಕಾಂಡ ಪಂಡಿತರಾಗಿದ್ದ ಪ್ವಾನ್‌ಕ್ವಾರೆಗೆ ಈ ಆವಿಷ್ಕಾರದ ಮಹತ್ವ ಅರಿಯಲು ತಡವಾಗಲಿಲ್ಲ. ಎಕ್ಸ್-ಕಿರಣಗಳ ಬಗ್ಗೆ ವಿಚಾರ ವಿನಿಮಯಕ್ಕೆ ವಿಶೇಷ ಸಭೆ ಕರೆದರು (ಜನವರಿ ೨೦). ಆ ಸಭೆಯಲ್ಲಿ ಭೌತವಿಜ್ಞಾನಿಗಳು, ವೈದ್ಯರು ತಮ್ಮ ಲೇಖನ ಮಂಡಿಸಿದರು. ಅನಿಲಗಳಲ್ಲಿ ವಿದ್ಯುದ್ವಿಸರ್ಜನೆ ಬಗ್ಗೆ ಪ್ರಯೋಗನಿರತರಾಗಿದ್ದ ರಂಟ್ಜನ್ ಹೇಗೆ ಅಚಾನಕ್ಕಾಗಿ, ತೀರ ನಾಟಕೀಯ

ಥಾಟೆಯಲ್ಲಿ ಎಕ್ಸ್‌ಕಿರಣಗಳನ್ನು ಆವಿಷ್ಕರಿಸಿದ್ದರೆಂದು ಉಪನ್ಯಾಸಕರು ವಿವರಿಸಿದರು.

ರಂಟ್ಜನ್ ಅನಿಲ ನಳಿಗೆಯಲ್ಲಿ ವಿದ್ಯುತ್ತನ್ನು ಹಾಯಿಸಿ ಪ್ರಯೋಗ ನಡೆಸುತ್ತಿದ್ದರು. ಅದೊಂದು ದಿನ (೧೮೯೫ ನವೆಂಬರ್ ೮) ಎಂದಿನಂತೆ ನಳಿಗೆಯಲ್ಲಿ ವಿದ್ಯುತ್ ಹಾಯಿಸಿದಾಗ, ಇವರ ಗಮನ ಕೋಣೆಯ ಮೂಲೆಯ ಕಡೆ ಸರಿಯಿತು. ಅರೆ! ಅಲ್ಲೊಂದು ಮಂದ ಪ್ರಕಾಶ. ಬೇರಿಯಮ್ ಪ್ಲಾಟಿನೊಸಯನೈಡ್ ಎಂಬ ರಾಸಾಯನಿಕದಿಂದ ಲೇಪಿತಗೊಂಡ ಪರದೆ ಮಂದ ಪ್ರಕಾಶದಿಂದ ಮಿನುಗುತ್ತಿತ್ತು. ವಿದ್ಯುತ್ ಪ್ರವಾಹ ನಿಲ್ಲಿಸಿದೊಡನೆ ಪರದೆ ಮೇಲಿನ ಪ್ರಕಾಶ ಮಾಯವಾಯಿತು. ಪುನಃ ಗುಂಡಿ ಒತ್ತಿದರು. ಮತ್ತೊಮ್ಮೆ ಮಂದ ಪ್ರಕಾಶದ ಮಂದಹಾಸ. ಅನಿಲ ನಳಿಗೆಯಲ್ಲಿ ವಿದ್ಯುತ್ತನ್ನು ಹಾಯಿಸಿದಾಗ, ನಳಿಗೆಯಿಂದ ಉತ್ಸರ್ಜನೆಗೊಳ್ಳುವ ಯಾವುದೊ ಅಜ್ಞಾತ ಕಿರಣ, ಪರದೆಗೆ ಲೇಪಿಸಿದ ರಾಸಾಯನಿಕದಲ್ಲಿ ಸಂದೀಪ್ತಿಯನ್ನು ಪ್ರೇರಿಸುತ್ತವೆ ಎಂಬ ಸೂಕ್ಷ್ಮ ರಂಟ್ಜನ್‌ಗೆ ಸ್ಪಷ್ಟವಾಯಿತು. ವಸ್ತುವಿನ ಉಷ್ಣತೆಯನ್ನು ಹೆಚ್ಚಿಸದೆ ವಸ್ತು ಬೆಳಕನ್ನು ಸೂಸುವ ವಿದ್ಯಮಾನಕ್ಕೆ ಸಂದೀಪ್ತಿ ಎಂದು ಹೆಸರು. ರಂಟ್ಜನ್ ಈ ಅಜ್ಞಾತ ಕಿರಣಗಳನ್ನು ಎಕ್ಸ್‌ಕಿರಣಗಳೆಂದು ಕರೆದರು. ಪ್ಯಾರಿಸ್ ಸೈನ್ಸ್ ಅಕಾಡೆಮಿಯ ಅಂದಿನ ಆ ಸಭೆಯಲ್ಲಿ ಎಕ್ಸ್‌ಕಿರಣಗಳ ಬಗ್ಗೆ ವಿಸ್ತೃತ ಚರ್ಚೆಗಳು ನಡೆದುವು.

ಸಭೆಯ ಹಿಂದಿನ ಸಾಲಿನಲ್ಲಿ ಕುಳಿತಿದ್ದ ಫ್ರೆಂಚ್ ಭೌತವಿಜ್ಞಾನಿ ಆ್ಯಂಟೊಯಿನ್ ಹೆನ್ರಿ ಬೆಕೆರೆಲ್ (೧೮೫೨–೧೯೦೮) ಸಂದೀಪ್ತಿ ಬಗ್ಗೆ ಹಲವು ವರ್ಷಗಳಿಂದ ಗಂಭೀರ ಅಧ್ಯಯನದಲ್ಲಿ ತೊಡಗಿದ್ದ ಪ್ರಯೋಗನಿಷ್ಣಾತ ಮತ್ತು ಛಲದಂಕಮಲ್ಲ. 'ಎಕ್ಸ್‌ಕಿರಣಗಳು ಕೆಲವು ರಾಸಾಯನಿಕಗಳಲ್ಲಿ ಸಂದೀಪ್ತಿಯನ್ನು ಪ್ರೇರಿಸುತ್ತವೆ' ಎಂದು ಕೇಳಿದೊಡನೆ ಚುರುಕಾದರು. ಅವರಲ್ಲಿ ಸ್ಫುರಿಸಿತೊಂದು ಪ್ರಶ್ನೆ: ಹಾಗಾದರೆ ವಿಲೋಮವಾಗಿ ಸಂದೀಪ್ತಿಶೀಲ ರಾಸಾಯನಿಕಗಳು ಎಕ್ಸ್‌ಕಿರಣಗಳನ್ನು ಉತ್ಸರ್ಜಿಸಬಹುದೆ?

ಪ್ರಶ್ನೆಗೆ ಉತ್ತರ ದೊರೆಯುವುದಾದರೆ ಅದು ಪ್ರಯೋಗದಲ್ಲಿ ಮಾತ್ರ. ಬೆಕೆರೆಲ್ ದುಮುಕಿದರು ಪ್ರಯೋಗರಂಗಕ್ಕೆ. ಝಿಂಕ್ ಸಲ್ಫೈಡ್, ಬೇರಿಯಮ್ ಪ್ಲಾಟಿನೊಸಯನೈಡ್, ಕ್ಯಾಲ್ಸಿಯಮ್ ಫ್ಲೂರೈಡ್ ಮೊದಲಾದ ಸಂದೀಪ್ತಿಶೀಲ ರಾಸಾಯನಿಕಗಳನ್ನು ಪ್ರಯೋಗಗಳಿಗೆ ಆರಿಸಿಕೊಂಡರು. ಕಪ್ಪು ಕಾಗದದ ಹಾಳೆಗಳಲ್ಲಿ ಸುತ್ತಿಟ್ಟ ಛಾಯಾಗ್ರಾಹಕ ಫಲಕದ ಮೇಲೆ ರಾಸಾಯನಿಕವನ್ನಿರಿಸಿ ಕೆಲವು ತಾಸುಗಳ ಕಾಲ ಬಿಸಿಲಿಗೊಡ್ಡಿದರೆ, ಸೂರ್ಯನ ಬೆಳಕನ್ನು ಹೀರಿದ ರಾಸಾಯನಿಕ ಎಕ್ಸ್‌ಕಿರಣಗಳನ್ನು ಉತ್ಸರ್ಜಿಸುವ ಮೂಲಕ ಛಾಯಾಗ್ರಾಹಕ ಫಲಕವನ್ನು ಮಬ್ಬುಗೊಳಿಸಬಹುದೆಂದು ಬೆಕೆರೆಲ್ ಅವರ ತರ್ಕ. ಆದರೆ ಪ್ರಯೋಗ ಫಲಿತಾಂಶಗಳು ನಿರಾಶೆಯನ್ನಷ್ಟೇ ತಂದುವು.

ಕೊನೆಯಲ್ಲಿ ಪೊಟ್ಯಾಸಿಯಮ್ ಯುರೇನೈಲ್ ಸಲ್ಫೇಟಿನ ಹರಳುಗಳನ್ನು ಪ್ರಯೋಗಕ್ಕೆ ಆಯ್ದುಕೊಂಡರು. ಕಪ್ಪು ಕಾಗದದಲ್ಲಿ ಸುತ್ತಿಟ್ಟ ಛಾಯಾಗ್ರಾಹಕ ಫಲಕದ ಮೇಲೆ ಹರಳುಗಳನ್ನಿರಿಸಿ, ಬಿಸಿಲಿಗೆ

ಸುಮಾರು ನಾಲ್ಕು ಗಂಟೆಗಳ ಕಾಲ ಒಡ್ಡಿದರು. ಮತ್ತೆ ಕತ್ತಲೆ ಕೋಣೆಯಲ್ಲಿ ಫಲಕವನ್ನು ಸಂಸ್ಕರಿಸಿದಾಗ ತೃಪ್ತಿಯು ಬಟ್ಟಲು ತುಂಬಿತು. ಏಕೆಂದರೆ ಫಲಕ ಮಬ್ಬಾಗಿತ್ತು. ಹರಳುಗಳ ಛಾಯಾಚಿತ್ರ ಪಡಿಮೂಡಿತ್ತು. ಬೆಕೆರೆಲ್ ಮತ್ತೆ ಮತ್ತೆ ಪ್ರಯೋಗವನ್ನು ಪುನರಾವರ್ತಿಸಿದರು ತನ್ನ ನಿರ್ಣಯವನ್ನು ಖಚಿತಪಡಿಸಿಕೊಳ್ಳಲು. ಅನಂತರ ಪ್ಯಾರಿಸ್ ಸೈನ್ಸ್ ಅಕಾಡೆಮಿಯ ಸಭೆಯಲ್ಲಿ ಘೋಷಿಸಿಯೇ ಬಿಟ್ಟರು. "ರಾಸಾಯನಿಕಗಳಲ್ಲಿ ಸಂದೀಪ್ತಿಯನ್ನು ಉದ್ದೀಪಿಸಿದ್ದಾದರೆ ಅವು ಎಕ್ಸ್‌ಕಿರಣಗಳನ್ನು ಉತ್ಸರ್ಜಿಸುತ್ತವೆ" (ಜನವರಿ ೨೪, ೧೮೯೬).

ಬೆಕೆರೆಲ್ ಶೋಧಿಸಿದ್ದು ಎಕ್ಸ್‌ಕಿರಣಗಳನ್ನು ಅತ್ಯಂತ ಸುಲಭದಲ್ಲಿ ಪಡೆವ ಹೊಸ ತಂತ್ರ. ಇದು ನಿಜವೇ? ಇಲ್ಲಿ ಅನಿಲ ನಳಿಗೆ, ಬ್ಯಾಟರಿ ವ್ಯವಸ್ಥೆಯ ಕರಕರೆಗಳಿಲ್ಲ, ಬೇಕಾಗಿರುವುದು ಒಂದಿಷ್ಟು ಸಂದೀಪ್ತಿಶೀಲ ರಾಸಾಯನಿಕ ಮತ್ತು ಬಿಸಿಲು! ಪ್ವಾನ್‌ಕಾರೆ ಸಹಿತ ಹೆಚ್ಚಿನ ಅಕಾಡೆಮಿ ಸದಸ್ಯರು ಬೆಕೆರೆಲ್ಲರನ್ನು ಪ್ರಶಂಸಿಸಿದರು. ಆದರೆ ಇಷ್ಟರಿಂದಲೇ ತೃಪ್ತಿಹೊಂದುವ ಜಾಯಮಾನ ಬೆಕೆರೆಲ್ ಅವರದ್ದಾಗಿರಲಿಲ್ಲ. ಎಕ್ಸ್‌ಕಿರಣ ಮತ್ತು ರಾಸಾಯನಿಕ ಸಂದೀಪ್ತಿ ಇವುಗಳ ನಡುವಿನ ನಿಕಟ ಸಂಬಂಧ ಯಾವ ಬಗೆಯದೆಂದು ಅರಿಯಲು ಮತ್ತಷ್ಟು ನವುರಾದ ಪ್ರಯೋಗಗಳನ್ನು ಮಾಡಲು ಹೆಚ್ಚಿನ ಉತ್ಸಾಹದಿಂದ ಅಣಿಯಾದರು.

ಆದರೆ ದುರದೃಷ್ಟದಿಂದ ಮೋಡ ಕವಿದ ಮಬ್ಬು ವಾತಾವರಣ ಪ್ರಯೋಗಕ್ಕೆ ಅಡ್ಡಿ ಒಡ್ಡಿತು—ರಾಗ ಹೊರಟಾಗ ತಂತಿ ಕಡಿದಂತೆ, ತಂತಿ ಮಿಡಿದಾಗ ರಾಗ ಹೊಮ್ಮದಂತೆ! ನಿರಾಶರಾದ ಬೆಕೆರೆಲ್ ಛಾಯಾಗ್ರಾಹಕ ಫಲಕಗಳನ್ನು ಕಪ್ಪು ಕಾಗದದ ಹಾಳೆಗಳಲ್ಲಿ ಭದ್ರವಾಗಿ ಸುತ್ತಿ (ಬೆಳಕಿನ ಕಿರಣಗಳಿಗೆ ತುತ್ತಾಗದಂತೆ) ಮೇಜಿನ ಖಾನೆಯೊಳಗಿರಿಸಿದರು. ಪ್ರಯೋಗಕ್ಕೆ ಆಯ್ದುಕೊಂಡಿದ್ದ ಪೊಟ್ಯಾಸಿಯಮ್ ಯುರೇನೈಲ್ ಸಲ್ಫೇಟಿನ ಹರಳುಗಳನ್ನು ಕೂಡ 'ತೀರ ಆಕಸ್ಮಿಕವಾಗಿ' ಅದೇ ಖಾನೆಯೊಳಗೆ ತುರುಕಿದರು. ಖಾನೆಗೆ ಬೀಗ ಜಡಿದು ಮತ್ತೆ ಕಾದರು ಬಿಸಿಲಿಗಾಗಿ. "ಕಾದಿರುವಳು ಶಬರಿ ರಾಮ ಬರುವನೆಂದು."

ವಾರ ಕಳೆಯಿತಾದರೂ ಮೋಡದ ಮರೆಯಲ್ಲಿ ಅಡಗಿದ ಸೂರ್ಯ ಹಣಿಕಲಿಲ್ಲ. ಬಿಸಿಲು ಅರಳಲಿಲ್ಲ. ಬೆಕೆರೆಲ್ಲರ ಸಹನೆ ಕಟ್ಟೆಯೊಡೆಯಿತು. ಮತ್ತೆ ಪ್ರಯೋಗಗಳಿಗೆ ತೊಡಗಿದರು. ಪ್ರಯೋಗದ ಮುನ್ನ ಛಾಯಾಗ್ರಾಹಕ ಫಲಕವೊಂದನ್ನು ಸಂಸ್ಕರಿಸುವ ಮನಸ್ಸಾಯಿತು. ಅದು ಶುದ್ಧವಾಗಿರಬಹುದೆಂದು ನಿರೀಕ್ಷಿಸಿದ್ದರೂ ಸಂಸ್ಕರಿತ ಫಲಕ ಕಂಡಾಗ ಮಾತ್ರ ದಿಙ್ಮೂಢರಾದರು. ಫಲಕ ಮಬ್ಬಾಗಿತ್ತು, ಕಪ್ಪಾಗಿತ್ತು—ಬಿಸಿಲಿಗೆ ನೇರ ಒಡ್ಡಲ್ಪಟ್ಟಂತೆ. ಗಡಿಬಿಡಿಯಿಂದ ಕಟ್ಟುಬಿಚ್ಚಿ ಕಟ್ಟಿನಲ್ಲಿದ್ದ ಎಲ್ಲ ಹತ್ತು ಛಾಯಾಗ್ರಾಹಕ ಫಲಕಗಳನ್ನೂ ಸಂಸ್ಕರಿಸಿದರು. ಏನಾಶ್ಚರ್ಯ, ಎಲ್ಲವೂ ಮಬ್ಬಾಗಿದ್ದುವು; ಪ್ರಯೋಗಕ್ಕೆ ಅನರ್ಹಗೊಂಡಿದ್ದವು. ಈಡಿಟ್ಟದ್ದು ಇಲಿಗೆ, ಸಿಕ್ಕಿದ್ದು ಹೆಬ್ಬುಲಿ!

ಉದ್ವಿಗ್ನಗೊಂಡ ಬೆಕೆರೆಲ್ ಕತ್ತಲೆ ಕೋಣೆಗೆ ಧಾವಿಸಿದರು. ಪೊಟ್ಯಾಸಿಯಮ್

ಯುರೇನೈಲ್ ಸಲ್ಫೇಟಿನ ಹರಳುಗಳನ್ನು ಬಿಸಿಲಿಗೊಡ್ಡದೆಯೆ ಹಚ್ಚ ಹೊಸ ಛಾಯಾಗ್ರಾಹಕ ಫಲಕದ ಮೇಲಿರಿಸಿದರು. ತುಸು ಹೊತ್ತಿನನಂತರ ಫಲಕವನ್ನು ಸಂಸ್ಕರಿಸಿದಾಗ ಕಂಡದ್ದು ಮಬ್ಬು ಫಲಕ, ಅದರಲ್ಲಿ ಮೂಡಿದ್ದ ಹರಳುಗಳ ಛಾಯಾಚಿತ್ರ. ಈ ಹಿಂದೆ ಇದೇ ರಾಸಾಯನಿಕ ಉತ್ಸರ್ಜಿಸಿದ ಮತ್ತು ಛಾಯಾಗ್ರಾಹಕ ಫಲಕವನ್ನು ಮಬ್ಬುಗೊಳಿಸಿದ ಕಿರಣಗಳು ತಾನು ಊಹಿಸಿದ್ದ ಆ ಎಕ್ಸ್‌ಕಿರಣಗಳಲ್ಲ. ಇವು ಈ ತನಕ ಅನಾವರಣಗೊಂಡಿರದ ಬೇರೆಯೇ ಕಿರಣಗಳಿರಬೇಕೆಂದು ಬೆಕೆರೆಲ್‌ಗೆ ಸ್ಪಷ್ಟವಾಯಿತು. ಯಾವೆಲ್ಲ ರಾಸಾಯನಿಕಗಳು ಯುರೇನಿಯಮ್ ಧಾತುವನ್ನು ಹೊಂದಿವೆಯೊ, ಅವು ಈ ಹೊಸ ಬಗೆಯ ಕಿರಣಗಳನ್ನು ಉತ್ಸರ್ಜಿಸುತ್ತವೆಂದು ಅರಿಯಲು ಹೆಚ್ಚು ಕಾಲ ಬೇಕಾಗಿರಲಿಲ್ಲ. ಯುರೇನಿಯಮ್ಮಿನ ಪರಿಶುದ್ಧ ಬಿಲ್ಲೆ ಬೆಕೆರೆಲ್‌ಗಿದ್ದ ಎಲ್ಲ ಸಂಶಯಗಳನ್ನೂ ನಿವಾರಿಸಿತು, ಸತ್ಯಸಾಕ್ಷಾತ್ಕಾರವಾಯಿತು.

ಬೆಕೆರೆಲ್ ಈ ಕಿರಣಗಳ ಉತ್ಸರ್ಜನೆಯನ್ನು ತಡೆಯಲು ಪಣತೊಟ್ಟರು—ಶೀಸೆಗೆ ಬಿರಡೆ ಹಾಕುವಂತೆ. ಯುರೇನಿಯಮ್ ಬಿಲ್ಲೆಯ ಮೇಲೆ ಒತ್ತಡ ಹೇರಿದರು; ಉಷ್ಣತೆಯಲ್ಲಿ ಏರಿಳಿತ ಮಾಡಿದರು; ವಿದ್ಯುತ್ಕಾಂತ ಬಲ ಒಡ್ಡಿದರು. ಆದರೆ ಈ ಯಾವುವೇ ಪ್ರಯತ್ನಗಳಿಗೆ ಕಿರಣಗಳು ಜಗ್ಗಲಿಲ್ಲ. ಅವು ಅನುಸ್ಯೂತವಾಗಿ ಹೊಮ್ಮುತ್ತಿದ್ದುವು. ಬಾಹ್ಯ ಪ್ರಪಂಚದೊಂದಿಗೆ ಒಂದಿನಿತೂ ಸಂಬಂಧವಿಲ್ಲದಂತೆ.

ಬೆಕೆರೆಲ್ ಆವಿಷ್ಕರಿಸಿದ ವಿದ್ಯಮಾನದೊಂದಿಗೆ ಹಲವು ಪ್ರಶ್ನೆಗಳು ಹುಟ್ಟಿಕೊಂಡುವು. ಯುರೇನಿಯಮ್ ಅದುರಿನಿಂದ ಶಕ್ತಿಶಾಲಿಯಾದ ಅಗೋಚರ 'ಬೆಕೆರೆಲ್ ಕಿರಣಗಳು' ಉತ್ಸರ್ಜನೆಗೊಳ್ಳಲು ಕಾರಣವೇನಿರಬಹುದು? ಇವುಗಳ ಮೂಲ ಯಾವುದಿರಬಹುದು? ತೋರಿಕೆಗೆ ಶಾಂತವಾಗಿ ಕಾಣುವ ದ್ರವ್ಯದ ಪರಮಾಣುಗಳ ಅಂತರಾಳದ ತೀವ್ರ ಪ್ರಕ್ಷೋಭೆ ಈ ವಿದ್ಯಮಾನಕ್ಕೆ ಕಾರಣವಿರಬಹುದೇ? ವಿಜ್ಞಾನ ಹುಟ್ಟುವುದು ಪ್ರಶ್ನೆಗಳಲ್ಲಿ, ವರ್ಧಿಸುವುದು ಉತ್ತರದ ಹುಡುಕಾಟದಲ್ಲಿ ಮತ್ತು ಸಾರ್ಥಕ್ಯ ಗಳಿಸುವುದು ಸಿದ್ಧಾಂತ ಮಂಡನೆಯಲ್ಲಿ. ಬೆಕೆರೆಲ್ ಗೈದ ಅನಿರೀಕ್ಷಿತ ಆವಿಷ್ಕಾರದೊಂದಿಗೆ ಎದ್ದ ಪ್ರಶ್ನೆಗಳಿಗೆ ಉತ್ತರಿಸಲು ನಡೆಸಿದ ಪ್ರಯತ್ನಗಳು ಭೌತವಿಜ್ಞಾನದ ನೂತನ ಶಾಖೆಗಳಾದ ಪರಮಾಣು ಭೌತವಿಜ್ಞಾನ ಮತ್ತು ಬೈಜಿಕ ಭೌತವಿಜ್ಞಾನಗಳಿಗೆ ಕಾರಣವಾದುವು. ಭೌತವಿಜ್ಞಾನದ ಪರಮಾದ್ಭುತ ಪ್ರವರ್ಧನೆಗೆ ನಾಂದಿ ಹಾಡಿದುವು.

'ಬೆಕೆರೆಲ್ ಕಿರಣಗಳನ್ನು' ಉತ್ಸರ್ಜಿಸುವ ವಿದ್ಯಮಾನ ಕೇವಲ ಯುರೇನಿಯಮ್ ಧಾತುವಿಗಷ್ಟೆ ಸೀಮಿತವಾಗಿರಲಾರದು. ಬೇರೆ ಕೆಲವಾದರೂ ಧಾತುಗಳು ಈ ವಿಶಿಷ್ಟ ಗುಣವನ್ನು ಪ್ರದರ್ಶಿಸುತ್ತಿರಬಹುದೆನ್ನುವ ಊಹೆಯನ್ನು ಬೆಂಬತ್ತಿದ ಫ್ರೆಂಚ್ ಭೌತವಿಜ್ಞಾನಿ ದಂಪತಿಗಳಾದ ಮೇರಿಕ್ಯೂರಿ (೧೮೬೭-೧೯೩೪) ಮತ್ತು ಪೀರಿ ಕ್ಯೂರಿ (೧೮೫೯-೧೯೦೬) ಟನ್ನುಗಟ್ಟಲೆ ಯುರೇನಿಯಮ್ ಅದುರನ್ನು ಸಂಸ್ಕರಿಸಿ ಚಿಟಿಕೆಯಷ್ಟು ಗ್ರಾಮ್ ಎರಡು ಹೊಸ ಧಾತುಗಳನ್ನು ಪಡೆದರು. ತಾವು ಆವಿಷ್ಕರಿಸಿದ ಈ ಧಾತುಗಳಿಗೆ ಪೊಲೊನಿ

ಯಮ್ ಮತ್ತು ರೇಡಿಯಮ್ ಎಂಬ ಹೆಸರಿಟ್ಟರು. ಬೆಕೆರೆಲ್ ಆವಿಷ್ಕರಿಸಿದ ವಿದ್ಯಮಾನವನ್ನು ಕ್ಯೂರಿ ದಂಪತಿಗಳು ತಮ್ಮ ಸಂಶೋಧನ ಲೇಖನದಲ್ಲಿ ‘ರೇಡಿಯೊ ಆ್ಯಕ್ಟಿವಿಟಿ’ (ಕನ್ನಡದಲ್ಲಿ ‘ವಿಕಿರಣಪಟುತ್ವ’) ಎಂದು ಕರೆದರು. ಇದೇ ಹೆಸರು ಜನಪ್ರಿಯವಾಯಿತು, ಖಾಯಂ ಆಯಿತು.

ಜರ್ಮನಿಯ ರಂಟ್ಜನ್ ಹಾಲೆಂಡ್ ಮತ್ತು ಸ್ವಿಟ್ಸರ್ಲೆಂಡ್ ದೇಶಗಳಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ಓದಿದರು. ಶಾಲೆಯಲ್ಲಿ ಉಪಾಧ್ಯಾಯನನ್ನು ಗೇಲಿಮಾಡಿದರೆಂಬ ಕಾರಣಕ್ಕೆ ಶಿಕ್ಷೆ ಪಡೆದಿದ್ದರು—ಯುವ ಪ್ರತಿಭೆ ವೃದ್ಧ ಕುಂಠನೆದುರು ನಿಂತ ಘಟನೆ! ಮುಂದೆ ಭೌತವಿಜ್ಞಾನ ಅಧ್ಯಯನಗೈದು ಜರ್ಮನ್ ಭೌತವಿಜ್ಞಾನಿ ಆಗಸ್ಟ್ ಅಡಾಲ್ಫ್ ಎಡೂವರ್ಡ್ ಕೂಂಟ್ (೧೮೩೯–೯೪) ಇವರ ಸಹಾಯಕರಾಗಿ ಭೌತವಿಜ್ಞಾನ ಸಂಶೋಧನ ರಂಗಕ್ಕೆ ದುಮುಕಿದರು.

“ಎಕ್ಸ್ ಕಿರಣಗಳ ಅಸ್ತಿತ್ವವನ್ನು ಹಠಾತ್ತನೆ ಪತ್ತೆ ಹಚ್ಚಿದಾಗ ನಿಮ್ಮ ಮನಸ್ಸಿನಲ್ಲಿ ಏನು ಯೋಚನೆ ಮಿಂಚಿತು?” ಎಂದು ರಂಟ್ಜನ್‌ರನ್ನು ಪ್ರಶ್ನಿಸಿದಾಗ ಇವರು ನೀಡಿದ ಉತ್ತರ ಮಾರ್ಮಿಕವಾಗಿದೆ: “ನಾನು ಯೋಚಿಸಲಿಲ್ಲ, ಪ್ರಯೋಗಗೈದೆ.” ನಿಜ, ಸಮರ್ಥ ನಿರ್ವಹಿಸುತ್ತಾನೆ, ಅಸಮರ್ಥ ಮಾತಾಡುತ್ತಾನೆ!

ಭೌತವಿಜ್ಞಾನದ ವ್ಯಾಪಕ ಅಭಿವರ್ಧನೆಗೆ ಕುಮ್ಮಕ್ಕು ನೀಡಿದ ಆವಿಷ್ಕಾರ ಇದು. ಇಂದು (೧೯೯೬) ವೈದ್ಯರಿಗೆ, ತಂತ್ರವಿದರಿಗೆ ಹಾಗೂ ಇತರ ಉಪಯೋಗಿಗಳಿಗೆ ಅಪಾರ ಧನಲಾಭ, ಕೀರ್ತಿ, ಪ್ರತಿಷ್ಠೆ ತರುತ್ತಿರುವ ಕಾಮಧೇನು ಎಕ್ಸ್‌ಕಿರಣ. ಆದರೆ ಇದರ ಆವಿಷ್ಕರ್ತೃವಿಗೆ ಮಾತ್ರ ಇದು ಇಂಥ ಯಾವ ವರವನ್ನೂ ಪ್ರದಾನಿಸಲಿಲ್ಲ. ರಿಕ್ತ ದಾರುಣ ಪರಿಸ್ಥಿತಿಯಲ್ಲಿ ರಂಟ್ಜನ್ ಜೀವನ ಕೊನೆಗಂಡಿತು (೧೯೨೩). ನೊಬೆಲ್ ಪ್ರಶಸ್ತಿ ಸ್ಥಾಪನೆಗೊಂಡಾಗ, ೧೯೦೧. ಮೊದಲ ಪ್ರಶಸ್ತಿ ರಂಟ್ಜನ್‌ರಿಗೇ ಸಂದದ್ದು ಅರ್ಹತೆಗೆ ತತ್‌ಕ್ಷಣವೇ ಗೌರವ ಸಂದ ವಿರಳ ಘಟನೆ.

ಆ್ಯಂಟೊಯಿನ್ ಹೆನ್ರಿ ಬೆಕೆರೆಲ್ ಜನಿಸಿದ್ದು ಫ್ರಾನ್ಸಿನ ರಾಜಧಾನಿಯಾದ ಪ್ಯಾರಿಸ್‌ನಲ್ಲಿ, ೧೮೫೨ ಡಿಸೆಂಬರ್ ೧೫ ರಂದು. ಇವರ ಅಜ್ಜ ಆ್ಯಂಟೊನಿ ಸೀಸರ್ ಮತ್ತು ತಂದೆ ಅಲೆಗ್ಸಾಂಡರ್ ಎಡ್ಮಂಡ್ ಫ್ರಾನ್ಸಿನಲ್ಲಿ ಮುಂಚೂಣಿ ಭೌತ ವಿಜ್ಞಾನಿಗಳಾಗಿದ್ದರು. ಇವರಿಬ್ಬರೂ ಸಂದೀಪ್ತಿ ಬಗ್ಗೆ ಬಹಳಷ್ಟು ಸಂಶೋಧನೆಗೈದು ತಮ್ಮ

ಕಾಲದಲ್ಲಿ ಖ್ಯಾತಿ ಪಡೆದವರು. ಬೆಕೆರೆಲ್ ಬೆಳೆದದ್ದು, ಅರಳಿದ್ದು ಇಂಥ ಹಿರಿ ಪ್ರತಿಭೆಗಳ ಹೆಗಲ ಮೇಲೆ.

ಬೆಕೆರೆಲ್ ಅಧ್ಯಯನಿಸಿದ್ದು ಎಂಜಿನಿಯರಿಂಗ್. ಆದರೆ ಭೌತವಿಜ್ಞಾನದಲ್ಲಿ ಹಿಂಗದ ಆಸಕ್ತಿ. ಎಂಜಿನಿಯರಿಂಗ್ ಅಧ್ಯಯನಾನಂತರ ಸರಕಾರಿ ಕೆಲಸ ಹಿಡಿದ ಇವರು ಸೇತುವೆ, ಮಾರ್ಗಗಳ ನಿರ್ಮಾಣದ ಹೊಣೆ ಹೊತ್ತು ಕೆಲವೇ ವರ್ಷಗಳಲ್ಲಿ ಮುಖ್ಯ ಎಂಜಿನಿಯರ್ ಅಂತಸ್ತನ್ನು ಏರಿದರು. ಆದರೆ ಭೌತವಿಜ್ಞಾನದ ಪ್ರಯೋಗಗಳನ್ನು ಕೈಬಿಡಲಿಲ್ಲ. ಮಾಧ್ಯಮದಲ್ಲಿ ಬೆಳಕು ಹೀರುವ ಬಗ್ಗೆ ಮೂಲಭೂತ ಸಂಶೋಧನೆ ಮಾಡಿ ಬೆಕೆರೆಲ್ ೧೮೮೮ರಲ್ಲಿ ಡಾಕ್ಟರೇಟ್ ಪದವಿ ಪಡೆದರು.

ಪ್ಯಾರಿಸ್ಸಿನ ವಿಜ್ಞಾನ ಕೇಂದ್ರವೊಂದರಲ್ಲಿ ಭೌತ ವಿಜ್ಞಾನ ಮುಖ್ಯಸ್ಥರಾಗಿದ್ದ (ಬೆಕೆರೆಲ್ ಅಜ್ಜ ಕೂಡ ಇದೇ ಕೇಂದ್ರದಲ್ಲಿ ಭೌತ ವಿಜ್ಞಾನ ಪ್ರಾಧ್ಯಾಪಕರಾಗಿದ್ದರು). ತಂದೆಯ ನಿಧನದಿಂದ ತೆರವಾದ ಸ್ಥಾನಕ್ಕೆ ಬೆಕೆರೆಲ್ ಆಯ್ಕೆಯಾದರು (೧೮೯೨). ಈ ಕೇಂದ್ರದ ಪ್ರಯೋಗಾಲಯದಲ್ಲಿ ವಿಕಿರಣಪಟುತ್ವವನ್ನು ಆವಿಷ್ಕರಿಸಿದರು.

ಈ ಆವಿಷ್ಕಾರ ತೀರ ಆಕಸ್ಮಿಕ ಎಂದನ್ನಿಸಿದರೂ ವಾಸ್ತವವಾಗಿ ಅವರು ಅದೇ ಹಾದಿಯಲ್ಲಿದ್ದರು ಎನ್ನುವುದನ್ನು ಗಮನಿಸಬೇಕು. ಆಂಗ್ಲ ವಿಜ್ಞಾನ ಬರಹಗಾರ ಮೇಯರ್ಸ್ ಹೇಳುವಂತೆ "ನಿಸರ್ಗ ತನಗೇನೊಗುಟ್ಟು ಬಿಟ್ಟುಕೊಡಲು ಸಿದ್ಧವಾಗುತ್ತಿದೆ ಎನ್ನುವ ಸುಳುಹನ್ನು ಬೆಕೆರೆಲ್‌ರ ಅಪ್ಪಟ ವೈಜ್ಞಾನಿಕ ಪ್ರತಿಭೆ ಥಟ್ಟನೆ ಗುರುತಿಸಿತು. ಆ ಕಾರಣದಿಂದಲೆ ಹರಳುಗಳು ಶಕ್ತಿಶಾಲಿಯಾದ ಕಿರಣಗಳನ್ನು ಉತ್ಸರ್ಜಿಸುತ್ತಿರುವ ಅಪರೂಪದ ವಿದ್ಯಮಾನವನ್ನು ಪತ್ತೆ ಮಾಡಲು ಅವರಿಂದ ಸಾಧ್ಯವಾಯಿತು." ಆಕಸ್ಮಿಕ ಯಾ ನಾಟಕೀಯ ವೈಜ್ಞಾನಿಕ ಆವಿಷ್ಕಾರಗಳ ಬಗ್ಗೆ ನೊಬೆಲ್ ಪ್ರಶಸ್ತಿ ವಿಜೇತ ಭೌತ ವಿಜ್ಞಾನಿ ಸಿ. ವಿ. ರಾಮನ್ (೧೮೮೮-೧೯೭೦) ಹೇಳುತ್ತಾರೆ. "ವೈಜ್ಞಾನಿಕ ಆವಿಷ್ಕಾರ ಆಕಸ್ಮಿಕವಾಗಿ ಆಗುತ್ತದೆನ್ನುವುದನ್ನು ಒಪ್ಪುವಂತಿಲ್ಲ. ಏಕೆಂದರೆ ಹಾಗೆ ಆಗುವುದಿದ್ದರೂ ಅದು ಅರ್ಹ ವ್ಯಕ್ತಿಗಳಿಗೆ ಮಾತ್ರ. ಕ್ರಮಬದ್ಧ ಪ್ರಯತ್ನಗಳಿಲ್ಲದೆ ವೈಜ್ಞಾನಿಕ ಆವಿಷ್ಕಾರ ಅಸಂಭವ!"

ವಿಕಿರಣಪಟುತ್ವದ ಆವಿಷ್ಕಾರದೊಂದಿಗೆ ಬೆಕೆರೆಲ್ ವಿಶ್ವವಿಖ್ಯಾತರಾದರು. ಪ್ರಶಸ್ತಿಗಳು ಅವರನ್ನು ಹಿಂಬಾಲಿಸಿದುವು. ಇವೆಲ್ಲವುಗಳಿಗೆ ತುರಾಯಿಯಾಗಿ ೧೯೦೩ರ ನೊಬೆಲ್ ಪ್ರಶಸ್ತಿಯನ್ನು ಕ್ಯೂರಿ ದಂಪತಿಗಳೊಂದಿಗೆ ವಿಕಿರಣಪಟುತ್ವದ ಆವಿಷ್ಕಾರ ಮತ್ತು ಸಂಶೋಧನೆಗಳಿಗಾಗಿ ಪಡೆದರು. ಪ್ರತಿ ಹೊತ್ತೂ ಭೌತ ವಿಜ್ಞಾನದ ಸಮಸ್ಯೆಗಳ ಬಗ್ಗೆ ಚಿಂತಿಸುತ್ತಿದ್ದ ಈ ಅಪ್ಪಟ ವಿಜ್ಞಾನಿ ಇನ್ನಷ್ಟು ಸಾಧಿಸುವ ಕನಸು ಹೊತ್ತಿದ್ದರು. ಆದರೆ ಕಾಲನ ಕರೆ ಬಹು ಬೇಗ ಬಂತು. ನಲ್ವತ್ತನಾಲ್ಕರ ಹರೆಯದಲ್ಲೆ (೧೯೦೮, ಆಗಸ್ಟ್ ೨೪) ನಿಧನರಾದರು.

ಎಕ್ಸ್ ಕಿರಣ ಮತ್ತು ವಿಕಿರಣಪಟುತ್ವದ ಆವಿಷ್ಕಾರಗಳಾಗಿ ನೂರು ವರ್ಷಗಳೇ ಸಂದಿವೆ. ಆದರೂ ಈ ಎರಡು ಆವಿಷ್ಕಾರಗಳ ರೋಚಕತೆ ಮಾಸಿಲ್ಲ. ಮತ್ತೆ ಮತ್ತೆ ಈ ಆವಿಷ್ಕಾರಗಳು ವಿಜ್ಞಾನಿಗಳಿಗೆ ಪ್ರೇರಣೆ, ಸ್ಫೂರ್ತಿ ಒದಗಿಸುತ್ತಿವೆ: ನಡೆ ಮುಂದೆ ನಡೆ ಮುಂದೆ ನುಗ್ಗಿ ನಡೆ ಮುಂದೆ ಜಗ್ಗದೆಯೆ ಕುಗ್ಗದೆಯೆ ಹಿಗ್ಗಿ ನಡೆ ಮುಂದೆ!

ಗ್ರಾಹಕ ಸೇನಾನಿ ಎಂ. ಆರ್. ಪೈ.

ಸರಸ್ವತಿ ಬಡೆಕ್ಕಿಲ

ಶ್ರೀಸಾಮಾನ್ಯನಿಗೆ ನ್ಯಾಯ ದೊರಕಿಸುವುದೇ—ಈ ಧರ್ಮವೀರನ ಜೀವನ ಶೈಲಿ.

*　　*　　*

ಮುಂಬೈಯ ಎಫ್. ಎಫ್. ಇ. ಎಂದರೆ—ಫೋರಮ್ ಆಫ್ ಫ್ರೀ ಎಂಟರ್‌ಪ್ರೈಸಸ್ (ಅರ್ಥಾತ್ ಸಾರ್ವಜನಿಕ ಹಿತಾಸಕ್ತಿಗಾಗಿ ಮುಕ್ತ ಚರ್ಚಾ ವೇದಿಕೆ) ಎಂಬ ಸಂಸ್ಥೆಯ ಕಛೇರಿಯ ಕೋಣೆಯೊಂದರಲ್ಲಿ ಎಂ. ಆರ್. ಪೈಯವರ ಮೇಜಿನ ದೂರವಾಣಿ ಟ್ರಿಣ್ ಟ್ರಿಣ್ ಎನ್ನುತ್ತಲೇ ಇರುತ್ತದೆ—ಪ್ರತಿ ಕೆಲವು ನಿಮಿಷಗಳಿಗೊಮ್ಮೆ.

ಪೈಯವರು ನಗರದ ಗೃಹಿಣಿಯೊಬ್ಬಳ ದೂರು ಗಂಟೆಯನ್ನು ಆಸಕ್ತಿಯಿಂದ ಆಲಿಸುತ್ತಿದ್ದಾರೆ. ಅವಳ ಆಕ್ಷೇಪಣೆ ಇಷ್ಟೆ—'ಎಲ್. ಪಿ. ಜಿ. ಗ್ಯಾಸ್' ಏಜೆಂಟನೊಬ್ಬ ಆಕೆಗೆ ಹೊಸ ಗ್ಯಾಸ್ ಜೋಡಿಸಬೇಕಿದ್ದಲ್ಲಿ ಗ್ಯಾಸ್ ಒಲೆಯನ್ನೂ ಕೊಂಡುಕೊಳ್ಳಬೇಕೆಂದು ಒತ್ತಾಯಿಸುತ್ತಿದ್ದಾನೆ. ಅವಳ ಬಳಿಯಲ್ಲಿ ಈ ಮೊದಲೇ ಒಳ್ಳೆಯದೊಂದು ಒಲೆ ಇದೆ. ಪೈಯವರು ತಕ್ಷಣ ಪ್ರತಿಸ್ಪಂದಿಸುತ್ತಾ, ಇದೊಂದು ಮಹತ್ವಪೂರ್ಣ ವಿಚಾರವೆಂಬ ರೀತಿಯಲ್ಲಿ "ಹಾಗೇನು? ಓಹೋ!" ಎಂದು ಕಳಕಳಿಯಿಂದ ನುಡಿದು ಆಕೆಗೆ "ನೀವು ದಯವಿಟ್ಟು ಆ ಗ್ಯಾಸ್ ಏಜೆಂಟನಿಗೆ ಈ ರೀತಿ ತಿಳಿಸಿರಿ—ಅವನು ಮಾಡುತ್ತಿರುವುದು ಅನ್ಯವಹಾರವೆಂದು, ಕಾನೂನಿನ ಉಲ್ಲಂಘನೆಯೆಂದು, ವಿವರಿಸಿರಿ ಮತ್ತು ಈ ಮಾತನ್ನು ನಾನು—ಎಂ. ಆರ್. ಪೈ ಹೇಳಿದೆನೆಂದೂ ತಿಳಿಸಿರಿ."

ಕೆಲವು ದಿನಗಳ ಮೇಲೆ ಮತ್ತೆ ಅವಳದೇ ಕರೆ ಕೇಳಿಸುತ್ತದೆ—ಅದುವಿಟ್ಟ ನಗುವಿನೊಂದಿಗೆ, ಸಂತಸದಿಂದ—"ಧನ್ಯವಾದ ಪೈಯವರೇ! ಅತನಿಗೆ ನಿಮ್ಮ ಹೆಸರಷ್ಟೇ ತಿಳಿಸಿದೆ. ಮತ್ತೆ ಅವನು 'ಚ'ಕಾರವೆತ್ತದೆ ನನ್ನ ಕೆಲಸ ಮಾಡಿಕೊಟ್ಟ."

ಇನ್ನೊಂದು ಬೆಳಗ್ಗೆ, ಪೈಯವರಿಗೆ ಮೇಜರ್ ರಾಮ್ ಗ್ಯಾಬ್ರಿಯವರಿಂದ ಧನ್ಯವಾದ ಸಮರ್ಪಣೆಯ ಪತ್ರ ಬಂದಿರುತ್ತದೆ. ಒಂದು ತಿಂಗಳ ಹಿಂದೆ ಮೇಜರ್‌ರವರು ಪೈಯವರಿಗೊಂದು ಅರ್ಜಿ ಬರೆದಿದ್ದರು.

ಮೂಲ: ಶ್ರೀ ಮೋಹನ್ ಶಿವಾನಂದ ಅವರ "ಚಾಂಪಿಯನ್ ಆಫ್ ದಿ ಕನ್ಸ್ಯೂಮರ್" ಎಂಬ ಇಂಗ್ಲಿಷ್ ಲೇಖನ.

ಅದರಲ್ಲಿ, "ಜಮ್ಮುಕಾಶ್ಮೀರ ರಾಜ್ಯದ ಊಧಮ್‌ಪುರದ ಬ್ಯಾಂಕಿನಿಂದ ಸಿಕಂದರಾಬಾದಿನ ಶಾಖೆಗೆ ವರ್ಗಾಯಿಸಿದ ತಮ್ಮ ಉಳಿತಾಯಖಾತೆಯ ಹಣವನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಬ್ಯಾಂಕಿನ ಮೇನೇಜರರಿಗೆ ಈ ಬಗ್ಗೆ ಹತ್ತು ಬಾರಿ ಪತ್ರಗಳನ್ನು ಬರೆದು ನೆನಪಿಸಿ, ವಿಜ್ಞಾಪನೆ ಮಾಡಿಕೊಂಡರೂ ಪ್ರಯೋಜನವಾಗಿಲ್ಲ" ಎಂದಿತ್ತು. ಕೂಡಲೇ ಪೈಯವರು ಆ ಎರಡೂ ಬ್ಯಾಂಕ್ ಅಧಿಕಾರಿಗಳಿಗೆ ಪತ್ರಗಳನ್ನು ಬರೆದರು—"ನೀವು ಮತ್ತು ನಾವೆಲ್ಲ ಸುರಕ್ಷೆ ಮತ್ತು ಶಾಂತಿಯಿಂದ ಬಾಳುವುದಕ್ಕಾಗಿ ತಮ್ಮ ಪ್ರಾಣಗಳನ್ನೇ ಒತ್ತೆ ಇಟ್ಟಿರುವ ಸಶಸ್ತ್ರ ಸೈನಿಕರಿಗೆ ತೋರಿಸಬೇಕಾದ ಕೃತಜ್ಞತೆ ಖಂಡಿತವಾಗಿಯೂ ಇದಲ್ಲ!"

ತಮ್ಮ ಹಣವು ವರ್ಗಾವಣೆಯಾಗಿ ತಮ್ಮ ಕೈಸೇರಿದ ಮೇಲೆ ಮೇಜರ್ ಗ್ಯಾಬ್ರಿಯವರು ಈ ರೀತಿ ಪತ್ರ ಬರೆದರು—"ನಿಮಗೆ ದೂರು ಸಲ್ಲಿಸಿದಾಗ ನಾನು ಇದೊಂದು ಕೊನೆಯ ಪ್ರಯತ್ನವೆಂದು ಮಾತ್ರ ಭಾವಿಸಿ ತಮ್ಮ ಸಹಾಯವನ್ನು ಕೇಳಿಕೊಂಡಿದ್ದೆ. ನನಗೆ ಒಂದು ಅಕ್ಷರವನ್ನು ಕೂಡ ಬರೆಯಲಾರದೆ ಹೋದ ಬ್ಯಾಂಕ್ ಅಧಿಕಾರಿಗಳು ನನ್ನ ಬಗ್ಗೆ ಇಷ್ಟು ತೀವ್ರಗತಿಯಿಂದ ಗಮನಹರಿಸಿ ಕೆಲಸ ಮಾಡಿಕೊಟ್ಟು ನನ್ನ ಸಮಸ್ಯೆಯನ್ನು ಬಗೆಹರಿಸಿದ್ದನ್ನು ಕಂಡು ಆಶ್ಚರ್ಯವಾಗಿದೆ."

"ಮಂಗಳೂರು ರಂಗ ಪೈಯವರಿಗೆ ಕಾನೂನು ಹಾಗೂ ಯಾರಲ್ಲಿ ದೂರು ಕೊಡತಕ್ಕದ್ದು ಎಂಬುದರ ಸಂಪೂರ್ಣ ಜ್ಞಾನವಿದೆ" ಎಂದು ಎಫ್. ಎಫ್.ಇ ಯ ಹಾಲೀ ಕಾರ್ಯದರ್ಶಿ ಎಸ್. ದಿವಾಕರರು ಹೇಳುತ್ತಾರೆ. ೧೯೮೭ರ ಒಂದು ಪ್ರಸಂಗವನ್ನು ದಿವಾಕರರು ನೆನೆದುಕೊಳ್ಳುತ್ತಾರೆ. "ತರುಣಿ ಅಮಿತಾ ಕಾರ್ನಾಡ್ ಒಬ್ಬಳು ಪದವೀಧರೆ. 'ಯೂನಿಟ್ ಟ್ರಸ್ಟ್ ಆಫ್ ಇಂಡಿಯಾ'ದಲ್ಲಿ ತನಗೆ ಸಿಗಬಹುದಾಗಿದ್ದ ಉದ್ಯೋಗವನ್ನು—ಕೇವಲ ಕಣ್ಣು ಪರೀಕ್ಷೆಯಲ್ಲಿ ಸೋತು ಹೋದುದರಿಂದ—ಕಳೆದುಕೊಂಡಳು. ಆಗ ಪೈಯವರು ಮಧ್ಯ ಪ್ರವೇಶಿಸಿ ಅವಳ ಪರವಹಿಸಿ—ಅಮಿತಾಳಂತಹ ಕಾಂಟಾಕ್ಟ್ ಲೆನ್ಸ್ (ಕಣ್ಣಿನೊಳಗೇ ಇಟ್ಟುಕೊಳ್ಳುವ ಮಸೂರ) ಧರಿಸುವವರಿಗೆ ಪರೀಕ್ಷೆ ನಡೆಸಬೇಕಿದ್ದಲ್ಲಿ, ಎಪ್ಪತ್ತೆರಡು ಗಂಟೆಗಳ ಸಮಯಾವಕಾಶವಿರುವಂತೆ ಮುನ್ಸೂಚನೆಯಿತ್ತು, ಆ ಬಳಿಕ ಪರೀಕ್ಷೆ ನಡೆಸಬೇಕೆಂಬ ಕಾನೂನಿನ ಅಂಶವನ್ನು ಸಂಬಂಧಪಟ್ಟ ಪರೀಕ್ಷಕರಿಗೆ ಮತ್ತು ಅಧಿಕಾರಿಗಳಿಗೆ ನೆನಪಿಸಿ ಮನವರಿಕೆ ಮಾಡಿಸಿದರು. ಏಕೆಂದರೆ ಕಣ್ಣು ಪರೀಕ್ಷೆ ನಡೆಸುವ ಮೊದಲು ಅಷ್ಟು ಕಾಲ ಕಣ್ಣಿಗೆ ವಿಶ್ರಾಂತಿ ನೀಡುವ ಅಗತ್ಯವಿದೆ. ಅವರಂತೆ ಮತ್ತೊಮ್ಮೆ ಅಮಿತಾಳ ಕಣ್ಣಿನ ಪರೀಕ್ಷೆ ನಡೆಸಿದಾಗ, ಅವಳು ಅದರಲ್ಲಿ ತೇರ್ಗಡೆಯಾದಳು ಮತ್ತು ಅವಳಿಗೆ ಉದ್ಯೋಗವೂ ದೊರಕಿತು.

ಹೊಣೆಗಾರಿಕೆ ಮರೆತಿರುವ ಹಲವು ಬೃಹತ್ ನೌಕರಶಾಹಿಗಳಾದ ದೂರವಾಣಿ ಇಲಾಖೆ, ಬ್ಯಾಂಕ್‌ಗಳು, ಯುಟಿಐ, ದ್ರವರೂಪದ ಪೆಟ್ರೋಲಿಯಂ ಗ್ಯಾಸ್ ಅರ್ಥಾತ್ ಎಲ್.ಪಿ.ಜಿ. ಗ್ಯಾಸ್ ಸಿಲಿಂಡರ್ ವಿತರಣಾಧಿಕಾರಿಗಳು, ಅಲ್ಲದೆ ಸ್ವತಂತ್ರ ವ್ಯಾಪಾರೀ ಸಂಸ್ಥೆಗಳ ವಿರುದ್ಧ, ಗ್ರಾಹಕರ, ಉಪಭೋಕ್ತರ ಹಕ್ಕುಬಾಧ್ಯತೆಗಳಿಗಾಗಿ ಶ್ರೀರಂಗ ಪೈಯವರು ೪ ದಶಕಗಳಿಗೂ ಮೇಲ್ಪಟ್ಟು

ಹೋರಾಟ ನಡೆಸಿದ್ದಾರೆ. ಇಂಥ ವ್ಯಕ್ತಿಯನ್ನು ನ್ಯಾಯದೂತನೆಂದು, ಎಂದೂ ಬಳಲಿಕೆ ಇಲ್ಲದ, ಅವಿಶ್ರಾಂತ ಕಾರ್ಯ ಪಟುವೆಂದು ಮುಂಬಯಿಯ ಜನ ಹೊಗಳಿದ್ದರಲ್ಲಿ ಆಶ್ಚರ್ಯವಿಲ್ಲ. ಪೈಯವರ ಪೂರ್ಣ ಹೆಸರು—ಮಂಗಳೂರು ರಂಗ ಪೈ. ಇವರೊಬ್ಬ ಅಸಾಧಾರಣ ಛಲವಂತರು. ನಿಪುಣ ಕಾರ್ಯಸಾಧಕರು, ಶಾಂತಮನಸ್ಥಿತಿಯ, ನವಿರಾದ ತಿಳಿಹಾಸ್ಯ ಬೆರೆತ ಮೃದು ಭಾಷಿಗಳು. ೭೪ ವರ್ಷದ ವೃದ್ಧಾಪ್ಯಕ್ಕೆ ಕಾಲಿಡುತ್ತಿದ್ದರೂ ಮಗುವಿನ ತುಂಬುಕೆನ್ನೆಯ ಶ್ರೀ ಎಂ. ರಂಗ ಪೈಯವರು ತರುಣರನ್ನೂ ನಾಚಿಸುವ ಕಾರ್ಯಪಟುಗಳು. ಸ್ವಾರ್ಥರಹಿತವಾದ, ಪ್ರತಿಫಲಾಪೇಕ್ಷೆ ಇಲ್ಲದೆ ದುಡಿವ, ಶುಲ್ಕರಹಿತ ಸೇವಾಸಂಸ್ಥೆಗಳ ಪ್ರಬಲ ಪ್ರತಿಪಾದಕರು. ಇವರು ಇತರ ಜನನಾಯಕರು ನಡೆಸುವ ಮತಪ್ರದರ್ಶನ, ಬಹಿಷ್ಕಾರ, 'ಬಂದ್' ಚಳುವಳಿಗಳೆಲ್ಲ ಸಂವಿಧಾನ ಬಾಹಿರವಾದವುಗಳೆಂದೂ, ದೇಶದ ಪ್ರಗತಿಗೆ ಮಾರಕವಾದ ಕ್ರಮಗಳೆಂದೂ ವಿವರಿಸುತ್ತಾರೆ, ಅಂಥ ಕಾರ್ಯಗಳನ್ನು ಬಲವಾಗಿ ವಿರೋಧಿಸುತ್ತಾರೆ. ಅವರ ಪ್ರಿಯವಾದ ಮತ್ತು ನಿಜವಾದ ಅಸ್ತ್ರವೆಂದರೆ—ಸ್ನೇಹಪರ ನಡವಳಿಕೆ, ಶತ್ರುಗಳನ್ನೂ ಮಿತ್ರರಾಗಿಸಬಲ್ಲ, ಭಾವ ಪರವಶಗೊಳಿಸಬಲ್ಲ, ಒಡಂಬಡಿಸಬಲ್ಲ ವಾಕ್ ಚಾತುರ್ಯ, ವಾತಾವರಣವನ್ನು ತಿಳಿಗೊಳಿಸಬಲ್ಲ ಸುರಸ, ಸರಳ ಬರವಣಿಗೆ ಮತ್ತು ನ್ಯಾಯಪರ ಧೋರಣೆ.

ಲೇಖನಿಯ ಸಾಮರ್ಥ್ಯದ ಬಗೆಗೆ ಪೈಯವರ ವಿಶ್ವಾಸ ಕುಡಿಯೊಡೆದುದು ಅವರು ಪತ್ರಿಕೋದ್ಯೋಗವನ್ನು ಪ್ರಾರಂಭಿಸಿದ ಮೊದಲ ವರ್ಷಗಳಲ್ಲಿ. ಅಮೇರಿಕದ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ, 'ಪತ್ರಿಕೋದ್ಯಮ' ವಿಷಯದಲ್ಲಿ ಎಂ. ಎ. ಪದವಿ ಗಳಿಸಲು, ೧೯೫೩ರಲ್ಲಿ, ಅಲ್ಲಿಗೆ ಹೋಗುವ ಮೊದಲು, ರಂಗ ಪೈಯವರು ಮುಂಬಯಿಯ 'ಟೈಮ್ಸ್ ಆಫ್ ಇಂಡಿಯಾ' ದಿನಪತ್ರಿಕೆಯ ಉಪಸಂಪಾದಕರಾಗಿ ಒಂದೂವರೆ ವರ್ಷ ದುಡಿದಿದ್ದರು. 'ಲಾಸ್‌ಏಂಜಲ್ಸ್'ನಲ್ಲಿ ಪದವಿ ಗಳಿಸಿದ ಮೇಲೆ ಮುಂದಿನ ವರ್ಷ—ಕ್ಯಾಲಿಫೋರ್ನಿಯದ ಚಿಕ್ಕದೊಂದು ನಗರ ದೈನಿಕ 'ಕಾರ್ಲ್ಸ್‌ಬ್ಯಾಡ್ ಜರ್ನಲ್' ಎಂಬ ಸಮಾಚಾರ ಪತ್ರಿಕೆಯಲ್ಲಿ ಕೆಲಸ ಮಾಡಿದರು. ಅದರಲ್ಲಿ ಸುದ್ದಿ ಸಂಪಾದಕ, ವರದಿಗಾರ, ಛಾಯಾಗ್ರಾಹಕ, 'ಪ್ರೂಫ್' (ಕರಡು) ತಿದ್ದುವವ, ಕೊನೆಗೆ ಸಂದರ್ಭ ಒದಗಿ ಬಂದರೆ ಮೊಳೆ ಜೋಡಿಸುವವರೆಗಿನ ಕೆಲಸಗಳನ್ನೂ ನಿರ್ವಹಿಸುತ್ತಿದ್ದರು. ಈ ಕಾಲದಲ್ಲಿ ಪೈಯವರು 'ಕಾರ್ಲ್ಸ್‌ಬ್ಯಾಡ್' ನಗರದ ನಲವತ್ತೆರಡು ಸಾರ್ವಜನಿಕ ಸೇವಾ ಸಂಘಟನೆಗಳ ಕಾರ್ಯಕ್ಷಮತೆಯ ಪ್ರತ್ಯಕ್ಷದರ್ಶಿಯಾಗಿ, ಅವುಗಳ ವರದಿ ಒಪ್ಪಿಸುತ್ತಿದ್ದ ಸಂದರ್ಭದಲ್ಲಿ, ಸಾಮಾನ್ಯ ಅಮೇರಿಕನ್ನರು ಕೂಡ ಸ್ವಯಂ ಪ್ರೇರಿತರಾಗಿ ಮಾಡುತ್ತಿದ್ದ ಸ್ವಾರ್ಥರಹಿತ ಸೇವಾಕಾರ್ಯಗಳಿಂದ ಅತ್ಯಂತ ಪ್ರಭಾವಿತರಾದರು.

೧೯೫೫ರಲ್ಲಿ ಭಾರತಕ್ಕೆ ಮರಳಿ ಬಂದು ವಿಮಾ ಕಂಪೆನಿಯೊಂದರಲ್ಲಿ ಪ್ರಚಾರಕನ ಕೆಲಸಕ್ಕೆ ಸೇರಿದರು. ಆದರೆ ೧೯೫೬ರಲ್ಲಿ ವಿಮಾ ಕಂಪೆನಿಗಳ ರಾಷ್ಟ್ರೀಕರಣವಾದಾಗ ಕೆಲಸಕ್ಕೆ ರಾಜೀನಾಮೆ ನೀಡಿದರು. ಏಕೆಂದು

ಕೇಳಿದರೆ ನಾನು ಸರಕಾರೀ ಚಾಕ್ರೀದಾರನಾಗಲು ಬಯಸುವುದಿಲ್ಲವೆಂದು ತನ್ನ ತ್ಯಾಗಪತ್ರ ನೀಡಿಕೆಗೆ ಕಾರಣ ತಿಳಿಸುತ್ತಾರೆ.

ಮುಂದೆ ಕೆಲವು ತಿಂಗಳ ಮೇಲೆ ಹೊಸದಾಗಿ ರೂಪಿಸಲಾದ ಮುಕ್ತ ಉದ್ಯಮಗಳ ಸಾರ್ವಜನಿಕ ಚರ್ಚಾ ವೇದಿಕೆ ಎಫ್.ಎಫ್.ಇ.ಯಲ್ಲಿ ಸಹಕಾರ್ಯದರ್ಶಿಯಾಗಿ ರಂಗಪೈಯವರು ನೇಮಕಗೊಂಡರು. ಈ ಸಂಘಟನೆಯು ಜನತೆಯಲ್ಲಿ ಮುಕ್ತ ಮಾರುಕಟ್ಟೆಯ ಬಗ್ಗೆ ತಿಳುವಳಿಕೆ ಮೂಡಿಸುವುದು ಮತ್ತು ಮುಕ್ತ ವ್ಯಾಪಾರ ಮತ್ತು ಆರ್ಥಿಕ ವ್ಯವಹಾರಗಳಿಂದ ಗ್ರಾಹಕರಿಗಾಗುವ ಪ್ರಯೋಜನದ ಬಗ್ಗೆ, ಅವುಗಳ ಅವಶ್ಯಕತೆಯ ಬಗ್ಗೆಯೂ ತಿಳಿಯಪಡಿಸುವುದು—ಇವೇ ಮುಂತಾದ ಸರ್ವಹಿತ ಕಾರ್ಯಕ್ರಮಗಳನ್ನು ಹಮ್ಮಿಕೊಂಡ ಸಂಸ್ಥೆಯಾಗಿತ್ತು. ೧೯೭೬ರಲ್ಲಿ, ಶ್ರೀ ಪೈಯವರು ತಾನೊಬ್ಬ ಲೇಖಕನಾಗಬೇಕೆಂದು, ವ್ಯಾಪಾರ ಉದ್ದಿಮೆಗಳ ಸಲಹೆಗಾರನಾಗಬೇಕೆಂದು ನಿಶ್ಚಯಿಸಿ ಎಫ್. ಎಫ್. ಇ. ಸಂಸ್ಥೆಯ ಉದ್ಯೋಗವನ್ನು ಬಿಟ್ಟು ಹೊರಬಂದರು. ಹಾಗಿದ್ದರೂ ಅವರು ಈ ಸಂಸ್ಥೆಯ ಗೌರವ ಉಪಾಧ್ಯಕ್ಷರಾಗಿ ಉಳಿದಿದ್ದಾರೆ ಮತ್ತು ಇಂದಿಗೂ ಪ್ರತಿ ದಿನ ಒಂದು ಗಂಟೆಯಷ್ಟು ಕಾಲ ಮುಂಬಯಿಯ ಎಫ್. ಎಫ್. ಇ.ಯ ಪ್ರಧಾನ ಕಛೇರಿಯಲ್ಲಿ ಕರ್ತವ್ಯನಿರತರಾಗಿರುತ್ತಾರೆ—"ಈ ಕೆಲಸ ನನ್ನ ಜೀವನದ ಮುಖ್ಯ ಗುರಿಯಾದ್ದರಿಂದ ನನ್ನ ಅಂತರಂಗಕ್ಕೆ ಅತಿ ಪ್ರಿಯವಾಗಿದೆ" ಎಂದೆನ್ನುತ್ತಾರೆ ಪೈಗಳು.

ಕಛೇರಿಯಲ್ಲಿ ಪ್ರತಿನಿತ್ಯವೆಂಬಂತೆ, ಬೆಳಗಿನ ಹೊತ್ತು ಒಂದು ಗಂಟೆಯೊಳಗೆ ಕನಿಷ್ಠ ಒಂದು ಡಜನ್ನಿನಷ್ಟು ದೂರವಾಣಿ ಕರೆಗಳಿಗೆ ಉತ್ತರಿಸುತ್ತಾರೆ. ಹೆಚ್ಚು ಕಮ್ಮಿ ಒಂದಿಪ್ಪತ್ತೈದು ದೂರು ಅರ್ಜಿಗಳಿಗೆ ಪ್ರತ್ಯುತ್ತರ ಬರೆಯಿಸುತ್ತಾರೆ. ಕಛೇರಿಯ ಪ್ರಾಮುಖ್ಯ ಪತ್ರವ್ಯವಹಾರಗಳ ಕಡತಗಳನ್ನು ಅಂದಿನ ತಾರೀಕಿನವರೆಗೆ ಸಂಪೂರ್ಣಗೊಳಿಸುತ್ತಾರೆ. ಈ ರೀತಿ ಪ್ರಶ್ನೋತ್ತರ ಮತ್ತು ಪತ್ರ ವ್ಯವಹಾರಗಳಲ್ಲಿ ಅವರು ಅನುಸರಿಸುವ ಶಿಸ್ತು, ಸಂಯಮ, ಸಮರ್ಪಕತೆಗಳೇ ಅಲ್ಲದೆ ಸರಕಾರವು ಹೊರಡಿಸುವ ಶ್ವೇತಪತ್ರಗಳನ್ನು ಪ್ರತಿ ದಿನ, ಆಗಿಂದಾಗ್ಗೆ ಸಂಶೋಧಿಸುವ ಹವ್ಯಾಸವೂ ಸೇರಿ, ಪೈಯವರ ಆಶ್ಚರ್ಯಕರ ಸಾಮರ್ಥ್ಯ ಮತ್ತು ಸಫಲತೆಗಳಿಗೆ ಕಾರಣಗಳೆನ್ನಬಹುದು. ಜನಸಾಮಾನ್ಯರು ಎದುರಿಸುವ, ದಿನನಿತ್ಯದ ಹಲವಾರು ಸಮಸ್ಯೆ ಸಂಕಷ್ಟಗಳಿಗೆ ಪರಿಹಾರ ಕಂಡುಹಿಡಿಯಲು ಪೈಯವರಿಗೆ ಸಾಧ್ಯವಾಗುವುದರ ಹಿನ್ನೆಲೆ—ಹಳೆಯ ಮತ್ತು ಹೊಸ ಕಾನೂನು ಮತ್ತು ಅವುಗಳ ನಿಯಮಾವಳಿಗಳ ಆಯಾ ದಿನದವರೆಗಿನ ವರದಿಗಳ ಪರಿಪೂರ್ಣಜ್ಞಾನ ಅವರಿಗಿರುವುದೇ ಆಗಿದೆ.

ಕರ್ನಾಟಕದ ಸಿದ್ಧಾಪುರದ ರಾಧಾಬಾಯಿ ಪ್ರಭು ಎಂಬಾಕೆಯ ಪತಿ ನಾಪತ್ತೆಯಾದ ಇಪ್ಪತ್ತು ವರ್ಷಗಳ ನಂತರ, ಆತನ ಉಳಿತಾಯ ಖಾತೆಯಲ್ಲಿದ್ದ ಸಣ್ಣ ಮೊತ್ತವನ್ನು ಪಡೆದುಕೊಳ್ಳಲು ಆಕೆಗೆ ಬ್ಯಾಂಕಿನ ಅಧಿಕಾರಿಗಳ ಒಪ್ಪಿಗೆ ಸಿಗದೇಹೋಯಿತು. ಆಮೇಲೆ ೧೯೭೯ರಲ್ಲಿ ರಾಧಾಬಾಯಿಯ ಪರಿಚಿತರೊಬ್ಬರು ಈ ವಿಚಾರವನ್ನು ಪೈಯವರಿಗೆ ತಿಳಿಸಿದಾಗ, ಪೈಯವರು ಕಾನೂನಿನ ಈ ಒಂದು ಅಂಶವನ್ನು ಶೋಧಿಸಿ ತೆಗೆದರು.

ಅದೇನೆಂದರೆ—"ಒಬ್ಬ ವ್ಯಕ್ತಿ ಏಳು ವರ್ಷಗಳವರೆಗೂ ನಾಪತ್ತೆಯಾಗಿದ್ದರೆ ಆತನನ್ನು ಮೃತವ್ಯಕ್ತಿ ಎಂದು ಪರಿಗಣಿಸಬಹುದು" ಎಂಬುದಾಗಿದೆ. ಈ ಮಾಹಿತಿಯನ್ನೇ ಅಸ್ತ್ರವಾಗಿಟ್ಟುಕೊಂಡು ಭಾರತೀಯ ರಿಸರ್ವ್ ಬ್ಯಾಂಕಿನ (ಆರ್.ಬಿ.ಐ.) ಅಧಿಕಾರಿಗಳಿಂದಲೇ ರಾಧಾಬಾಯಿಪ್ರಭುವಿಗೆ, ಆಕೆಗೆ ಸಲ್ಲಬೇಕಾಗಿದ್ದ, ಅವಳ ಪತಿಯ ಧನವನ್ನು ಕೊಡಿಸಿದ್ದೇ ಅಲ್ಲದೆ, ಅದರ ದೃಢೀಕರಣ ಪತ್ರವನ್ನು ತನಗೆ ಕಳುಹಿಸಿಕೊಡುವಂತೆ ಮಾಡಿದರು!

ಅಖಿಲ ಭಾರತ ಬ್ಯಾಂಕ್ ಠೇವಣಿದಾರರ ಸಂಘಟನೆಯ ಗೌರವ ಕಾರ್ಯದರ್ಶಿ ಆಗಿರುವ ಪೈಯವರಿಗೆ, ರಾಧಾಬಾಯಿಯಂತೆ, ತಮ್ಮ ಮೃತಪತಿಗಳ ಸಂಚಿತ ಹಣವನ್ನು ಪಡೆದುಕೊಳ್ಳಲು ಅಸಮರ್ಥರಾದ ಮತ್ತು ಅದರಿಂದಾಗಿ ಕಷ್ಟಗಳನ್ನೆದುರಿಸುತ್ತಿರುವ ಹಲವಾರು ಸ್ತ್ರೀಯರಿದ್ದಾರೆಂಬುದು ತಿಳಿದಿತ್ತು. ರಿಸರ್ವ್ ಬ್ಯಾಂಕಿನ ೧೯೮೦ರ ವರದಿಯ ಪ್ರಕಾರ ಭಾರತೀಯ ಬ್ಯಾಂಕುಗಳಲ್ಲಿ ಮೃತಪಟ್ಟ ಠೇವಣಿದಾರರ ೧೭ ಕೋಟಿ ರೂ.ಗಳ ಖಾತೆಗಳನ್ನು ಮುಚ್ಚಿಹಾಕಿರುವುದರ ವಾಸ್ತವಾಂಶವು—ಅವರ ಪತ್ನಿಯರಿಗೆ ಅವುಗಳ ಫಲಾನುಭವವನ್ನು ನೀಡಲು ನಿರಾಕರಿಸುವುದೇ ಎಂಬುದು ಪೈಯವರಿಗೆ ತಿಳಿದು ಹೋಯಿತು.

ರಾಧಾಬಾಯಿ ಪ್ರಭುರವರ ಸನ್ನಿವೇಶ, ಸಂದರ್ಭಗಳ ವಿದ್ಯಮಾನದಿಂದಾಗಿ ಪೈಯವರು ರಿಸರ್ವ್ ಬ್ಯಾಂಕಿಗೆ ಈ ರೀತಿ ಸಲಹೆ ಮಾಡಿದರು—ಎಲ್ಲ ಬ್ಯಾಂಕುಗಳೂ ತಮ್ಮ ಠೇವಣಿದಾರರಿಗೆ—ತಮ್ಮ ಖಾತೆಯ ಮರಣೋತ್ತರ ಉತ್ತರಾಧಿಕಾರಿ ಅರ್ಥಾತ್ 'ನಾಮಿನಿ'ಯ ಹೆಸರನ್ನು ಸೂಚಿಸುವ—ಅಧಿಕಾರವನ್ನು ಕೊಡಬೇಕೆಂದೂ, ಅಕಸ್ಮಾತ್ ಠೇವಣಿದಾರನು ಮರಣ ಹೊಂದಿದರೆ ತನ್ನಿಂದ ತಾನೇ ಆ ಠೇವಣಿಯ ಮೊತ್ತವು ಆ 'ನಾಮಿನಿ'ಯ ಅಧಿಕಾರ ಕ್ಕೊಳಪಡುವಂತಹ ನಿಯಮವನ್ನು ಜಾರಿಗೊಳಿಸಬೇಕೆಂದೂ ತಿಳಿಸಿದರು. ಬ್ಯಾಂಕುಗಳನ್ನು ಇದಕ್ಕೆ ಒಡಂಬಡಿಸುವುದು ಅಷ್ಟೊಂದು ಸುಲಭವಾಗಿರಲಿಲ್ಲ. ಇದಕ್ಕೆ ವಿರೋಧ ವ್ಯಕ್ತಪಡಿಸಿದವರು ಬ್ಯಾಂಕ್ ಅಧಿಕಾರಿಗಳು ಮಾತ್ರವೇ ಆಗಿರಲಿಲ್ಲ ಅನುಕ್ರಮವಾಗಿ ಚುನಾಯಿತರಾಗಿ ಬಂದ ಸರಕಾರಗಳು ಕೂಡ. ಒಪ್ಪುವುದು ಬಿಡಿ, ಬಹಳ ಹಳೆಯದಾದ ಬ್ಯಾಂಕ್ ಕಾನೂನು ಸೂತ್ರಗಳ ತಿದ್ದುಪಡಿಯ ಬಗ್ಗೆ ಗಂಭೀರವಾಗಿ ಚಿಂತನೆ ಕೂಡ ಮಾಡದೆಹೋದರು. ಆದರೆ ಪೈಯವರು ತಾಳ್ಮೆ ಮತ್ತು ದೃಢ ಸಂಕಲ್ಪದಿಂದ ಹಲವಾರು ವರ್ಷಗಳ ಕಾಲ ತಮ್ಮ ಪತ್ರಗಳ ಅಸ್ತ್ರದಿಂದ ಹೋರಾಟ ನಡೆಸುತ್ತಾ ಹೋದರು. ಹಲವೊಮ್ಮೆ ಭಾರತದ ರಾಜಕೀಯ ರಂಗಸ್ಥಳದ ಪರದೆಯ ಹಿಂದೆ ಕೆಲಸ ಮಾಡುತ್ತಾ ರಿಸರ್ವ್ ಬ್ಯಾಂಕ್‌ಗೆ, ಭಾರತೀಯ ಬ್ಯಾಂಕುಗಳ ಒಕ್ಕೂಟಗಳಿಗೆ, ಅರ್ಥ ಸಚಿವಾಲಯಕ್ಕೆ ಕೂಡ ಬರೆದು ಅವರ ನಿರ್ಲಕ್ಷ್ಯ ಮತ್ತು ಹೊಣೆಗೇಡಿತನದ ಪರಿಣಾಮಗಳ ಕಡೆಗೆ ಗಮನ ಹರಿಸುವಂತೆ ಕೇಳಿಕೊಂಡರು. ಹೆಚ್ಚಿನ ಸಂದರ್ಭಗಳಲ್ಲಿ 'ನಾಮಿನಿ'ಯ ಪ್ರಯೋಜನವು ಸ್ತ್ರೀಯರಿಗೇ ಸಿಗುವುದಾದ್ದರಿಂದ ಸ್ತ್ರೀ ಸಮುದಾಯದ ಸಂಘ, ಸಂಸ್ಥೆಗಳಿಗೂ ಪತ್ರಗಳನ್ನು ಬರೆದು ಸಂಬಂಧಪಟ್ಟವರು ಈ ಬಗ್ಗೆ ಎಚ್ಚರಗೊಳ್ಳುವಂತೆ,

ಚಿಂತಿಸುವಂತೆ ಪ್ರೇರೇಪಿಸಿದರು. ಅಂತೂ ಕೊನೆಗೊಮ್ಮೆ ೧೯೮೬ರಲ್ಲಿ ಪೈಯವರ ಸಲಹೆಯನ್ನು ಅಂಗೀಕರಿಸಲಾಯಿತು.

ರಂಗ ಪೈಯವರು ತಮ್ಮ ಲೇಖನಿಯ ಮೊದಲ ಪ್ರಹಾರವನ್ನು ೧೯೫೭ರಲ್ಲಿ ಉಪಭೋಕ್ತೃಗಳ ಹಕ್ಕು ಬಾಧ್ಯತೆಗಾಗಿ ಪ್ರಯೋಗಿಸಿದರು. ಅದು ಹೀಗಾಯಿತು—ಜರ್ಮನಿಯಲ್ಲಿದ್ದ ತಮ್ಮ ಮಿತ್ರನಿಗೆ ಪೈಯವರು ಬರೆದ ಒಂದು ಪತ್ರವು—ಅದರಲ್ಲಿ ಅಂಟಿಸಲಾಗಿದ್ದ ಅಂಚೆ ಚೀಟಿಯನ್ನು ಯಾರೋ ತೆಗೆದುಬಿಟ್ಟದ್ದರಿಂದ—ಹಿಂದಿರುಗಿ ಅವರ ಕೈಗೇ ಬಂದುಸೇರಿತು. ವಿಚಾರಿಸಿದಾಗ ಅಂಚೆ ಕಛೇರಿಯಲ್ಲಿ ಈ ಕೆಳಗಿನ ಮಾಹಿತಿ ದೊರಕಿತು—"ನಿಮ್ಮ ಅಂಚೆ ಚೀಟಿಗಳು ಕಳುವಾಗುವುದನ್ನು ತಪ್ಪಿಸಲು ಅವನ್ನು ನಿಮ್ಮ ಸಮಕ್ಷಮದಲ್ಲೇ ಮುದ್ರೆಯೊತ್ತಿ ಕಳುಹಿಸಬಹುದು."

'ದಿ ಟೈಮ್ಸ್' ಪತ್ರಿಕೆಗೆ ಈ ಘಟನೆಯ ವಿವರಗಳನ್ನು ಪತ್ರಮುಖೇನ ತಿಳಿಸಿದಾಗ ಇದು ಎಲ್ಲೆಡೆ ಪ್ರಚಾರವಾಗಿ, ಕಳವಾದ ಅಂಚೆ ಚೀಟಿಗಳ ಬಗ್ಗೆ ತನಿಖಾಕ್ರಮ ಪ್ರಾರಂಭಿಸದೆ ಬೇರೆ ವಿಧಿ ಇಲ್ಲವಾಯಿತು. ಈ ರೀತಿ ತಮ್ಮ ಪ್ರಯತ್ನ ಯಶಸ್ವಿಯಾದುದರಿಂದ ಪೈಯವರಿಗೆ ಒಂದು ವಿಚಾರವು ಖಾತ್ರಿಯಾಯಿತು—ಸಮಾಚಾರ ಪತ್ರಿಕೆಗಳಿಗೆ ಪತ್ರ ಬರೆಯುವುದು—"ದೇಶದ, ಜನತೆಯ, ಯಾವುದೇ ರಂಗವಿರಲಿ, ಪ್ರಗತಿ ಉಂಟುಮಾಡಲು, ಅಥವಾ ಕ್ರಾಂತಿಕಾರಕ ಬದಲಾವಣೆ ತರಲು, ಶಾಂತ ರೀತಿಯ ಪರಿಣಾಮಕಾರಿ ಮಾರ್ಗ"—ಎಂಬುದರಲ್ಲಿ ಅವರಿಗೆ ಸಂಶಯ ಉಳಿಯಲಿಲ್ಲ. ಮೂಡಿಬಂದ ಆತ್ಮವಿಶ್ವಾಸದಿಂದಾಗಿ ತಮ್ಮ ಲೇಖನ ಶಕ್ತಿಯನ್ನು ಪತ್ರಿಕೋದ್ಯಮದಲ್ಲಿ ತೊಡಗಿಸುವೆಡೆಗೆ, ತನ್ನ ಸಾಮರ್ಥ್ಯ ಹೆಚ್ಚಿಸಿ ಬಳಗಿಸುವ ಕಡೆಗೆ ಆಸಕ್ತಿ ತಳೆದರು. ಅಂದಿನಿಂದ ಮುಂದೆ ಪೈಯವರು ವರ್ಷಕ್ಕೆ ಕನಿಷ್ಠ ೩೫ರಂತೆ, ೪ ದಶಕಗಳ ಕಾಲದಲ್ಲಿ ಕಡಿಮೆಯೆಂದರೂ ಒಂದು ಸಾವಿರಕ್ಕೂ ಮೇಲ್ಪಟ್ಟು ಪತ್ರಗಳನ್ನು 'ಸಂಪಾದಕರಿಗೆ ಪತ್ರಗಳು' ವಿಭಾಗದಲ್ಲಿ ಪ್ರಕಾಶಪಡಿಸಿದ್ದಾರೆ.

ಶ್ರೀ ರಂಗ ಪೈಯವರು ದೂರವಾಣಿ ಇಲಾಖೆಯ ಕುಂದುಕೊರತೆ, ಕೆಳಮಟ್ಟದ ಕಾರ್ಯನಿರ್ವಹಣೆಗಳ ಮೇಲೆ ವಿಜಯ ಸಾಧಿಸಿದ ಹಲವಾರು ಸಂಗತಿಗಳು ನಂಬಲಿಕ್ಕಾಗದ ದಂತಕಥೆಗಳಂತಾಗಿವೆ. ೧೯೮೩ರಲ್ಲಿ ತಮ್ಮ ಮನೆಗೆ ಪ್ರಥಮ ಬಾರಿ ದೂರವಾಣಿ ಉಪಕರಣವನ್ನು ಅಳವಡಿಸಿದಾಗ ಒಂದೇ ಸಮನೆ ಕರೆಗಂಟೆಯ ಸರಣಿಯೇ ಪ್ರಾರಂಭವಾಯಿತು. ಕರೆ ನೀಡಿದವರೆಲ್ಲ ರೈಲು ಸಂಚಾರದ ಮಾಹಿತಿ ಕೇಳುವವರೇ ಆಗಿದ್ದರು. ರಂಗ ಪೈಯವರು ದೂರವಾಣಿಯ ಉಪಭೋಕ್ತೃಗಳ ದೂರುಗಳಿಗೆ [ಹೆಚ್ಚಾಗಿ ಬಿಲ್ ಮಾಡಲಾಗಿದೆಯೆಂದೂ ತಮಗಾದ ಅನ್ಯಾಯವನ್ನು ಪರಿಹರಿಸಬೇಕೆಂದೂ ಕೇಳಿಕೊಂಡಾಗಲೆಲ್ಲ] ಸ್ಪಂದಿಸಿ ಸಹಾಯ ಮಾಡುತ್ತಿರುವುದರಿಂದ—ತಮಗಾಗುತ್ತಿರುವ ಕಿರುಕುಳ, ಅಪಮಾನ, ತೇಜೋವಧೆಗಳಿಂದ—ಕ್ಷುದ್ರರಾದ ದೂರವಾಣಿ ಕರ್ಮಚಾರಿಗಳು ಉದ್ದೇಶಪೂರ್ವಕವಾಗಿ ಅದುವರೆಗೂ ಮುಂಬಯಿಯ ದಾದರ್ ರೈಲು ನಿಲ್ದಾಣದ್ದಾಗಿದ್ದ ದೂರವಾಣಿ ಸಂಖ್ಯೆಯನ್ನು ಅವರ ಮನೆಯ ಉಪಕರಣಕ್ಕೆ ತಗುಲಿಸಿದ್ದರು. ತಕ್ಷಣ ಪೈಯವರು ಪ್ರತಿಪ್ರಹಾರ ಮಾಡಿದರು. ತಮ್ಮ ಪುತ್ರ ಶ್ಯಾಮಸುಂದರ

ನನ್ನ ದೂರವಾಣಿ ಉಪಕರಣದ ಬಳಿಯಲ್ಲೇ ಕುಳ್ಳಿರಿಸಿ ಈ ಸರಣಿ ಕರೆಗಳಿಗೆ ಶಾಂತವಾಗಿ ನಮ್ರತೆಯಿಂದ ಉತ್ತರಿಸಲು ನೇಮಿಸಿದರು. "ರೈಲು ನಿಲ್ದಾಣದ ಸಂಖ್ಯೆ ಬದಲಾಗಿರುವುದೆಂದೂ, ಸರಿಯಾದ ಮಾಹಿತಿಗೆ ಈ "ಕೆಲವು" ಸಂಖ್ಯೆಗಳಿಗೆ 'ಡಯಲ್' ಮಾಡಬಹುದೆಂದೂ" ತಿಳಿಸಬೇಕೆಂದು ತಮ್ಮ ಮಗನಿಗೆ ತಿಳಿಸಿದರು. ವಾಸ್ತವವಾಗಿ ಆ "ಕೆಲವು" ಸಂಖ್ಯೆಗಳು ದೂರವಾಣಿ ಸಂಪರ್ಕ ಖಾತೆಯ ಉನ್ನತ ಅಧಿಕಾರಿಗಳ ಮನೆ ಮತ್ತು ಕಛೇರಿಗಳವು. ಒಂದೆರಡೇ ದಿನಗಳಲ್ಲಿ ಇಲಾಖೆಯ ಜನರಲ್ ಮೇನೇಜರರಿಂದ ಕ್ಷಮೆ ಕೋರುವ ಪತ್ರವೂ ಹೊಸ ದೂರವಾಣಿ ಸಂಖ್ಯೆಯೂ ಪೈಯವರ ಕೈ ಸೇರಿದುವು!

ಮತ್ತೆ ೧೯೮೩ರಲ್ಲಿ ಒಂದು ದಿನ ಪೈಯವರ ದೂರವಾಣಿ ಸ್ತಬ್ಧಗೊಂಡಿತು—ಇತರ ಎಷ್ಟೋ ಜನರ ದೂರವಾಣಿ ಕೆಡುವಂತೆ—ಪೈಯವರು ಆ ಬಗ್ಗೆ ದೂರು ಕೊಟ್ಟರು. ಫಲಿತಾಂಶವೇನೂ ಹೊರಡಲಿಲ್ಲ. ಕೂಡಲೇ ಅವರಿಗೆ ಹಿಂದೆ ತಾವೊಮ್ಮೆ 'ಭಾರತೀಯ ದೂರ ಸಂಪರ್ಕ ವಿಭಾಗದ ಅಧಿನಿಯಮ (ಇಂಡಿಯನ್ ಟೆಲಿಗ್ರಾಫ್ ಆಕ್ಟ್)ಗಳ ಒಂದು ಮೂಲಗ್ರಂಥವನ್ನು ಪರಿಶೋಧಿಸುತ್ತಿದ್ದಾಗ ಅಕಸ್ಮಾತ್ತಾಗಿ ಕಣ್ಣಿಗೆ ಬಿದ್ದ ನಿಯಮ ಸಂಖ್ಯೆ '೪೧೨'ರ ನೆನಪಾಯಿತು. ಅದರ ಪ್ರಕಾರ ದೂರವಾಣಿ ಸಂಪರ್ಕಗಳ ವಿಭಾಗೀಯ ಇಂಜಿನಿಯರರ ಕರ್ತವ್ಯಗಳೇನೆಂಬುದು ಅದರಲ್ಲಿ ಉಕ್ತವಾಗಿದ್ದುವು. ಅದರಂತೆ ದೂರವಾಣಿಯ ಉಪಕರಣ, ಸಲಕರಣೆಗಳನ್ನು ಸುಸ್ಥಿತಿಯಲ್ಲಿರುವಂತೆ ನೋಡಿಕೊಳ್ಳುವುದು ಅವರ ಹೊಣೆಗಾರಿಕೆ ಮತ್ತು ಆವಶ್ಯಕ ಕರ್ತವ್ಯವಾಗಿರುತ್ತದೆ. ತಕ್ಷಣ ಪೈಯವರು ಅಲ್ಲಿನ ಪ್ರಾದೇಶಿಕ ವಿಭಾಗೀಯ ಇಂಜನಿಯರರಿಗೆ, ಮೇಲೆ ತಿಳಿಸಿದ ಅಧಿನಿಯಮಾನುಸಾರ ತಮಗೆ ದಿನವೊಂದಕ್ಕೆ ರೂಪಾಯಿ ೫೦೦ ರಂತೆ ಪರಿಹಾರ ಧನವನ್ನು ನೀಡಬೇಕೆಂದು 'ಪತ್ರಪ್ರಹಾರ' ಮಾಡಿದರು. ಆ ಬಳಿಕ ಹೆಚ್ಚು ತಡಮಾಡದೆ ಅವರ ದೂರವಾಣಿ ಉಪಕರಣ ಮತ್ತೆ ಜೀವತಾಳಿತು!

ಎಂದಿನಂತೆ ಪೈಯವರು ತಮ್ಮ ದೂರವಾಣಿ ಅನುಭವವೂ ಇತರರಿಗೂ ತಿಳಿದಿರಲಿ, ಎಂಬುದಕ್ಕಾಗಿ ಸಂಪಾದಕರಿಗೆ ಪತ್ರಗಳು (ಲೆಟರ್ಸ್ ಟು ಎಡಿಟರ್) ಅಂಕಣದಲ್ಲಿ ಬರೆದರು—'ಅಧಿನಿಯಮ ೪೧೨'ನ್ನು ಉದ್ಧರಿಸಿ ದೂರವಾಣಿ ಉಪಕರಣ ಹೊಂದಿದವರಿಗೆ, ತಮ್ಮ ದೂರವಾಣಿ ಮೌನಗೊಂಡರೆ ನಷ್ಟ ತುಂಬಿ ಕೊಡಬೇಕೆ'ಂದು ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿಕೊಳ್ಳುವ ಅವಕಾಶವಿರುವುದೆಂದು ತಿಳಿಯಪಡಿಸಿದರು. ಆಗ ಜನರಲ್ಲೆದ್ದ 'ಹಲ್ಲಾಗುಲ್ಲಾ'ದ ಪರಿಣಾಮವಾಗಿ, ಕೂಡಲೇ "ದೂರವಾಣಿ ಕೆಟ್ಟು ಹೋಗಿ ಒಂದು ವಾರಕ್ಕಿಂತ ಹೆಚ್ಚುಕಾಲ ನಿಸ್ತಬ್ಧವಾಗಿ ಉಳಿದುಕೊಂಡರೆ ಆ ಸಮಯದಷ್ಟು ಕಾಲ ಉಪಕರಣಕ್ಕೆ ಬಾಡಿಗೆ ಮನ್ನಾ ಮಾಡಲಾಗುವುದೆಂದು ದೂರವಾಣಿ ಇಲಾಖೆ ಘೋಷಿಸಿತು.

ಪತ್ರಿಕೆಗಳಲ್ಲಿ ದೊಡ್ಡ, ದಪ್ಪ ಅಕ್ಷರಗಳಲ್ಲಿ ಮೂಡಿಬಂದ ವಿಷಯಗಳಿವು—ಮುಂಬೈ ನಗರ ಮಧ್ಯದಲ್ಲಿರುವ 'ಮಾಟುಂಗಾ' ಮಧ್ಯಮ ವರ್ಗದ ಜನರೇ ವಾಸಿಸುವ ಸ್ಥಳ. ಇಲ್ಲಿನ ದೂರವಾಣಿ ವಿನಿಮಯ (ಎಕ್ಸ್‌ಚೇಂಜ್) ಕೇಂದ್ರದ ಸಲಕರಣೆಗಳು ಎರಡು ವರ್ಷಕ್ಕೂ ಹೆಚ್ಚು ಸಮಯದಿಂದ ತಪ್ಪು

ತಪ್ಪಾಗಿ ಕೆಲಸ ಮಾಡುತ್ತಿದ್ದುವು. ಮಾತುಂಗದಲ್ಲಿ ದೂರವಾಣಿ ಹೊಂದಿದವರೆಲ್ಲ ಈ ದೋಷಪೂರ್ಣ ವಿನಿಮಯ ಕೇಂದ್ರದವರ ದಿವ್ಯ ನಿರ್ಲಕ್ಷದಿಂದಾಗಿ ಬಹಳ ತೊಂದರೆಗೀಡಾಗಿ ಬಳಲಿಹೋಗಿದ್ದರು. ಅವರೆಲ್ಲ ಒಟ್ಟಾಗಿ ಸೇರಿ ಒಂದು ಹಸ್ತಾಕ್ಷರ ಸಂಗ್ರಹಿಸುವ ಕಾರ್ಯಕ್ರಮ ಹಾಕಿಕೊಂಡು, ದೂರವಾಣಿ ಖಾತೆಯವರು ತಮ್ಮ ಕೇಂದ್ರಕ್ಕೆ ಆಧುನಿಕ ಡಿಜಿಟಲ್ ಇಲೆಕ್ಟ್ರಾನಿಕ್ ಉಪಕರಣವನ್ನು ಒದಗಿಸಬೇಕೆಂಬ ಕೋರಿಕೆಯನ್ನು ಮುಂದಿಟ್ಟು ತಮ್ಮ ಈ 'ಜನಾಂದೋಲನ' ಕಾರ್ಯಕ್ರಮಕ್ಕೆ 'ಸ್ಕ್ರಾಪ್ಸ್-ಆಲ್' ಎಂಬ (ಕಸ ಗುಡಿಸಿರಿ-ಆಲ್) ಹೆಸರಿಟ್ಟರು. ತಮ್ಮ ವಿನಿಮಯ ಕೇಂದ್ರದ ಕೋಡ್ ಸಂಖ್ಯೆಯನ್ನು ಆ ಚಳುವಳಿಗೆ ಇಟ್ಟಿದ್ದರು. ಈ ಬಗ್ಗೆ ಪೈಯವರ ಸಲಹೆಯನ್ನು ಚಳುವಳಿಕಾರರು ಕೇಳಿದ್ದಕ್ಕೆ ಉತ್ತರವಾಗಿ ಪೈಯವರು ಈ ರೀತಿ ನುಡಿದರು— "ಮೊದಲನೇ ಕೆಲಸ— ಸಮಾಚಾರ ಪತ್ರಿಕೆಗಳಿಗೆ ನಿಮ್ಮ ತೊಂದರೆಗಳನ್ನು ವಿವರಿಸಿ ಪತ್ರ ಬರೆಯಿರಿ. ನಿಮ್ಮ ಸಂಘಟನೆಯ ಸಭೆ ಕರೆಯುವಾಗ ದೂರವಾಣಿ ವಿಭಾಗದ ಅಧಿಕಾರಿಗಳನ್ನೂ ಆಹ್ವಾನಿಸಿರಿ ಮತ್ತು ನಿಮ್ಮ ಸಮಸ್ಯೆಗಳನ್ನು ವಿವರವಾಗಿ ಅವರಿಗೆ ತಿಳಿಸಿ, ಅವರೊಡನೆ ಚರ್ಚಿಸಿರಿ. ನಿಮ್ಮ ಪ್ರದೇಶದಿಂದ ಆಯ್ಕೆಗೊಂಡ ಎಂ. ಪಿ. ಗಳ ಸಮರ್ಥನೆ ನಿಮ್ಮ ಬೇಡಿಕೆಗಳಿಗೆ ಸಿಗುವಂತೆ ಪ್ರಭಾವ ಬೀರಿರಿ." ಮುಂದುವರಿಸುತ್ತಾ "ಚಳುವಳಿಗೆ ಇಟ್ಟ ಹೆಸರು ಸರಿಯಾದದ್ದಲ್ಲವೆಂದೂ, ವಿನಿಮಯ ಕೇಂದ್ರವನ್ನು ಪುಡಿಗೈವ ಅಥವಾ ಗುಡಿಸಿ ಹಾಕುವ ಅರ್ಥ ನೀಡುವ ಘೋಷಣೆಯಿಂದ ನೀವು ಇನ್ನಷ್ಟು ತೊಂದರೆಗೆ ಸಿಲುಕುವ ಸಂಭವವಿದೆ. ನೀವು ಸಕಾರಾತ್ಮಕವಾಗಿ ಕೆಲಸ ಮಾಡಿರಿ. ಹೇಗೂ ನಿಮ್ಮ ಉದ್ದೇಶವು ಕೇಂದ್ರವನ್ನು ಆಧುನೀಕರಿಸುವುದಾದ್ದರಿಂದ ನಿಮ್ಮ ಈ ಸಾಹಸಕ್ಕೆ 'ನವೀಕರಣ ಆಲ್' ಅಥವಾ 'ನವನಿರ್ಮಾಣ ಆಲ್' ಎಂಬ (ಮಾಡರ್ನೈಸೇಶನ್ ಆಲ್) ಹೆಸರಿಡಿ" ಎಂದರು.

ಬಲುಬೇಗನೆ ಈ ಚಳವಳಿಯ ಚರ್ಚೆ, ವಿಮರ್ಶೆಗಳು ಸಮಾಚಾರ ಪತ್ರಿಕೆಗಳಲ್ಲಿ ಪ್ರಕಟಗೊಂಡವು. ಪಾರ್ಲಿಮೆಂಟಿನಲ್ಲೂ ಇದರ ಪ್ರಸ್ತಾಪಗಳೆದ್ದುವು. ದೂರವಾಣಿ ಕೇಂದ್ರ ಕಛೇರಿಯಲ್ಲಿ ವಾದವಿವಾದಗಳು ನಡೆದುವು. ಆರು ತಿಂಗಳು ಕಳೆದಾಗ ಮಾತುಂಗಾ ದೂರವಾಣಿ ವಿನಿಮಯ ಕೇಂದ್ರಕ್ಕೆ ಆಧುನಿಕ ಡಿಜಿಟಲ್ ಇಲೆಕ್ಟ್ರಾನಿಕ್ ವಿನಿಮಯ ಉಪಕರಣ ಆಗಮಿಸಿತು. ಮಾತುಂಗಾ ಬ್ಯಾಂಕಿನ ಆಡಳಿತಾಧಿಕಾರಿಯಾಗಿದ್ದುಕೊಂಡು 'ನವೀಕರಣ ಆಲ್'ರ ಜತೆಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದ ಆರ್. ಶ್ರೀಧರ್ ಹೇಳುತ್ತಾರೆ— "ನಾವೆಲ್ಲ ಶ್ರೀ ಮಂಗಳೂರು ರಂಗ ಪೈಯವರಿಗೆ ಋಣಿಗಳು. ಅವರೇ ನಮ್ಮ ನಿಜವಾದ ಮುಂದಾಳು. ನಮ್ಮನ್ನು ಸರಿದಾರಿಗೆ ಹಚ್ಚಿ, ಗುರಿ ಮುಟ್ಟಿಸಿದ ಚಾಲಕರವರು."

ಎಂ. ಆರ್. ಪೈಯವರ ಪತ್ರಗಳು ಯಾವಾಗಲೂ ಕಾನೂನಿನ ವಿವಿಧ ಅಂಶಗಳನ್ನು 'ಉದ್ಧರಿಸುತ್ತ' ವೈಶಿಷ್ಟ್ಯಪೂರ್ಣವಾಗಿರುತ್ತವೆ. ಒಂದಿಷ್ಟೂ ಹಗೆತನವಾಗಲೀ, ದುರುದ್ದೇಶವಾಗಲೀ, ಇರದೆ ಚುಟುಕಾಗಿ, ಪ್ರಾಮಾಣಿಕವಾಗಿ ಇರುತ್ತವೆ. ಇತ್ತೀಚೆಗೆ ಒಂದು ಸಂದರ್ಭದಲ್ಲಿ ಐ.ಎ.ಎಸ್. ಅಧಿಕಾರಿ

ಗಳು ಹೆಚ್ಚಿನ ವೇತನವನ್ನು ಅಪೇಕ್ಷಿಸಿದಾಗ ಪೈಯವರು ಪತ್ರಿಕಾ ಸಂಪಾದಕರಿಗೆ ಈ ರೀತಿ ಬರೆದರು—ಸಿವಿಲ್ ಸರ್ವಿಸ್‌ನಲ್ಲಿರುವ ಸರಕಾರಿ ಪದಾಧಿಕಾರಿಗಳು ವೇತನವನ್ನೇರಿಸಬೇಕೆಂದು ಒತ್ತಾಯಿಸುವುದರಲ್ಲಿ ಅರ್ಥವಿದೆ. ಸ್ವಾಯತ್ತ ಸಂಸ್ಥೆಗಳಲ್ಲಿ ಇವರಷ್ಟೇ ಹೊಣೆಗಾರಿಕೆಯನ್ನು ನಿರ್ವಹಿಸುವ ಅಧಿಕಾರಿಗಳ ವೇತನ ಶ್ರೇಣಿಯನ್ನು ಸರಕಾರೀ ಅಧಿಕಾರಿಗಳ ವೇತನಕ್ಕೆ ಹೋಲಿಸಿದರೆ ಇವರದೊಂದು 'ಪಿಟ್ಟಾಸೆಯ ದಾನದಂತೆ' ಅತ್ಯಲ್ಪವಾಗಿ ಕಾಣದಿರದು. ಆದರೆ ಪೈಯವರು ಪರಿಸ್ಥಿತಿಗಳ ಬಗ್ಗೆ ಗಮನವೀಯಬೇಕೆಂದೂ ಕರೆಕೊಟ್ಟರು ಮತ್ತು ಐ.ಎ.ಎಸ್. ಅಧಿಕಾರಿಗಳು ತಮ್ಮ ಕೆಲಸಗಳು ಗಣನೀಯವಾಗುವಂತೆ ಆಸಕ್ತಿ ವಹಿಸಿ ದುಡಿಯಬೇಕಾಗಿರುವುದನ್ನೂ ಒತ್ತಿ ಹೇಳಿದರು. ಸ್ವಾಯತ್ತ ಸಂಸ್ಥೆಗಳ ಅಧಿಕಾರಿಗಳಂತೆ ತಮ್ಮ ಹೊಣೆಯರಿತು ದುಡಿಯಬೇಕೆಂದು ಎಚ್ಚರವಿತ್ತರು. ಕೆಲವು ದಿನ ಕಳೆದಾಗ ಡಿಲ್ಲಿಯ ಐದನೇ ವೇತನ ಆಯೋಗದಿಂದ ಪೈಯವರನ್ನು ವೇತನ ನಿರ್ಣಯ ಕೈಗೊಳ್ಳುವ ಸಭೆಯಲ್ಲಿ ಹಾಜರಿರಬೇಕೆಂದು ವಿನಂತಿ ಪೂರ್ವಕ ಆಹ್ವಾನಿಸುವ ಪತ್ರವೊಂದು ಕೈಸೇರಿತು.

ಹಗೆಸಾಧನೆ ಅಥವಾ ದುರುದ್ದೇಶಗಳು ತಿಲಮಾತ್ರವೂ ಇಲ್ಲದ ಸಂಪೂರ್ಣ ಸತ್ ಸಂಕಲ್ಪ ಪ್ರೇರಿತರಾದ ಶ್ರೀ ರಂಗ ಪೈಯವರ ಸದ್ಗುಣಗಳಿಂದಾಗಿ ಹಲವಾರು, ಸಂಘಸಂಸ್ಥೆಗಳು, ದೂರವಾಣಿ ಇಲಾಖೆಯೂ ಸೇರಿದಂತೆ ಯುನಿಟ್ ಟ್ರಸ್ಟ್ ಆಫ್ ಇಂಡಿಯಾದಂಥ ಬೃಹತ್ ಸಂಸ್ಥೆಗಳು ಕೂಡ ಪೈಯವರ ಸಲಹೆಗಳನ್ನು ಅಪೇಕ್ಷಿಸುತ್ತವೆ. ೧೯೮೯ರಲ್ಲಿ ಟೆಲಿ ಕಮ್ಯುನಿಕೇಶನ್ ವ್ಯವಸ್ಥೆಗಳ ಪುನರ್‌ನಿರ್ಮಾಣ ಮತ್ತು ನವೀಕರಣ ಯೋಜನೆಗಳ ಸರಕಾರೀ ಸಂಚಾಲಕರ ಸಭೆಯಲ್ಲಿರುವಂತೆ ವಿನಂತಿಸುವ ಆಮಂತ್ರಣವನ್ನು ಪೈಯವರು ಸ್ವೀಕರಿಸಿದರು. ಈ ರೀತಿ, ಆಗಾಗ ರಿಸರ್ವ್ ಬ್ಯಾಂಕಿನ ಗ್ರಾಹಕ ಸೇವಾ ಸಂಘಟನೆಯ ಸಭೆಯಲ್ಲೂ, ಯು.ಟಿ.ಐ.ಯ ಸಾರ್ವಜನಿಕ ಲೆಕ್ಕಗಳ ಪರಿಶೋಧನಾ ಸಭೆಗಳಲ್ಲೂ ಭಾಗವಹಿಸುತ್ತಿರುತ್ತಾರೆ. ೧೯೯೩ರ ಡಿಸೆಂಬರ್ ತಿಂಗಳಲ್ಲಿ ಮದ್ರಾಸಿನ ಯು.ಟಿ.ಐ. ಕಛೇರಿಯನ್ನು ಸಂದರ್ಶಿಸುವುದಕ್ಕಾಗಿ ಪೈಯವರು ಹೋಗಿದ್ದಾಗ, ಉದ್ಯೋಗಿಯೊಬ್ಬಳು ಅವರನ್ನು ಭೇಟಿ ಮಾಡಲು ಅಪೇಕ್ಷಿಸಿದ್ದಾಳೆಂದು ತಿಳಿಯಿತು. ಆಕೆ ಇನ್ನಾರೂ ಆಗಿರದೆ ಅಮಿತಾ ಕಾರ್ನಾಡಳಾಗಿದ್ದಳು. ಅವಳಿಗೆ ಅನ್ಯಾಯವಾಗಿ ಕೈತಪ್ಪಿಹೋಗಲಿದ್ದ ಉದ್ಯೋಗವನ್ನು ದೊರಕಿಸಿಕೊಟ್ಟ ಪೈಯವರಿಗೆ ಧನ್ಯವಾದಗಳನ್ನರ್ಪಿಸಲು ವರ್ಷಗಳಿಂದ ತಾನು ಕಾಯುತ್ತಿರುವೆನೆಂದು ಆಕೆ ತಿಳಿಸಿ ಕೃತಜ್ಞತೆ ಸಮರ್ಪಿಸಿದಳು.

ಗ್ರಾಹಕರ ರಕ್ಷಕ ಸೇನಾನಿಯಂತೆ ಕಾರ್ಯವೆಸಗುತ್ತಿದ್ದರೂ, ಪೈಯವರು ಫಲಾನುಭವಿಗಳ ಎಲ್ಲ ದೂರುಗಳೂ ನ್ಯಾಯಸಮ್ಮತಗಳೆಂದು ನಿರ್ಣಯಿಸುವವರಲ್ಲ. ೧೯೯೧ರಲ್ಲಿ ದೂರವಾಣಿ ಇಲಾಖೆಯು ಪ್ರಾದೇಶಿಕ (ಲೋಕಲ್) ಕರೆಗಳಿಗೆ ಕಾಲಪ್ರಮಾಣಕ್ಕನುಗುಣವಾಗಿ ಶುಲ್ಕ ವಿಧಿಸಬೇಕೆಂದು ತೀರ್ಮಾನ ಕೈಕೊಂಡಾಗ ದೂರವಾಣಿ ಹೊಂದಿದ್ದವರೆಲ್ಲ ಇದನ್ನು ವಿರೋಧಿಸಿದರು. ಆದರೆ ಪೈಯವರು ಗ್ರಾಹಕರ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿ ಪತ್ರಿಕಾ ಸಂಪಾದಕರಿಗೆ ಪತ್ರಗಳನ್ನು ಬರೆದರು—ಅದೇ

ನೆಂದರೆ—ಕಾಲಪ್ರಮಾಣಕ್ಕೆ ಸರಿಯಾದ ಶುಲ್ಕ ವಿಧಿಸುವ ಹೊಸ ನಿರ್ಣಯವು ಯೋಗ್ಯವೂ, ನ್ಯಾಯ ಪೂರ್ಣವೂ ಆಗಿದೆ. ಏಕೆಂದರೆ ಪರೋಕ್ಷವಾಗಿ ಇದರಿಂದ ದೂರ ವಾಣಿಯ ತಂತಿ ಜಾಲಗಳ ಮೇಲೆ ಬೀಳುವ ನಿರರ್ಥಕ ಭಾರವು–ಶಬ್ದಗಳ ಒತ್ತಡವು–ಕಡಿಮೆಯಾಗುವುದಲ್ಲದೆ ಇಲಾಖೆಗೆ ಆದಾಯ ಹೆಚ್ಚುವುದೆಂದೂ, ಮುಂದೆ ಅದನ್ನು ಪಯೋಗಿಸಿ ದೂರವಾಣಿಯ ಕಾರ್ಯಕ್ಷಮತೆಯನ್ನು ಉತ್ತಮಪಡಿಸಬಹುದೆಂದೂ ವಾದಿಸಿದರು.

ಕಳೆದ ವರ್ಷ ಸರಕಾರವು ಪೋಸ್ಟ್ ಕಾರ್ಡಿನ ದರವನ್ನು ಹೆಚ್ಚಿಸುವ ಬಗ್ಗೆ ಆಲೋಚಿಸಿತು. ಮೇಲ್ನೋಟಕ್ಕೆ ಭಾರತದ ಬಡಜನರಿಗಿರುವ ಒಂದೇ ಒಂದು ಅಗ್ಗದ ಸಂಪರ್ಕ ಸಾಧನ ತಪ್ಪಿಹೋಗುವುದೆಂದು ಎಲ್ಲರೂ ಒಪ್ಪಿಕೊಂಡು ಇದನ್ನು ವಿರೋಧಿಸಿದಾಗ ಪೈಯವರೂ ಸರ್ವಜನಾಭಿಪ್ರಾಯವನ್ನು ಸಮರ್ಥಿಸಿದರು. ಆದರೆ ಪೈಯವರು ಇದಕ್ಕೆ ಪರ್ಯಾಯ ಸೂತ್ರವೊಂದನ್ನು ಮೊದಲೇ ಶೋಧಿಸಿದ್ದರು. ತಕ್ಷಣ ಮಹಾರಾಷ್ಟ್ರದ ಪೋಸ್ಟ್‌ಮಾಸ್ಟರ್ ಜನರಲ್‌ರಿಗೆ ಪತ್ರವೊಂದನ್ನು ಬರೆದು, ತಮ್ಮಲ್ಲಿರುವ ಪರಿಹಾರೋಪಾಯವನ್ನು ತಿಳಿಸಿದರು. ಅದು ಈ ರೀತಿಯಾಗಿದೆ— ಪೋಸ್ಟ್ ಕಾರ್ಡ್ ಬಳಸುವವರು ಬಡವರು ಮಾತ್ರವಲ್ಲ; ವ್ಯಾಪಾರ ವಹಿವಾಟುಗಳೂ ಕಾರ್ಡಿನ ಮೂಲಕವೇ ನಡೆಯುತ್ತಿರುತ್ತವೆ. ವಾಣಿಜ್ಯ ವ್ಯವಹಾರಗಳಿಗೆ ಸಂಬಂಧಪಟ್ಟ ಅಂಚೆ ಕಾರ್ಡುಗಳಿಗೆ ಹೆಚ್ಚಿನ ದರ ವಿಧಿಸುವುದು ಯೋಗ್ಯವಾಗಿದೆ ಮತ್ತು ಆವಶ್ಯಕವೂ ಆಗಿದೆ. ಆ ಬಳಿಕ ಕೆಲವೇ ಸಮಯದೊಳಗೆ ಸಾರ್ವಜನಿಕ ಸಂಪರ್ಕ ಮಾಧ್ಯಮಗಳ ಸಚಿವರಾದ ಸುಖರಾಮ್‌ರವರು ಶ್ರೀ ಪೈಯವರ ಸೂಚನೆಗೆ ಸಮನಾದ ಒಂದು ಹೇಳಿಕೆ ನೀಡಿದರು—ಸರಕಾರವು ವ್ಯಾಪಾರೀ ಉದ್ದೇಶಗಳಿಗೆ ಬಳಸಲಾಗುವ ಪೋಸ್ಟ್ ಕಾರ್ಡ್‌ಗಳ ದರವನ್ನು ಮಾತ್ರ ಹೆಚ್ಚಿಸುವ ಅಭಿಪ್ರಾಯವನ್ನು ತಳೆದಿದೆ" ಎಂದು ಸರಕಾರದ ತೀರ್ಮಾನವನ್ನು ಸ್ಪಷ್ಟಪಡಿಸಿದರು.

ಸದಾಕಾಲ ಎಲ್ಲ ಕಡೆಗಳಲ್ಲಿ ಧನಾತ್ಮಕ ಅಂಶಗಳನ್ನರಸುತ್ತಾ ಆ ಕಡೆಗೆ ಮನಸ್ಸನ್ನು ಕೇಂದ್ರೀಕರಿಸುವ ಸ್ವಭಾವದ ಶ್ರೀ ಪೈಗಳು ವ್ಯಕ್ತಿ ಯಾರೇ ಇರಲಿ ಅವರ ಉತ್ತಮ ಕಾರ್ಯಗಳನ್ನು ಶ್ಲಾಘಿಸಿ ಪತ್ರ ಬರೆಯುವುದಿದೆ. ಒಮ್ಮೆ ೧೯೮೭ರ ಗಣೇಶೋತ್ಸವದ ಕಾಲದಲ್ಲಿ ನಗರದ ವಾಹನ ಸಂಚಾರ ನಿಯಂತ್ರಣದಲ್ಲಿ ತೋರಿದ ಅಸಾಧಾರಣ ದಕ್ಷತೆಗಾಗಿ ಮುಂಬಯಿಯ ಪೋಲೀಸ್ ಕಮಿಶನರನ್ನು, ಅವರ ಸಿಬ್ಬಂದಿಯವರನ್ನು ಪ್ರಶಂಸಿಸಿ ಪೋಲೀಸರ ಕ್ಷೇಮಾಭಿವೃದ್ಧಿ ನಿಧಿಗೆ ದೇಣಿಗೆಯಾಗಿ ಸ್ವ ಇಚ್ಛೆಯಿಂದ ೧೦೦ ರೂಪಾಯಿಗಳನ್ನಿತ್ತರು.

ಪೈಯವರು ನಾಲ್ಕು ಪುಸ್ತಕಗಳನ್ನೂ ಬರೆದಿದ್ದಾರೆ. ಅವುಗಳಲ್ಲೊಂದು ೧೯೭೦ರಲ್ಲಿ ಪ್ರಕಾಶಗೊಂಡ "ಭಾರತದ ಆರ್ಥಿಕ ಪವಾಡ ಮತ್ತು ಇತರ ಪ್ರಬಂಧಗಳು. (ಆ್ಯನ್ ಇಂಡಿಯನ್ ಇಕನಾಮಿಕ್ ಮಿರ್‍ಯಾಕಲ್ ಅಂಡ್ ಅದರ್ ಎಸ್ಸೇಸ್.) ಈ ಪುಸ್ತಕದಲ್ಲಿ ಪೈಯವರು—"ರಷ್ಯಾದ 'ಸಮಾಜವಾದ' ವೆಂಬ ಹೆಸರಿನ ಅರ್ಥನೀತಿಯನ್ನು ತದ್ರೂಪದಲ್ಲೇ ಅನುಸರಣೀಯ ಮಾದರಿಯೆಂದು ಭಾರತ ನಿರ್ಣಯಿಸಿರುವುದು, ವಿನಾಶದೆಡೆಗೆ ಸಾಗಲು ಸುಲಭ ದಾರಿ ನಿರ್ಮಿಸಿದಂತೆ"

ಎಂದು ಬಣ್ಣಿಸಿ ಸಕಾರಣವಾಗಿ ತಮ್ಮ ವಿರೋಧವನ್ನು ಮಂಡಿಸಿದ್ದಾರೆ. ಪೈಯವರ ಇತರ ಮೂರು 'ಸ್ವ-ಸಹಾಯ' ಪುಸ್ತಕಗಳು.

೧. ಸಭೆ, ಸಮಾವೇಶಗಳನ್ನು, ಕಾರ್ಯಕ್ರಮಗಳನ್ನು ರೂಪಿಸುವುದು ಹೇಗೆ? (ಹೌ ಟು ಅರೇಂಜ್ ಪ್ರೋಗ್ರಾಮ್ಸ್ ಅಂಡ್ ಮೀಟಿಂಗ್ಸ್).
೨. ಹಣ ಹೂಡುವಿಕೆ ಮತ್ತು ಉಳಿತಾಯ ಹೇಗೆ? (ಹೌ ಟು ಸೇವ್ ಅಂಡ್ ಇನ್‌ವೆಸ್ಟ್).
೩. ಸಮಯದ ಉಪಯೋಗದಲ್ಲಿ ಸುವ್ಯವಸ್ಥೆ (ಟೈಮ್ ಮ್ಯಾನೇಜ್‌ಮೆಂಟ್).


ಈ ವಿಷಯಗಳೆಲ್ಲ ಹೆಚ್ಚಾಗಿ ವಿವಿಧ ಸಂಸ್ಥೆಗಳು, ಕಂಪೆನಿಗಳು ಪೈಯವರಿಂದ ಕೇಳಿ ತಿಳಿದುಕೊಳ್ಳುವಂಥವುಗಳು.

ಪೈಯವರು ತಮ್ಮ ಸಮಯವನ್ನು ಬಹಳ ವ್ಯವಸ್ಥಿತವಾಗಿ ಉಪಯೋಗಿಸಿಕೊಳ್ಳುತ್ತಾರೆ. ಬೆಳಗ್ಗೆ ಗಂಟೆ ಹಕ್ಕೆ ಏಳುತ್ತಾರೆ. ಸಂಸ್ಕೃತ ಶ್ಲೋಕಗಳ ಪಠನೆಯ ಬಳಿಕ ಸುದ್ದಿ ಸಂಚಿಕೆಗಳ ಮೇಲೆ ಕಣ್ಣು ಹಾಯಿಸುತ್ತಾರೆ. ಪತ್ರಪತ್ರಿಕೆಗಳನ್ನು ಓದುತ್ತಾರೆ. ಮತ್ತೆ ಮುನಿಸಿಪಾಲಿಟಿಯ ಈಜುಕೊಳದಲ್ಲಿ ಸರಿಯಾಗಿ ಹತ್ತು ನಿಮಿಷಗಳ ಈಜಾಟ ಮುಗಿಸಿ ಪಕ್ಕದ ದೇವಸ್ಥಾನದಲ್ಲಿ ಪ್ರಾರ್ಥನೆ ಸಲ್ಲಿಸುತ್ತಾರೆ. ಸಂಜೆ ಹೊತ್ತು ಏಕಾಂತದಲ್ಲಿ ಚಿಂತನೆ, ಬರವಣಿಗೆಗಳಲ್ಲಿ ಮಗ್ನರಾಗುತ್ತಾರೆ. ಪುಟ್ಟ ಸಂಸಾರಕ್ಕೆ ಸಾಕಾಗುವಂಥ ಒಂದೇ ಮಲಗುವ ಕೋಣೆ ಇರುವ ಅಚ್ಚುಕಟ್ಟಾದ, ಆದರೆ ಆಡಂಬರವಿಲ್ಲದ ಫ್ಲಾಟ್—ಅವರ ಮನೆ. ಆದರಲ್ಲಿ ಅವರ ಪತ್ನಿ ಗೀತಾರಿಗೆ ಮನೆಗೆಲಸದಲ್ಲಿ ಸಹಾಯ ಮಾಡುತ್ತಾರೆ. ಗೀತಾರವರು 'ಗೌಡ ಸಾರಸ್ವತ ಬ್ರಾಹ್ಮಣ ಸಭಾ' ಎಂಬ ಸಮಾಜಸೇವಾ ಸಮಿತಿಯ ಗೌರವಾಧ್ಯಕ್ಷೆಯಾಗಿ ಕೆಲಸ ಮಾಡುತ್ತಿರುತ್ತಾರೆ. ಸಭೆಯ ಇತರ ಕೆಲಸಗಳಲ್ಲದೆ ವಧೂವರರ ಮಾಹಿತಿ ಸಂಗ್ರಹಿಸಿ, ವಿವಾಹ ಸಂಬಂಧಗಳನ್ನು ಹೊಂದಿಸುವ ಸಹಕಾರ ಸಂಸ್ಥೆಯನ್ನು ನಡೆಸುತ್ತಾರೆ. ಯುವಕಯುವತಿಯರಿಗಾಗಿ ಕ್ರಿಕೆಟ್ ಕೋಚಿಂಗ್ ಮತ್ತು ನಾಯಕತ್ವ ತರಬೇತಿ ಶಿಬಿರಗಳನ್ನು ಏರ್ಪಡಿಸುವುದು, ಸಮಾಜದಲ್ಲಿ ಹಿರಿಯ ತಲೆಮಾರಿನವರಿಗೆ ವಿಹಾರಾರ್ಥ ಸಣ್ಣ ಪ್ರವಾಸಗಳನ್ನು ವ್ಯವಸ್ಥೆಗೊಳಿಸುವುದು, ಇತ್ಯಾದಿ ಹಲವು ಸಾಮಾಜಿಕ ಚಟುವಟಿಕೆಗಳಲ್ಲಿ ಮಗ್ನರಾಗಿರುತ್ತಾರೆ. "ನನ್ನ ಪತಿಯಿಂದ ನಾನು ಯಾವಾಗಲೂ ಪ್ರೇರಣೆ ಪಡೆಯುತ್ತಿರುತ್ತೇನೆ. ಅವರು ಇತರರಿಗಾಗಿ ಕೆಲಸ ಮಾಡುವುದನ್ನು ಕಂಡು ನಾನೂ ಕೂಡ ಸಾಮಾಜಿಕ ಕಾರ್ಯಗಳಲ್ಲಿ ನನ್ನನ್ನು ತೊಡಗಿಸಿಕೊಂಡೆ" ಎಂದು ಹೇಳುತ್ತಾರೆ ಶ್ರೀಮತಿ ಗೀತಾ ಪೈ.

ಶ್ರೀ ರಂಗ ಪೈಯವರು ಈ ರೀತಿ ಸಾರ್ವಜನಿಕ ಕಾರ್ಯಗಳಲ್ಲಿ ಎಡೆಬಿಡದೆ ದುಡಿಯುವುದರ ಹಿಂದೆ ಇರುವ ಪ್ರೇರಣೆ ಯಾವುದು? ಬನ್ನಿ, ಅವರನ್ನೇ ಕೇಳೋಣ—ಅವರ ಉತ್ತರ ಹೀಗಿದೆ—"ಹೆಚ್ಚಿನ ಭಾರತೀಯರಿಗೆ, ತಮಗಿರುವ ಹಕ್ಕುಬಾಧ್ಯತೆಗಳ ಅರಿವಿಲ್ಲ. ಇದರಿಂದಾಗಿ ಅವರ ಮೇಲೆ ಶಕ್ತಿವಂತರು ಸವಾರಿ ಮಾಡುತ್ತಿರುತ್ತಾರೆ. ನಮ್ಮ ಪ್ರಜಾರಾಜ್ಯವು ಕಿಂಚಿತ್ತಾದರೂ ಹೆಚ್ಚು ಅರ್ಥಪೂರ್ಣವಾಗುವಂತೆ ಮಾಡು

ವುದೇ ನನ್ನ ಎಲ್ಲಾ ಪ್ರಯತ್ನಗಳ ಗುರಿ. ಸಾರ್ವಜನಿಕ ವ್ಯವಹಾರಗಳಲ್ಲಿ ಶ್ರೀಸಾಮಾನ್ಯರೆಲ್ಲರೂ ಕ್ರಿಯಾಶೀಲತೆಯಿಂದ ಭಾಗವಹಿಸದೆ ಹೋದಲ್ಲಿ ಪ್ರಜಾತಂತ್ರದ ಮುಖ್ಯ ಅಂಗವಾದ ಆಡಳಿತ ಯಂತ್ರವು ಸರಿಯಾಗಿ ಕೆಲಸ ಮಾಡಲಾರದು."

"ಇದಕ್ಕಾಗಿಯೇ, ಪರೋಪಕಾರವೊಂದೇ ಧ್ಯೇಯವಾಗಿ ಇರುವುದರಿಂದಲೇ 'ಮಹಾನಾಗರಿಕ' ಎಂ. ಆರ್. ಪೈಯವರು ಇಷ್ಟೊಂದು ಜನಪ್ರಿಯರಾದರು" ಎನ್ನುತ್ತಾರೆ, ಹಿಂದೆ ಸಂಯುಕ್ತ ಅಮೇರಿಕದಲ್ಲಿ ಭಾರತದ ರಾಯಭಾರಿಯಾಗಿದ್ದ, ಖ್ಯಾತಿವೆತ್ತ ನ್ಯಾಯದರ್ಶಿ–ನಾನಾ ಫಾಲ್ಕೀವಾಲಾ ಹೇಳುತ್ತಾರೆ ಮುಂದುವರಿಸುತ್ತಾ "ಇಂಥ ಸತ್ಪ್ರಜೆಯನ್ನು ಪಡೆದು ಮುಂಬಾಯಿನಗರ ಹೆಮ್ಮೆ ಪಡುತ್ತದೆ". 'ಸರ್ವೇ ಜನಾಃ ಸುಖಿನೋ ಭವಂತು' ಎಂದೆನ್ನುವ ಮಹರ್ಷಿಗಳ ಆಶಯವನ್ನು ಅಕ್ಷರಶಃ ಸಾಧಿಸುತ್ತಿರುವ ಎಂ. ಆರ್. ಪೈಯವರು ಎಲ್ಲರ ಪ್ರೀತಿಗೆ ಪಾತ್ರರಾಗಿದ್ದಾರೆ.



ದೇವರ ಪ್ರೀತಿಯನ್ನು ಗಳಿಸುವುದಕ್ಕೆ ಸುಲಭವಾದ ಮಾರ್ಗವೊಂದಿದೆ. ಅದೆಂದರೆ ದೇವರ ಸೃಷ್ಟಿಯಾದ ಎಲ್ಲವನ್ನೂ, ಎಲ್ಲರನ್ನೂ ಪ್ರೀತಿಸುವುದು.

ಮೊದಲು ನಿನ್ನಲ್ಲಿರುವ ತಪ್ಪುಗಳನ್ನು ನೀನು ತಿದ್ದಿಕೋ; ಅನಂತರ ಇತರರ ತಪ್ಪುಗಳನ್ನು ತಿದ್ದುವುದು ನಿನಗೆ ಗೊತ್ತಾಗುತ್ತದೆ.

—ಏಸುಕ್ರಿಸ್ತ

ಕ್ರಿಸ್ಮಸ್ ಉಡುಗೊರೆ

ಎಚ್. ಆರ್. ಚಂದ್ರವದನರಾವ್

ಒಂದು ಡಾಲರ್ ಎಂಬತ್ತೇಳು ಸೆಂಟ್ಸ್. ಡೆಲ್ಲಾ ಒಂದಲ್ಲ, ಮೂರುಬಾರಿ ಎಣಿಸಿದಳು. ಅಲ್ಲಿದ್ದುದು ಒಂದು ಡಾಲರ್ ಎಂಬತ್ತೇಳು ಸೆಂಟ್ಸ್ ಅಷ್ಟೆ. ಮನೆಗೆ ಬೇಕಾದ ಸಾಮಾನು ಗಳನ್ನು ಖರೀದಿಸುವಾಗ, ತರಕಾರಿ ತರುವಾಗ, ಮಾಂಸಕೊಳ್ಳುವಾಗ ಹೆಜ್ಜೆ ಹೆಜ್ಜೆಗೂ ಚೌಕಾಸಿಮಾಡಿ ಈ ಮೂರು ತಿಂಗಳಲ್ಲಿ ಉಳಿಸಿದ ಹಣ ಅದು. ಅಷ್ಟರಲ್ಲಿ ಏನು ಮಾಡುವುದು? ಮಾರನೇ ದಿನವೇ ಕ್ರಿಸ್‌ಮಸ್. ಡೆಲ್ಲಾ ತನ್ನ ಮುರುಕಲು ಮಂಚದ ಮೇಲೆ ಬಿದ್ದು ಅತ್ತಳು. ಜೀವನ ಸುಖದ ಸುಪ್ಪತ್ತಿಗೆಯಲ್ಲ; ನಗುವುದಕ್ಕಿಂತ ಜೀವನದಲ್ಲಿ ಅಳುವುದೇ ಜಾಸ್ತಿ, ಅಲ್ಲವೇ?'

ಡೆಲ್ಲಾಳ ಅಪಾರ್ಟ್‌ಮೆಂಟಿನ ಬಾಡಿಗೆ ವಾರಕ್ಕೆ ಎಂಟು ಡಾಲರ್ ಅಂದ ಮೇಲೆ ಅದು ಹೇಗಿತ್ತೆಂದು ಹೇಳಬೇಕಾಗಿಯೇ ಇಲ್ಲ. ಮನೆಯ ಮುಂದಿದ್ದ ತನ್ನ ಪತಿಯ ಹೆಸರಿನ ಅಂಚೆ ಪೆಟ್ಟಿಗೆಗೆ ಕಾಗದ ಬಿದ್ದು ಎಷ್ಟೋ ದಿನಗಳಾಗಿತ್ತು. ಕರೆಗಂಟೆ ಒತ್ತಿ ಮನೆಗೆ ಬಂದ ಅತಿಥಿಗಳು ಇಲ್ಲವೇ ಇಲ್ಲ. ಬಾಗಿಲ ಬಳಿ ತೂಗು ಹಾಕಿದ್ದ 'ಮಿ, ಜೇಮ್ಸ್ ಡಿಲ್ಲಿಂಗ್ ಹ್ಯಾಂ ಯಂಗ್' ಬೋರ್ಡ್‌ನ ಅಕ್ಷರಗಳು ಈಗ ಅಳಿಸಿ ಹೋಗುತ್ತಾ ಈಗ 'ಡಿ' ಒಂದು ಮಾತ್ರ ಉಳಿದುಕೊಂಡಿದೆ. ಆದರೆ, ಡೆಲ್ಲಾಗೆ ಜಿಮ್ (ಹಾಗೆಂದು ಅವಳು ತನ್ನ ಪತಿಯನ್ನು ಕರೆಯುತ್ತಿದ್ದಳು) ಮೇಲಿದ್ದ ಪ್ರೀತಿ ಸ್ವಲ್ಪವೂ ಕಡಿಮೆಯಾಗಿಲ್ಲ.

ಕಣ್ಣೀರನ್ನು ಒರೆಸಿ, ಮುಖಕ್ಕೆ ಪೌಡರನ್ನು ಲೇಪಿಸಿಕೊಂಡು ಕಿಟಕಿಯ ಬಳಿ ಬಂದಾಗ ಬೂದು ಬಣ್ಣದ ಬೆಕ್ಕೊಂದು ಬೇಲಿ ದಾಟಿಕೊಂಡು ಹೋಗುವುದನ್ನು ಕಂಡ ಡೆಲ್ಲಾ ಹಾಗೆಯೇ ಯೋಚಿಸುತ್ತಾ ನಿಂತಳು—'ಜಿಮ್‌ಗೆ' ಒಂದು ನಿಜವಾಗಿಯೂ ಅಪರೂಪವಾದ ಉಡುಗೊರೆಯನ್ನು ಕ್ರಿಸ್‌ಮಸ್‌ಗೆ ತಂದುಕೊಟ್ಟು ಅವನನ್ನು ಅಚ್ಚರಿಗೊಳಿಸಬೇಕು! ಜಿಮ್ ಇಷ್ಟಪಡುವ, ಹೆಮ್ಮೆಯಿಂದ ಇಟ್ಟುಕೊಳ್ಳಬಹುದಾದಂತಹ ಉಡುಗೊರೆಯಾಗಿರಬೇಕು ಹೀಗೆ ಏನೇನೊ ಯೋಚನೆ. ಆದರೆ ಅವಳಲ್ಲಿ ಈಗ ಇರುವುದು ಕೇವಲ ಒಂದು ಡಾಲರ್ ಎಂಬತ್ತೇಳು ಸೆಂಟ್ಸ್. ಗಂಡನ ವರಮಾನವೇ ವಾರಕ್ಕೆ ಇಪ್ಪತ್ತು ಡಾಲರ್ ಇರುವಾಗ

ಮೂಲ: ಓ ಹೆನ್ರಿಯ 'ದಿ ಗಿಫ್ಟ್ ಆಫ್ ದಿ ಮ್ಯಾಜೈ'

ಉಳಿಸಲು ಏನು ಸಾಧ್ಯ? ಯಾವಾಗಲೂ ವರಮಾನಕ್ಕಿಂತ ಖರ್ಚೇ ಜಾಸ್ತಿ.

ಎರಡು ಕಿಟಕಿಗಳ ಮಧ್ಯದ ಗೋಡೆಯಲ್ಲಿದ್ದ ಕನ್ನಡಿ ಕಡಿಮೆ ಬೆಲೆಯದು, ಅದರಲ್ಲಿ ನೋಡಿಕೊಂಡು ಹೇಗೆ ಕಾಣುತ್ತೇನೆಂಬುದನ್ನು ತಿಳಿದುಕೊಳ್ಳುವ ಕಲೆ ತೆಳ್ಳಗಿರುವ ಡೆಲ್ಲಾಳಿಗೆ ಮಾತ್ರ ಸಾಧ್ಯ. ಡೆಲ್ಲಾ ಕನ್ನಡಿಯ ಮುಂದೆ ಎರಡುಕ್ಷಣ ನಿಂತು ಮುಖ ನೋಡಿಕೊಂಡಳು. ಕಣ್ಣುಗಳಲ್ಲಿ ಕಾಂತಿ ಇದ್ದರೂ ಕೆನ್ನೆಯ ಕೆಂಪು ಮಾಸಿತ್ತು. ಡೆಲ್ಲಾ ತಲೆಗೆ ಹಾಕಿಕೊಂಡ ಹೇರ್‌ಪಿನ್ನುಗಳನ್ನು ಕಿತ್ತಳು; ಅವಳ ಕೇಶರಾಶಿ ಹರಡಿಕೊಂಡು ಇಳಿಬಿತ್ತು. ಡಿಲ್ಲಿಂಗ್ ಹ್ಯಾಂ ದಂಪತಿಗಳಲ್ಲಿದ್ದ ಹೇಳಿಕೊಳ್ಳಬಹುದಾದ ಎರಡು ವಸ್ತುಗಳೆಂದರೆ—ಒಂದು ಪಿತ್ರಾರ್ಜಿತವಾಗಿ ಬಂದ ಜಿಮ್‌ನ ಚಿನ್ನದ ಗಡಿಯಾರ, ಇನ್ನೊಂದು ಡೆಲ್ಲಾಳ ಕೇಶರಾಶಿ.

ಶೀಬಾರಾಣಿ ಏನಾದರೂ ಅವರ ಮನೆಯ ಎದುರಿನ ಮನೆಯಲ್ಲಿ ಇದ್ದಿದ್ದರೆ ಡೆಲ್ಲಾ ಅವಳ ಕೇಶರಾಶಿಯನ್ನು ಒಣಗಿಸುವ ನೆಪದಿಂದ ಕಿಟಕಿಯಲ್ಲಿ ತೂರಿ ಅವಳ ಕೇಶ ಸಂಪತ್ತು ರಾಣಿಯ ಆಭರಣಗಳ ಮುಂದೆ ಸೊನ್ನೆ ಎಂದು ತೋರಿಸಬಹುದಾಗಿತ್ತು! ಸಾಲೋಮನ್ ರಾಜ ಅಲ್ಲದ್ದಿದ್ದರೆ ಅವನು ನೋಡಿದಾಗಲೆಲ್ಲಾ ಗಂಟೆ ನೋಡಿಕೊಳ್ಳುವ ನೆಪದಿಂದ ಜೋಬಿನಲ್ಲಿದ್ದ ತನ್ನ ಚಿನ್ನದ ಗಡಿಯಾರವನ್ನು ಜಿಮ್ ತೆಗೆದು ತೋರಿಸುತ್ತಾ ರಾಜನಲ್ಲಿ ಅಸೂಯೆ ಹುಟ್ಟಿ ಅವನು ತನ್ನ ಗಡ್ಡದ ಕೂದಲನ್ನು ಕಿತ್ತುಕೊಳ್ಳುವ ಹಾಗೆ ಮಾಡಬಹುದಾಗಿತ್ತು! ಅಂತಹ ಆಸ್ತಿಗಳು ಅವು.

ಡೆಲ್ಲಾಳ ಸುಂದರ ಕೇಶರಾಶಿ ಹೊಂಬಣ್ಣದ ಜಲಪಾತದಂತೆ ಅವಳ ಮೊಣಕಾಲಿನವರೆಗೂ ಇಳಿದು ಉಡುಗೆಯಂತೆ ಕಾಣಿಸುತ್ತಿತ್ತು. ಎರಡು ಮೂರು ನಿಮಿಷಗಳ ನಂತರ ಡೆಲ್ಲಾ ಕೂದಲನ್ನು ಪುನಃ ಕೂಡಿಸಿ ಗಂಟು ಕಟ್ಟಿಕೊಂಡಳು. ಏನೋ ಉದ್ವೇಗ, ಅವಳ ಕಣ್ಣುಗಳಲ್ಲಿ ನೀರು ತುಂಬಿ ಎರಡು ಹನಿ ಜೀರ್ಣವಾದ ಬಣ್ಣ ಹೋದ ಜಮಖಾನದ ಮೇಲೆ ಉರುಳಿತು, ಸ್ಟ್ಯಾಂಡ್ ಮೇಲಿದ್ದ ಹಳೆಯ ಕಂದು ಬಣ್ಣದ ಕೋಟ್ ಹಾಕಿಕೊಂಡು, ಹ್ಯಾಟ್ ಧರಿಸಿ ಮನೆಗೆ ಬೀಗಹಾಕಿ, ಹೊರಬಿದ್ದ ಡೆಲ್ಲಾ ದಾಪುಗಾಲು ಹಾಕುತ್ತಾ 'ಮ್ಯಾಡಂ ಸೊಫ್ರೊನಿ: ಎಲ್ಲಾ ಬಗೆಯ ಕೇಶ ಸಾಮಗ್ರಿಗಳು' ಎಂದು ಬೋರ್ಡ್ ಇದ್ದ ಮಳಿಗೆಗೆ ಬಂದಳು. ಸೊಫ್ರೊನಿ ಅಗಾಧ ಶ್ವೇತ ತ್ವಚೆಯ ಧಡೂತಿ ಹೆಂಗಸು. ಏದುಸಿರು ಬಿಡುತ್ತಿದ್ದ ಡೆಲ್ಲಾಳನ್ನು ನೋಡುತ್ತಾ 'ಏನುಬೇಕಾಗಿತ್ತು?' ಎಂದಳು.

'ನನ್ನ ತಲೆ ಕೂದಲನ್ನು ಕೊಂಡುಕೊಳ್ಳುತ್ತೀರಾ?'

'ಹೂಂ, ಹ್ಯಾಟನ್ನು ತೆಗೆ. ನಿನ್ನ ಕೂದಲು ಹೇಗಿದೆ? ಎಷ್ಟಿದೆ? ನೋಡೋಣ.'

ಡೆಲ್ಲಾ ಹ್ಯಾಟ್ ತೆಗೆದು, ಹೇರ್‌ಪಿನ್ನುಗಳನ್ನು ಕಿತ್ತಾಗ ಹೊಂಬಣ್ಣದ, ಅಪ್ರತಿಮ ಕೇಶರಾಶಿ ಜಲಪಾತದಂತೆ ಕೆಳಗಿಳಿಯಿತು. ಅನುಭವಸ್ಥ ಕೈಗಳಿಂದ ಕೂದಲನ್ನು ಹಿಡಿದು ಪರೀಕ್ಷಿಸಿ, 'ಇಪ್ಪತ್ತು ಡಾಲರ್' ಎಂದಳು ಸೊಫ್ರೊನಿ. ಡೆಲ್ಲಾ 'ಆಯಿತು' ಎಂದು ಹೇಳಿ ತನ್ನ ಒಪ್ಪಿಗೆ ಸೂಚಿಸಿದಳು.

ಮುಂದಿನ ಎರಡು ಗಂಟೆಗಳು ಕಳೆದಿದ್ದೇ ಗೊತ್ತಾಗಲಿಲ್ಲ ಡೆಲ್ಲಾಗೆ. ಜಿಮ್‌ಗಾಗಿ

ಅವಳು ಸ್ಟೋರ್ಸ್‌ನಲ್ಲಿರುವ ವಸ್ತುಗಳನ್ನೆಲ್ಲಾ ಹುಡುಕುತ್ತಿದ್ದಳು. ಕೊನೆಗೂ ಅವಳು ಇಷ್ಟಪಟ್ಟಿದ್ದು ಸಿಕ್ಕಿತು. ಅದೊಂದು ಪ್ಲಾಟಿನಂ ಚೈನ್. ಜಿಮ್‌ನ ಸುಂದರ ಗಡಿಯಾರಕ್ಕೆ ಹೇಳಿ ಮಾಡಿಸಿದಂತಿರುವ ಚೈನ್, ಜಿಮ್ ನಂತೆಯೇ ಸರಳ, ಸುಂದರ. ಇಂತಹ ಚೈನ್ ಇನ್ನೆಲ್ಲೂ ಸಿಕ್ಕಲಾರದು. ಬೆಲೆ ಇಪ್ಪತ್ತೊಂದು ಡಾಲರ್, ಹಣ ಕೊಟ್ಟು ಚೈನನ್ನು ತೆಗೆದುಕೊಂಡು ಮನೆಗೆ ಬಂದಳು ಡೆಲ್ಲಾ. ಅವಳಲ್ಲಿ ಈಗ ಉಳಿದದ್ದು ಎಂಬತ್ತೇಳು ಸೆಂಟ್ಸ್‌ಗಳು ಮಾತ್ರ.

ಜಿಮ್ ಇನ್ನು ಮುಂದೆ ಜೇಬಿನಿಂದ ಗಡಿಯಾರ ಹೊರತೆಗೆದು ಟೈಂ ನೋಡಿಕೊಳ್ಳಲು ಸಂಕೋಚ ಪಡಬೇಕಾಗಿಲ್ಲ. ಆ ಸುಂದರ ಗಡಿಯಾರಕ್ಕೆ ಚೈನ್ ಬದಲು ಅಸಹ್ಯವಾದ ತೊಗಲಿನ ಪಟ್ಟಿ ಇದ್ದುದರಿಂದ ಕದ್ದು ಮುಚ್ಚಿ ಗಡಿಯಾರವನ್ನು ಈಚೆ ತೆಗೆದು ಗಂಟೆ ನೋಡಿಕೊಳ್ಳಬೇಕಾಗಿತ್ತು ಜಿಮ್.

ಮನೆಗೆ ಬಂದ ಸ್ವಲ್ಪ ಹೊತ್ತಿನ ಮೇಲೆ ಏರಿದ ಉನ್ಮತ್ತತೆ ನಿಧಾನವಾಗಿ ಇಳಿದು, ತಿಳಿಯಾಗಿ ಯೋಚಿಸುವ ಸ್ಥಿತಿಗೆ ಬಂದಳು ಡೆಲ್ಲಾ, ಕ್ರಾಪ್ ಮಾಡಿಸಿಕೊಂಡ ಅವಳು ಶಾಲೆಯ ತುಂಟು ಹುಡುಗನಂತೆ ಕಾಣುತ್ತಿದ್ದಳು, ಕನ್ನಡಿ ನೋಡಿಕೊಂಡು.

'ಜಿಮ್ ಕೋಪಗೊಂಡು ನನ್ನನ್ನು ಕೊಂದು ಹಾಕಬಹುದು, ಇಲ್ಲದಿದ್ದರೆ ನನ್ನನ್ನು ನೋಡುತ್ತಾ, ಕೋನಿ ದ್ವೀಪದ ಸಂಗೀತೋತ್ಸವದಲ್ಲಿ ಪಾಲುಗೊಳ್ಳುವ ಹುಡುಗಿಯಂತೆ ಕಾಣುತ್ತೀಯಾ' ಅನ್ನಬಹುದು. ಆದರೆ ಇನ್ನೇನನ್ನೂ ಮಾಡಲು ಸಾಧ್ಯವಿರಲಿಲ್ಲ. ಒಂದು ಡಾಲರ್ ಎಂಬತ್ತೇಳು ಸೆಂಟುಗಳಲ್ಲಿ ಏನುತರಲು ಸಾಧ್ಯ?' ಎಂದುಕೊಂಡಳು.

ಸಂಜೆ ಏಳು ಗಂಟೆ. ಕಾಫಿಮಾಡಿ ಸ್ಟೌವ್ ಮೇಲೆ ಚಾಪ್ಸ್‌ಮಾಡಲು ತವೆ ಇಟ್ಟಳು. ಜಿಮ್ ಸಂಜೆ ಮನೆಗೆ ಬರುವುದು ಎಂದೂ ತಡವಾಗುವುದಿಲ್ಲ. ಚೈನನ್ನು ಕೈಯಲ್ಲಿಟ್ಟುಕೊಂಡು, ಬಾಗಿಲಬಳಿ ಇಟ್ಟಿದ್ದ ಮೇಜಿನ ಮೇಲೆ ಕುಳಿತುಕೊಂಡಳು ಡೆಲ್ಲಾ. ಮೆಟ್ಟಿಲು ಹತ್ತುವ ಶಬ್ದ. ಡೆಲ್ಲಾ 'ದೇವರೇ, ಜಿಮ್ ಕಣ್ಣುಗಳಿಗೆ ನಾನು ಇನ್ನೂ ಅಂದವಾಗಿರುವಂತೆ ಮಾಡಪ್ಪ' ಎಂದು ಮನಸ್ಸಿನಲ್ಲೇ ಪ್ರಾರ್ಥಿಸಿದಳು.

ಬಾಗಿಲು ತೆರೆಯಿತು. ಜಿಮ್ ಒಳಬಂದು ಬಾಗಿಲು ಹಾಕಿದ. ಏಕೋ ಏನೋ, ಅವನು ಸೀರಿಯಸ್ ಆಗಿ ಕಾಣುತ್ತಿದ್ದ. ಪಾಪ, ಅವನಿಗೆ ಇನ್ನೂ ಇಪ್ಪತ್ತೆರಡು ವರ್ಷ. ಆಗಲೇ ಸಂಸಾರದ ಹೊಣೆ, ಹಾಕಿಕೊಳ್ಳಲು ಓವರ್‌ಕೋಟು ಇಲ್ಲ; ಕೈಗವಸೂ ಅವಶ್ಯಕವಾಗಿತ್ತು.

ಜಿಮ್ ಒಂದೇ ಸಮನೆ ಡೆಲ್ಲಾಳನ್ನು ನೋಡಿದ. ಆ ನೋಟದಲ್ಲಿ ಏನಿತ್ತು? ಕ್ರೋಧ, ಅಚ್ಚರಿ, ಹೆದರಿಕೆ? ಡೆಲ್ಲಾಗೆ ಗೊತ್ತಾಗಲಿಲ್ಲ. 'ಜಿಮ್ ಏಕೆ ನನ್ನನ್ನು ಹಾಗೆ ನೋಡುತ್ತಿದ್ದೀಯಾ? ನಾನು ಕೂದಲನ್ನು ಮಾರಿಕೊಂಡೆ. ಏಕೆಗೊತ್ತೇ? ನಿನಗೆ ಕ್ರಿಸ್ಮಸ್ ಉಡುಗೊರೆ ಕೊಂಡುಕೊಳ್ಳುವುದಕ್ಕೆ. ಈ ಸಾರಿ ನಿನಗೆ ಉಡುಗೊರೆ ಕೊಡದೆ ನಾನು ಬದುಕಲು ಸಾಧ್ಯವೇ ಇರಲಿಲ್ಲ! ಕೂದಲು ಬೆಳೆಯುತ್ತದೆ ಬಿಡು. ನಿನಗೆ ಎಂತಹ ಉಡುಗೊರೆ ತಂದಿದ್ದೇನೆ ಗೊತ್ತಾ?'

'ಕೂದಲು ಈಗಿಲ್ಲ ಎಂದೇನೂ ನಿನ್ನ ಮೇಲಿರುವ ನನ್ನ ಪ್ರೀತಿ ಕಡಿಮೆಯಾಗಿಲ್ಲ,

ಡೆಲ್ಲಾ, ನಾನು ಏನು ತಂದಿದ್ದೇನೆ ನೋಡು' ಎನ್ನುತ್ತಾ ಒಂದು ಪೊಟ್ಟಣವನ್ನು ಜಿಮ್ ಹೆಂಡತಿಯ ಕೈಗೆ ಕೊಟ್ಟ.

ಡೆಲ್ಲಾ ಪ್ಯಾಕೆಟ್ ಬಿಚ್ಚಿ ನೋಡಿದಳು. ಒಳಗಿರುವುದನ್ನು ಕಂಡು ಆದ ಸಂತೋಷಕ್ಕೆ ಕೂಗಿಕೊಂಡಳು. ಅವಳ ಕಣ್ಣುಗಳಿಂದ ಆನಂದಬಾಷ್ಪ ಉರುಳಿತು. ಪ್ಯಾಕೆಟ್‌ನಲ್ಲಿ ಇದ್ದದ್ದು ಒಂದು ಸೆಟ್ ಬಾಚಣಿಗೆಗಳು, ಸೊಗಸಾದ ಆಮೆಯ ಚಿಪ್ಪಿನಿಂದ ಮಾಡಿದ್ದು, ರತ್ನ ಶಿಲಾ-ಖಚಿತ ಹಿಡಿಗಳುಳ್ಳ ಅಂತಹ ಬಾಚಣಿಗೆಗಳನ್ನು ದೊಡ್ಡ ದೊಡ್ಡ ಅಂಗಡಿಗಳಲ್ಲಿ ಹೊರಕ್ಕೆ ಪ್ರದರ್ಶನಕ್ಕಿಟ್ಟ ಗಾಜಿನ ಬೀರುಗಳಲ್ಲಿ ನೋಡಿದ್ದ ಅವಳಿಗೆ ಇಷ್ಟವಾದರೂ ತನ್ನಿಂದ ಕೊಳ್ಳಲು ಸಾಧ್ಯವೇ ಇಲ್ಲ ಎಂದು ನಂಬಿದ್ದಳು. ಆದರೆ ಈಗ ಅವು ಅವಳದ್ದಾಗಿವೆ. ಅವನ್ನು ಎದೆಗೆ ತಬ್ಬಿಕೊಳ್ಳುತ್ತಾ 'ನನ್ನ ಕೂದಲು ಬೇಗ ಬೇಗ ಬೆಳೆಯುತ್ತದೆ' ಎಂದುಕೊಂಡಳು ಡೆಲ್ಲಾ.

ಜಿಮ್ ಅವನಿಗೆ ತಂದ ಉಡುಗೊರೆಯನ್ನು ಇನ್ನೂ ನೋಡಿರಲಿಲ್ಲ. ಅಂಗೈಯಲ್ಲಿ ಚೈನನ್ನು ಹಿಡಿದು, ಡೆಲ್ಲಾ ಅವನಿಗೆ ತೋರಿಸುವಾಗ ಪ್ಲಾಟಿನಂ ಚೈನಿನ ಹೊಳಪು ಅವಳ ಅತಿಯಾದ ಉತ್ಸಾಹವನ್ನು ಪ್ರತಿಫಲಿಸುತ್ತಿತ್ತು.

'ತುಂಬಾ ಚೆನ್ನಾಗಿದೆ ಅಲ್ಲವೇ?' ಊರೆಲ್ಲಾ ಹುಡುಕಿ ತಂದೆ. ಈಗ ದಿನಕ್ಕೆ ನೂರು ಸಲ ಗಡಿಯಾರವನ್ನು ನೋಡಿಕೊಳ್ಳಬಹುದು. ಗಡಿಯಾರ ಕೊಡು, ನಾನೇ ಗಡಿಯಾರಕ್ಕೆ ಚೈನು ಹಾಕುತ್ತೇನೆ' ಎಂದಳು ಡೆಲ್ಲಾ.

ಜಿಮ್ ಹಾಸಿಗೆ ಮೇಲೆ ಉರುಳಿ ನಗುತ್ತಾ 'ಡೆಲ್ಲಾ, ನಾವು ಕ್ರಿಸ್ಮಸ್ ಉಡುಗೊರೆಗಳನ್ನು ಸ್ವಲ್ಪ ದಿನ ಹಾಗೇ ಇಟ್ಟುಕೊಂಡಿರೋಣ. ಅವು ಈಗ ಉಪಯೋಗಕ್ಕೆ ಬರುವುದಿಲ್ಲ. ನಿನಗೆ ಬಾಚಣಿಗೆ ಖರೀದಿಸಲು ನಾನು ಗಡಿಯಾರ ಮಾರಿಕೊಂಡೆ. ಈಗ ಚಾಪ್ಸ್ ಮಾಡು, ಹೊಟ್ಟೆ ಹಸಿವು, ತಿನ್ನೋಣ' ಎಂದ.

ಗೊಲ್ಗೊಥದ ಹಿಂದಣಿಂದುದಿಸಿದ ಸುಧಾಸೂತಿ
ಬೆಳ್ಗೊಡೆಯನಮೃತನಾ ಮೃತಮೂರ್ತಿಗೆತ್ತಿಹಂ;
ಮುನ್ನ ಕೀರ್ತಿಯ ಹಾಲ ಹೊನಲಂತೆ, ತಾನನ್ನೆ-
ಗಂಬೀರಿದಕ್ಕರೆಯ ಬಲೆಯಂತೆ, ಬೋಧಿಸಿದ
ನಿತ್ಯಜೀವನದ ಧವಳಿಮೆಯಂತೆ, ತನ್ನಾತ್ಮ-
ದಮೃತತ್ವದಂತೆ ವಿಸಟಂಬರಿಯೆ ಬೆಳದಿಂಗ-
ಳೆತ್ತಲುಂ ನಿಸ್ಪಂದಮೆತ್ತಲುಂ ಶಾಂತಂ

ಮಂಜೇಶ್ವರ ಗೋವಿಂದ ಪೈ

ವಿಜ್ಞಾನ ಮತ್ತು ಭಾರತೀಯ ಸಮಾಜ

ಬಿ. ಆರ್. ಪರಿಣೀತ

ವಿಜ್ಞಾನ ಮತ್ತು ತಂತ್ರವಿದ್ಯೆ ವಿಜೃಂಭಿಸುತ್ತ ಜನಜೀವನದ ಎಲ್ಲ ಹಾಸು ಹೊಕ್ಕುಗಳನ್ನೂ ವ್ಯಾಪಿಸಿರುವ ವರ್ತಮಾನ ಯುಗದಲ್ಲಿ ಸಮಾಜ-ವಿಜ್ಞಾನ ಅಂತರ ಕ್ರಿಯೆಯ ಫಲವಾಗಿ ನೂತನ—ಅಂದರೆ ಈ ಹಿಂದಿನ ಯುಗಗಳಲ್ಲಿ ಪ್ರಕಾಶಕ್ಕೆ ಬಂದಿರದ—ಸಾಮಾಜಿಕ ಬಲವೊಂದು ಮೈದಳೆದಿದೆ: ವೈಜ್ಞಾನಿಕ ಸಂಸ್ಕೃತಿ. ಆಧುನಿಕ ವಿಜ್ಞಾನ ಮತ್ತು ಇದರ ಶಿಶು ಭಾರತದ ಪ್ರಾಚೀನ ಸಮಾಜಕ್ಕೆ ಮತ್ತು ಇದರ ಸಂಸ್ಕೃತಿಗೆ ಬ್ರಿಟಿಷ್ ಪ್ರಭುಗಳ ಮೂಲಕ ಬಂದುವು—ಸ್ಥೂಲವಾಗಿ ೧೯ನೆಯ ಶತಮಾನದ ಉತ್ತರಾರ್ಧದಲ್ಲಿ. ಪಾಶ್ಚಾತ್ಯ ದೇಶಗಳಲ್ಲಿ ವೈಜ್ಞಾನಿಕ ಸಂಸ್ಕೃತಿ ಕ್ರಮಶಃ ಅಭಿವರ್ಧಿಸಿದರೆ ಭಾರತದಲ್ಲಿ ಈ ಆಮದು ಸಂಸ್ಕೃತಿ ಹಠಾತ್ತನೆ—ಅಂದರೆ ಬ್ರಿಟಿಷ್ ಪ್ರಭುತ್ವದ ಆಗಮನದೊಂದಿಗೆ—ಜನಜೀವನದ ಮೇಲೆ ಪ್ರಭಾವ ಬೀರ ತೊಡಗಿತು. ಇದರ ಫಲಾಫಲಗಳೇನು?

ಭಾರತೀಯರಲ್ಲಿ ಸೃಜನಶೀಲತೆಯ ಬೆಳವಣಿಗೆ ಸ್ವಲ್ಪಕಾಲ ಕುಂಠಿತವಾಯಿತು. ಆದರೆ ಕ್ರಮೇಣ ಅವರು ಪಾಶ್ಚಾತ್ಯರ ವಿಜ್ಞಾನ ಮತ್ತು ಸಾಹಿತ್ಯ ಬಳಸಿಕೊಂಡು, ವೈಜ್ಞಾನಿಕ ಹೊರನೋಟ ಬೆಳೆಸಿಕೊಂಡರು. ಈ ಪರಿವರ್ತನೆ ಹೆಚ್ಚಾಗಿ ವಿದ್ಯಾವಂತರಲ್ಲಿ ಉಂಟಾಯಿತು. ವೈಚಾರಿಕ ಮನೋಭಾವದ ಬೆಳವಣಿಗೆಯಿಂದಾಗಿ, ಕೆಲವು ಮಂದಿ ಪ್ರಜ್ಞಾಶೀಲರು ಭಾರತೀಯ ಸಮಾಜದಲ್ಲಿ ಮೂಢನಂಬಿಕೆಗಳಾಗಿ ಬೆಳೆದಿದ್ದ ದುಷ್ಟ ಹಾಗೂ ಅರ್ಥಹೀನ ಆಚರಣೆಗಳನ್ನು ನಿರ್ಮೂಲಿಸಲು ಪ್ರಯತ್ನಿಸಿದರು.

ಭಾರತದ ಭವ್ಯ ಪ್ರಾಚೀನ ನಾಗರಿಕತೆ, ಭಾರತದಲ್ಲಿ ಮೂಡುತ್ತಿದ್ದ ವೈಜ್ಞಾನಿಕ ಪ್ರಕ್ರಿಯೆಯನ್ನು ಕುರಿತು ಬೆಳಕು ಚೆಲ್ಲುತ್ತದೆ. ಪ್ರಾಚೀನ ಭಾರತದಲ್ಲಿ, ಋಷಿಮುನಿಗಳೇ ವೈಜ್ಞಾನಿಕ ಹೊರನೋಟ ಹಾಗೂ ವೈಚಾರಿಕ ಮನೋಭಾವವನ್ನು ಪ್ರತಿಪಾದಿಸಿದರು. ಋಷಿ ಚರಕ, ಧನ್ವಂತರಿ ಮತ್ತು ವೃದ್ಧ ವಗಭಟ್ಟ ವೈದ್ಯಕೀಯ ಕ್ಷೇತ್ರಕ್ಕೆ ಗಮನಾರ್ಹ ರೀತಿಯಲ್ಲಿ ಕೊಡುಗೆ ನೀಡಿದರು. ಗಣಿತಶಾಸ್ತ್ರ ಹಾಗೂ ಖಗೋಳ ಶಾಸ್ತ್ರಗಳಿಗೆ ಕೊಡುಗೆ ನೀಡಿದ ಪ್ರಾಚೀನ ಮಹನೀಯರಲ್ಲಿ ಆರ್ಯಭಟ್ಟ ಅಗ್ರಸ್ಥಾನ ಪಡೆದಿದ್ದಾನೆ. ವರಾಹಮಿಹಿರನನ್ನು ಮರೆಯುವಂತಿಲ್ಲ. ಭಾರತೀಯರು ವೈಜ್ಞಾನಿಕ ಹೊರನೋಟ ಹೊಂದಿದ್ದರು ಎನ್ನಲು

ಅನೇಕ ಮಾಹಿತಿಗಳು ಒದಗಿವೆ. ಶಿಲ್ಪವೇದ ಉಪವೇದಗಳಲ್ಲಿ ಒಂದಾಗಿತ್ತು. ಆದ್ದರಿಂದ ಭಾರತೀಯರು ಗಣಿತಕ್ಷೇತ್ರದಲ್ಲಿ ಮತ್ತು ವಾಸ್ತುಶಿಲ್ಪಶಾಸ್ತ್ರದಲ್ಲಿ ಉತ್ಕೃಷ್ಟಮಟ್ಟದ ಮುನ್ನಡೆ ಸಾಧಿಸಿದ್ದರೆಂಬುದು ಸ್ಪಷ್ಟ. ಆದರೆ ಪಾಶ್ಚಾತ್ಯರಿಗೆ ಭಾರತೀಯರ ಈ ವೈಜ್ಞಾನಿಕ ಹೊರನೋಟ ಬಿಡಿಸಲಾರದ ಒಗಟಾಗಿ ಉಳಿದಿದೆ.

ಭಾರತೀಯ ಚಿಂತನೆ ಧಾರ್ಮಿಕ ಹಾಗೂ ವೈಜ್ಞಾನಿಕ ಹೊರನೋಟಗಳ ಕುತೂಹಲಕಾರಿ ಸಮ್ಮಿಶ್ರಣ. ಭಾರತೀಯರು ತಮ್ಮ ಅನಿಸಿಕೆಗಳನ್ನು ಮಂಡಿಸಿರುವ ಶೈಲಿಯಲ್ಲಿ ವಿರೋಧಾಭಾಸ ಅನೇಕ ಬಾರಿ ಕಂಡು ಬಂದಿದೆ. ಆರ್ಯಭಟ್ಟ ಗ್ರಹಣ ಕುರಿತು ವಿವರಣೆ ನೀಡಿದುದು, ಆ ಕಾಲದ ಅದ್ಭುತವಾದ ವೈಜ್ಞಾನಿಕ ಅನ್ವೇಷಣೆಯಾಗಿತ್ತು, ಆದರೆ ಅದೇ ಆರ್ಯಭಟ್ಟ ರಾಹು ಚಂದ್ರನನ್ನು ನುಂಗುತ್ತಾನೆ ಎಂಬುದಾಗಿಯೂ ಹೇಳಿದನು. ಈ ಕಾಲ್ಪನಿಕ ಕಥೆಯಿಂದಾಗಿ ಅದ್ಭುತವಾದ ವೈಜ್ಞಾನಿಕ ಅನ್ವೇಷಣೆಯೊಂದು ಸತ್ವರಹಿತವೆನಿಸಿಕೊಂಡಿತು.

ಬ್ರಿಟಿಷರು ಭಾರತದಲ್ಲಿ ತಮ್ಮ ವಸಾಹತುಶಾಹಿ ಆಳ್ವಿಕೆಯನ್ನು ಪ್ರಾರಂಭಿಸಿದಾಗಿನಿಂದ, ಈ ದೇಶದಲ್ಲಿ ಮುಂದಿನ ವೈಜ್ಞಾನಿಕ ಬೆಳವಣಿಗೆಯು ಗತಿ ಬದಲಾವಣೆ ಹೊಂದಿತು. ಭಾರತೀಯರಿಗೆ ಪರಿಚಯ ಉಂಟಾದ ಪಾಶ್ಚಾತ್ಯ ವಿಜ್ಞಾನ ಪೂರ್ಣವಾಗಿ ಬೆಳೆದಿತ್ತು. ಹೀಗಾಗಿ ಭಾರತೀಯರ ಸಾಂಪ್ರದಾಯಿಕ ವಿಜ್ಞಾನಕ್ಕೆ ಅದು ಯಾವ ಸಂಬಂಧವನ್ನು ಹೊಂದಿರಲಿಲ್ಲ. ಆಧುನಿಕ ಯುಗದಲ್ಲಿ ಭಾರತೀಯ ವಿಜ್ಞಾನಿಗಳು ಪ್ರಪಂಚದ ವಿಜ್ಞಾನ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಶ್ರೀನಿವಾಸ ರಾಮಾನುಜನ್, ಸಿ. ವಿ. ರಾಮನ್, ಎಸ್. ಎನ್. ಬೋಸ್, ಎಸ್. ಚಂದ್ರಶೇಖರ್ ಮೊದಲಾದವರ ಕೊಡುಗೆಯಿಂದಾಗಿ ಭಾರತ ಪ್ರಪಂಚದ ವಿಜ್ಞಾನ ಕ್ಷೇತ್ರದಲ್ಲಿ ವಿಶೇಷ ಸ್ಥಾನ ಪಡೆದಿದೆ.

ಇಂದು ಭಾರತೀಯರು ತಮ್ಮ ಧಾರ್ಮಿಕ ನಂಬಿಕೆಗಳನ್ನು ತ್ಯಜಿಸದಿದ್ದರೂ ಸ್ವತಂತ್ರ ಚಿಂತನೆ ಬೆಳೆಸಿಕೊಳ್ಳಬಹುದೆಂದು ಅರಿತಿದ್ದಾರೆ. ಇತ್ತೀಚಿನ ಕಾಲದಲ್ಲಿ ಧಾರ್ಮಿಕ ತತ್ವಗಳೊಂದಿಗೆ ವೈಜ್ಞಾನಿಕ ಹೊರನೋಟವನ್ನೂ ಭಾರತೀಯ ಸಾಹಿತ್ಯ ಪ್ರತಿಬಿಂಬಿಸುತ್ತಿದೆ. 'ಹಿಂದೂಧರ್ಮ ಆಧ್ಯಾತ್ಮಿಕವಾಗಿರುವುದಕ್ಕಿಂತ ಹೆಚ್ಚು ವೈದಿಕವಾಗಿದೆ' ಎಂಬುದನ್ನು ಟಿ. ಪಿ. ಕೈಲಾಸಂರವರ ನಾಟಕವೊಂದರಲ್ಲಿ ಕಾಣಬಹುದು. ಇದರಿಂದ ಭಾರತೀಯರ ಹೊರನೋಟದಲ್ಲಿ ಉಂಟಾಗುತ್ತಿದ್ದ ಬದಲಾವಣೆ ಸ್ಪಷ್ಟವಾಗಿ ತೋರುತ್ತದೆ. ಆಧುನಿಕ ವಿಜ್ಞಾನಿಗಳೂ ಯಾವುದೋ ದಿವ್ಯ ಶಕ್ತಿಯನ್ನು ಕುರಿತು ತಮ್ಮದೇ ಆದ ರೀತಿಯಲ್ಲಿ ನಂಬಿಕೆ ಹೊಂದಿದ್ದರು ಎಂಬ ವಿಷಯ ಕುತೂಹಲಕರ. ಮನುಷ್ಯನ ವಿಧಿ ಹಾಗೂ ಕರ್ಮಗಳಿಗೆ ಸಂಬಂಧಿಸಿದ ದೇವರಲ್ಲಿ ಐನ್‌ಸ್ಟೈನ್‌ರವರಿಗೆ ನಂಬಿಕೆ ಇರಲಿಲ್ಲ. ಆದರೆ, ಸರ್ವಜನರ ಸಾಮರಸ್ಯದಲ್ಲಿ ತೋರಿಬರುವ ದೇವರನ್ನು ನಂಬುತ್ತಿದ್ದರು. ನೊಬೆಲ್ ಪ್ರಶಸ್ತಿ ವಿಜೇತ ಡಾ|| ಹರ್ಗೋಬಿಂದ್ ಖುರಾನಾರವರು ೧೯೭೭ರಲ್ಲಿ ದೆಹಲಿಯನ್ನು ಸಂದರ್ಶಿಸಿದಾಗ 'ನಾವೆಲ್ಲರೂ ಯಾವುದೋ ಒಂದು ರೀತಿಯು ದೇವರನ್ನು ನಂಬಿದ್ದೇವೆ. ನಮಗೆ ದೇವರ ಬೆಂಬಲ ಅವಶ್ಯವಾದುದು ಎಂದು ಹೇಳಿ

ದರು. ಎಂದೇ, ಭಾರತೀಯರು ಧಾರ್ಮಿಕ ಹೊರನೋಟವನ್ನು ಹೊಂದಿರುವರೆಂಬ ಕಾರಣದಿಂದ ವೈಜ್ಞಾನಿಕ ಹೊರನೋಟದಿಂದ ದೂರವಾಗಿದ್ದಾರೆಂದರೆ ತಪ್ಪಾಗುತ್ತದೆ. ಸಾಂಪ್ರದಾಯಿಕ ಹಿನ್ನೆಲೆಯಿಂದ ಬಂದ ಭಾರತೀಯ ವಿಜ್ಞಾನಿಗಳೇ, ಪ್ರಪಂಚದ ವಿಜ್ಞಾನ ಕ್ಷೇತ್ರಕ್ಕೆ ಮಹತ್ವಪೂರ್ಣ ಕೊಡುಗೆ ಸಲ್ಲಿಸಿದ್ದಾರೆಂಬ ಸಂಗತಿ ಗಮನಾರ್ಹ.

ವಿಜ್ಞಾನ ಮತ್ತು ತಂತ್ರವಿದ್ಯೆಯ ಬೆಳವಣಿಗೆ ಪ್ರಪಂಚಾದ್ಯಂತ ಜನರ ಆರ್ಥಿಕ ಜೀವನದ ಮೇಲೆ ಅಪಾರ ಪ್ರಭಾವ ಬೀರಿದೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಯಂತ್ರಗಳ ಬಳಕೆಯಿಂದಾಗಿ ಅಪಾರ ಆರ್ಥಿಕ ಅಭಿವೃದ್ಧಿಯುಂಟಾಯಿತು. ಬೃಹತ್‌ಪ್ರಮಾಣದಲ್ಲಿ ಉತ್ಪಾದನೆ ಮತ್ತು ಭೂ ಸಂಪನ್ಮೂಲಗಳ ಬಳಕೆಯಿಂದಾಗಿ ಜನರ ಜೀವನ ಮಟ್ಟ ಉತ್ತಮವಾಗಲು ಸಾಧ್ಯವಾಯಿತು. ಕಾಲ ಹಾಗೂ ಶ್ರಮದ ಉಳಿತಾಯದಿಂದಾಗಿ ನಾಗರೀಕತೆಯ ಮುನ್ನಡೆಗೆ ಹೆಚ್ಚು ಅವಕಾಶ ಉಂಟಾಯಿತು. ಭಾರತದಲ್ಲಿ ಕೈಗಾರೀಕರಣ ಅದರದೇ ಆದ ರೀತಿಯಲ್ಲಿ ಪ್ರಭಾವಬೀರಿತು. ಮೊದಲಿಗೆ, ಬ್ರಿಟಿಷರು ಭಾರತದ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದಾಗ, ಯಂತ್ರದಿಂದ ತಯಾರಿಸಲಾದ ವಸ್ತುಗಳು ಭಾರತದ ಕೈಗಾರಿಕೆಗಳಿಗೆ ತೀವ್ರ ದಕ್ಕೆಯುಂಟುಮಾಡಿದುವು. ಕೈಗಾರೀಕರಣ ಭಾರತದ ಆರ್ಥಿಕ ವ್ಯವಸ್ಥೆಯನ್ನು ನಾಶಪಡಿಸುತ್ತದೆ ಎಂದು ಗಾಂಧೀಜಿ ಭಾವಿಸಿದರು. ನಿಜಕ್ಕೂ ಕೈಗಾರೀಕರಣ ಅನೇಕ ಹೊಸ ಆರ್ಥಿಕ ಸಮಸ್ಯೆಗಳಿಗೆ ಕಾರಣವಾಗಿತ್ತು ಮತ್ತು ಗಾಂಧೀಜಿಯ ಆ ಕಾಲದಲ್ಲಿ ಪ್ರಚಲಿತವಾಗಿದ್ದ ಅನಿಸಿಕೆಗಳನ್ನು ಪ್ರತಿಬಿಂಬಿಸಿದರು. ಪಾಶ್ಚಾತ್ಯರ ಲೌಕಿಕ ಹೊರನೋಟ ಹಾಗೂ ಸಾಮಾಜಿಕ ಮೌಲ್ಯಗಳ ಕುಸಿತ ಕಂಡು ಭಾರತೀಯರ ಭಾವನಾತ್ಮಕ ಹೊರನೋಟಕ್ಕೆ ದಿಗ್ಭ್ರಮೆಯುಂಟಾದಂತಾಯಿತು.

ಭಾರತದಲ್ಲಿ, ರಾಜಕೀಯ ಹೊರನೋಟದಲ್ಲೂ ವೈಜ್ಞಾನಿಕತೆ ಮತ್ತು ವೈಚಾರಿಕತೆಯನ್ನು ತುಂಬಲು ಪ್ರಯತ್ನಿಸಲಾಯಿತು. ರಾಷ್ಟ್ರೀಯತೆಯ ಬೆಳವಣಿಗೆಗೆ ವೈಜ್ಞಾನಿಕ ಮಾರ್ಗವೇ ಕಾರಣ ಎಂದು ಭಾವಿಸಲಾಗಿದೆ. ಈ ನಿಟ್ಟಿನಲ್ಲಿ ಚಿಂತನೆ ನಡೆಸಿದ ರಾಜಕಾರಣಿಗಳಲ್ಲಿ ಜವಹರಲಾಲ್ ನೆಹರು ಅಗ್ರಗಣ್ಯರು. ಅವರು ಪೂರ್ಣ ಮನಸ್ಸಿನಿಂದ ವೈಜ್ಞಾನಿಕ ಬೆಳವಣಿಗೆಯನ್ನು ಪ್ರತಿಪಾದಿಸಿದರು. ವಿಜ್ಞಾನ ಜೀವನದ ಜೀವಾಳ ಮತ್ತು ಅದಿಲ್ಲದಿದ್ದರೆ ಆಧುನಿಕ ಜಗತ್ತು ನಾಶವಾಗುವುದೆಂದು ಭಾವಿಸಿದರು. ಆರ್ಥಿಕ ನೀತಿಗಳು ನೆಹರುರವರನ್ನು ಅನಿವಾರ್ಯವಾಗಿ ವಿಜ್ಞಾನದತ್ತ ಕರೆದೊಯ್ದವು ಮತ್ತು ನಮ್ಮ ಬದುಕಿನ ಎಲ್ಲ ಸಮಸ್ಯೆಗಳಿಗೂ ವೈಜ್ಞಾನಿಕ ಮಾರ್ಗದಿಂದ ಮಾತ್ರ ಪರಿಹಾರ ಕಂಡುಕೊಳ್ಳಲು ಸಾಧ್ಯವೆಂಬುದನ್ನು ಅರಿತುಕೊಂಡರು.

ವಿಜ್ಞಾನ ಮತ್ತು ತಂತ್ರ ವಿದ್ಯೆಯ ಬೆಳವಣಿಗೆಯಿಂದಾಗಿ ಶಿಕ್ಷಣ ಮತ್ತು ವೃತ್ತಿಯನ್ನು ಕುರಿತು ಜನರ ಹೊರನೋಟದಲ್ಲಿಯೂ ಬದಲಾವಣೆಗಳು ಉಂಟಾಗಿವೆ. ಸಮಾಜದಲ್ಲಿ ನೌಕರರಾಗಿ ಉದ್ಯೋಗಗಳ ಪ್ರಾಮುಖ್ಯವನ್ನು ಕಡಿಮೆಮಾಡಬೇಕು. ರೈತರ, ಕಸುಬುದಾರರ ಹಾಗೂ ತಾಂತ್ರಿಕ ಹಾಗೂ ಉತ್ಪಾದಕ ವೃತ್ತಿಗಳಲ್ಲಿ

ನಿರಕರಾದವರ ಪ್ರಾಮುಖ್ಯವನ್ನು ಹೆಚ್ಚಿಸಲು ಪ್ರಜ್ಞಾಪೂರ್ವಕ ಪ್ರಯತ್ನ ನಡೆಸಬೇಕೆಂಬ ಅನಿಸಿಕೆ ಪ್ರಬಲವಾಗುತ್ತಿದೆ. ಸಮಾಜದ ಏಕಮುಖ ಮೌಲ್ಯ ಪದ್ಧತಿಯಿಂದಾಗಿ ಮಾನವರಿಗೆ ಶಿಕ್ಷಣವೆಂಬುದರ ನಿಜ ಅರ್ಥವನ್ನು ಪ್ರತಿನಿಧಿಸಲಾರದಂತಹ ಕೃತಕ ಉನ್ನತ ಶಿಕ್ಷಣಕ್ಕಾಗಿ ತೀವ್ರ ಸ್ಪರ್ಧೆಯುಂಟಾಗಿದೆ. ನಮ್ಮ ಪ್ರಾಚೀನ ಸಂಸ್ಕೃತಿ ಹಾಗೂ ಹಿಂದಿನ ಸಾಮ್ರಾಜ್ಯಶಾಹಿ ಕಾಲದ ಶಿಕ್ಷಣ ಪದ್ಧತಿ ಸಾವಯವ ವೈಜ್ಞಾನಿಕ ಬೆಳವಣಿಗೆಗೆ ಹಾಗೂ ಅವಶ್ಯವಾದ ಕ್ರಾಂತಿಕಾರಿ ಬದಲಾವಣೆಗಳಿಗೆ ಅನುಕೂಲಕರವಾದ ವಾತಾವರಣವನ್ನು ಸೃಷ್ಟಿಸುವ ಸಾಮರ್ಥ್ಯ ಹೊಂದಿಲ್ಲನೆಂಬುದು ಸ್ಪಷ್ಟವಾಗಿದೆ. ಒಂದು ಕಾಲದಲ್ಲಿ ಪ್ರಕೃತಿಯ ಸವಾಲನ್ನು ಎದುರಿಸಲಾರದೆ ಪರಿಸರ ಯಕ್ಷಪ್ರಶ್ನೆಯಾಗಿ ಉಳಿದಿದ್ದರಿಂದಾಗಿ, ಮನುಷ್ಯರಲ್ಲಿ ಅಗೋಚರವಾದದ್ದರ ಬಗ್ಗೆ ಭೀತಿ ಬೆಳೆದಿತ್ತು. ಆದರೆ ವಿಜ್ಞಾನದ ಬೆಳವಣಿಗೆಯಿಂದಾಗಿ ಸಾಮಾನ್ಯ ಜನರು ಅನಾವಶ್ಯಕವಾದ ಭೀತಿ ಮನೋಭಾವದಿಂದ ಬಿಡುಗಡೆ ಹೊಂದಿದ್ದಾರೆ. ಭಾರತಾದ್ಯಂತ ಸಾವಿರಾರು ಜನ ಸಂಪೂರ್ಣ ಸೂರ್ಯಗ್ರಹಣವನ್ನು ವೀಕ್ಷಿಸಿದರು. ಒಂದು ಕಾಲದಲ್ಲಿ ಜನರು ಗ್ರಹಣದ ಸಮಯದಲ್ಲಿ ಬಾಗಿಲಿನಿಂದ ಹೊರಗೆ ಹೆಜ್ಜೆ ಇರಿಸಲು ಹೆದರುತ್ತಿದ್ದರು. ಆದ್ದರಿಂದ ವೈಚಾರಿಕತೆಯ ಪ್ರಭಾವದಿಂದ ಉಂಟಾಗಿರುವ ಬದಲಾವಣೆ ತಿಳಿಯುತ್ತದೆ.

ಆಧುನಿಕ ಯುಗದಲ್ಲಿ, ಭಾರತೀಯರು, ಹೆಚ್ಚೆಂದರೆ ಮಾನವ ಸಮಾಜವೇ ವಿಜ್ಞಾನದ ಮುನ್ನಡೆಯನ್ನು ಭಯಮಿಶ್ರಿತ ಆನಂದದಿಂದ ವೀಕ್ಷಿಸುತ್ತಿದೆ. ವಿಜ್ಞಾನ ವರವೋ ಶಾಪವೋ? ಎಂಬುದೇ ಯಕ್ಷ ಪ್ರಶ್ನೆ. ಮಾನವ ಜನಾಂಗ ಬೈಜಿಕ ಅಸ್ತ್ರಗಳಿಂದ ಉಂಟಾಗಿರುವ ಭೀಕರ ಪರಿಣಾಮಗಳನ್ನು ವೀಕ್ಷಿಸಿದೆ ಹಾಗೂ ವಿಜ್ಞಾನದ ಪ್ರಗತಿಪರ ಬಳಕೆಯಿಂದ ಒದಗಿರುವ ಫಲವನ್ನೂ ಅನುಭವಿಸಿದೆ. ಸಮಾಜದಲ್ಲಿ ಬೆಳೆದಿರುವ ಅನೇಕ ಕೆಡುಕುಗಳಿಗೆ ವಿಜ್ಞಾನ ಹಾಗೂ ತಂತ್ರ ವಿದ್ಯೆಯೇ ಕಾರಣವಾಗಿದೆ. ಜನಸಂಖ್ಯೆ ಸ್ಫೋಟ, ಪರಿಸರ ಮಾಲಿನ್ಯ ಹಾಗೂ ನಶಿಸುತ್ತಿರುವ ನೈಸರ್ಗಿಕ ಸಂಪತ್ತಿಗೆ ವಿಜ್ಞಾನವೇ ಕಾರಣವೆನ್ನಲಾಗಿದೆ. ಪ್ರಪಂಚಾದ್ಯಂತ ವಿಜ್ಞಾನ ಮತ್ತು ತಂತ್ರ ವಿದ್ಯೆಯ ದುರುಪಯೋಗದಿಂದ ಉಂಟಾಗಿರುವ ದುಷ್ಪರಿಣಾಮಗಳನ್ನು ಕುರಿತು ಜಾಗೃತಿ ಬೆಳೆಯುತ್ತಿದೆ.

ಪಾಶ್ಚಾತ್ಯ ರಾಷ್ಟ್ರಗಳು ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಯನ್ನು ಪ್ರತಿಪಾದಿಸುತ್ತಿವೆ. ನೈಸರ್ಗಿಕ ಸಂಪನ್ಮೂಲ ನಶಿಸುತ್ತಿರುವುದಕ್ಕೆ ಭಾರತೀಯರು ಕಾರಣರಲ್ಲ. ಹೆಚ್ಚೆಂದರೆ, ಭಾರತೀಯರು ತಕ್ಕಮಟ್ಟಿಗೆ ನೈಸರ್ಗಿಕ ಸಂಪತ್ತನ್ನು ಬಳಸಿಕೊಂಡಿಲ್ಲವಾದ್ದರಿಂದಲೇ ಭಾರತದ ಪ್ರಗತಿ ಕುಂಟಿತವಾಗಿದೆ. ಭಾರತ ತನ್ನ ನೈಸರ್ಗಿಕ ಸಂಪತ್ತು ನಶಿಸುವುದೆಂದು ಹೆದರಬೇಕಾಗಿಲ್ಲ. ಅದಕ್ಕಿಂತಾ ಹೆಚ್ಚಾಗಿ ಪಾಶ್ಚಾತ್ಯರು ನಡೆಸಬಹುದಾದ ಆರ್ಥಿಕ ದಾಳಿಯನ್ನು ಕುರಿತು ಭಾರತೀಯರು ಹೆದರಬೇಕಾಗಿದೆ. ಬಹುರಾಷ್ಟ್ರೀಯ ಕಂಪನಿಗಳು ಭಾರತದ ಸಂಪತ್ತನ್ನು ದೋಚಲು ತುದಿಗಾಲಲ್ಲಿ ನಿಂತಿವೆ. ಇಂದು, ಪರಿಸರದಲ್ಲಿ ಉಂಟಾಗಿರುವ ಅಸಮತೋಲನಕ್ಕೆ ಹೆಚ್ಚಾಗಿ ಪಾಶ್ಚಾತ್ಯರೇ ಕಾರಣರಾಗಿದ್ದಾರೆ. ಭಾರತ ಪ್ರಗತಿಯ

ಪಥದಲ್ಲಿದೆ ಮತ್ತು ಇನ್ನೂ ತನ್ನ ಸಂಪನ್ಮೂಲಗಳನ್ನು ಸರಿಯಾಗಿ ಬಳಸಿಕೊಳ್ಳಬೇಕಾದ ಹಂತದಲ್ಲಿದೆ. ಆದರೆ ಪಾಶ್ಚಾತ್ಯ ರಾಷ್ಟ್ರಗಳು ಅಪಾರವಾಗಿ ವಿಜ್ಞಾನ ಕ್ಷೇತ್ರದಲ್ಲಿ ಮುನ್ನಡೆ ಸಾಧಿಸಿ, ಭಾರತದ ಫಲವತ್ತಾದ ಹೊಸ ಪ್ರದೇಶಗಳ ಮೇಲೆ ದಾಳಿ ನಡೆಸಲು ಹವಣಿಸುತ್ತಿವೆ.

ಭಾರತ ಬೈಜಿಕ ಅಸ್ತ್ರಪ್ರಯೋಗ ಪರೀಕ್ಷೆ ನಿಷೇಧಕ್ಕೆ ಸಹಿ ಹಾಕಲು ನಿರಾಕರಿಸಿದೆ ಎಂಬುದು ಚರ್ಚಾಸ್ಪದ ವಿಷಯವಾಗಿದೆ. ಭಾರತವು ಅಣುಶಕ್ತಿಯನ್ನು ತಯಾರಿಸುತ್ತಿರುವುದನ್ನು ಖಂಡಿಸಲಾಗಿದೆ. ಆದರೆ ಪಾಶ್ಚಾತ್ಯರು ಧರ್ಮಶೀಲರೆಂಬ ನಂಬಿಕೆಯ ಭ್ರಮೆ ಭಾರತೀಯರಲ್ಲಿ ನಶಿಸಿದೆ. ಬೈಜಿಕ ಶಕ್ತಿಯನ್ನು ಪ್ರಗತಿಪರವಾಗಿ ಬಳಸಿದರೆ ಸಮಾಜಕ್ಕೆ ಹಾನಿಯುಂಟಾಗುವುದಿಲ್ಲವೆಂದು ಅರಿತುಕೊಂಡಿದ್ದಾರೆ. ಭಾರತದ ಸಂರಕ್ಷಣೆಗೆ ಬೈಜಿಕ ಅಸ್ತ್ರಗಳು ಆವಶ್ಯಕ ಎಂಬುದೂ ಸ್ಪಷ್ಟವಾಗಿದೆ. ಪಾಶ್ಚಾತ್ಯರು ಭಾರತವನ್ನು ವೈಜ್ಞಾನಿಕ ಮುನ್ನಡೆಯಿಂದ ದೂರ ವಿರಿಸಲು ಪ್ರಯತ್ನಿಸುತ್ತಿದ್ದಾರೆ. ಯಾವ ಪಾಶ್ಚಾತ್ಯ ರಾಷ್ಟ್ರಗಳೂ ಬೈಜಿಕ ಅಸ್ತ್ರ ತಯಾರಿಕೆಯನ್ನು ಸಂಪೂರ್ಣವಾಗಿ ತ್ಯಜಿಸಿಲ್ಲ. ಇಂದಿನ ಸಮಸ್ಯೆಗಳನ್ನು ವೈಜ್ಞಾನಿಕ ಮುನ್ನಡೆಯಿಂದ ಮಾತ್ರ ಬಗೆಹರಿಸಲು ಸಾಧ್ಯ ಎಂಬ ಜಾಗೃತಿ ಭಾರತೀಯರಲ್ಲಿ ಬೆಳೆಯುತ್ತಿದೆ. ನಿನ್ನೆಯ ಅಸಾಧ್ಯಗಳು ಇಂದಿನ ವಾಸ್ತವಗಳಾಗಿವೆ. ಆದ್ದರಿಂದ ಉತ್ತಮವಾದ ಮೌಲ್ಯ ಪದ್ಧತಿಗಳನ್ನು ರೂಪಿಸಲು ಸಮಾಜ ವಿಜ್ಞಾನದೊಂದಿಗೆ ಸ್ಪಂದಿಸಬೇಕು. ನಾಗರಿಕತೆ ವಿಜ್ಞಾನದ ಪ್ರಗತಿ ಹಾಗೂ ಪ್ರಾಬಲ್ಯ ಎಂದು ಬರ್ಟ್ರಾಂಡ್ ರಸಲ್ ಭಾವಿಸಿದರು. ಆದ್ದರಿಂದ ಭಾರತೀಯ ಸಮಾಜವೂ ಸ್ವತಂತ್ರವಾದ ವೈಜ್ಞಾನಿಕ ಚಿಂತನೆಯ ಯುಗದಲ್ಲಿದೆ. ಇದು ವಿಜ್ಞಾನದ ಮುನ್ನಡೆಗೆ ಸ್ಪಂದಿಸದೆ ಹೇಗೆ ತಾನೆ ಇರಲು ಸಾಧ್ಯ?

ನಿಮ್ಮಲ್ಲಿ ಸಾಸುವೆ ಕಾಳಿನಷ್ಟು ಆತ್ಮವಿಶ್ವಾಸವಿದ್ದರೂ ಸಾಕು; ನಿಮಗೆ ಯಾವ ಕೆಲಸವೂ ಕಷ್ಟ ಅಲ್ಲ.

ಕೇವಲ ಶ್ರೀಮಂತಿಕೆಯಿಂದಲೇ ದೇವರ ಕರುಣೆಗಳಿಸುವುದು ಅಸಾಧ್ಯ.

—ಏಸುಕ್ರಿಸ್ತ

ಹಳ್ಳಿಯ ಮುದುಕ ಹಾಗೂ ವೈದ್ಯವಿಜ್ಞಾನಿ

ಡಾ|| ಎಸ್. ಜೆ. ನಾಗಲೋಟಿಮಠ್

ಪೌರಾಣಿಕವಾಗಿ—ಸತ್ಯ ಹರಿಶ್ಚಂದ್ರನೂ ಪುತ್ರವ್ಯಾಮೋಹ ಪೀಡಿತನಾಗಿ ಸಕಾಲದಲ್ಲಿ ವಚನಪಾಲನೆ ಮಾಡಲಾಗಲಿಲ್ಲ. ಫಲ : ಜಲೋದರ ಬಾಧೆ! ಅಂದ ಮೇಲೆ ಈ ವ್ಯಾಧಿಯು ಉಗಮ, ವ್ಯಾಪ್ತಿ, ಮಾರಕತೆ ಮುಂತಾದವು ಪ್ರಾಚೀನ ಯುಗಗಳಿಂದಲೂ ಮಾನವಸಂಗಾತಿಗಳಾಗಿದ್ದುವು: ವರ್ತಮಾನ ಯುಗದಲ್ಲಿ? ಓದಿ ಈ ಲೇಖನದಲ್ಲಿ ಜೀವನಾನುಭವ.

ಇದೊಂದು ಸ್ವಾರಸ್ಯಕರ ಹಾಗೂ ಸತ್ಯ ಘಟನೆ. ಇದು ನಡೆದುದು ಸುಮಾರು ೧೯೭೯ರಲ್ಲಿ ಅಫ್‌ಘಾನಿಸ್ತಾನದಲ್ಲಿ. ಆ ದೇಶದಲ್ಲಿ ೧೯೭೮ರಲ್ಲಿ ಬರಗಾಲ ಬಿದ್ದಿತ್ತು. ಆಹಾರಕ್ಕಾಗಿ ಜನರು ಹಲುಬಿದರು. ದೇಶದಲ್ಲಿ ಹಾಹಾಕಾರ ಎದ್ದಿತು. ಬೆಳೆಯಬೇಕಾದಷ್ಟು ಬೆಳೆ ಬರಲೇ ಇಲ್ಲ. ಅನೇಕ ಜನರು ಹಸಿವೆಯಿಂದ ಮಡಿದರು, ಬಳಲಿದರು. ಜನರು ಲಭ್ಯವಿದ್ದ ಕಾಳುಕಡ್ಡಿಗಳನ್ನೇ ತಿಂದು ಬದುಕಿ ಉಳಿದರು. ಮತ್ತೆ ಮಳೆ ಪ್ರಾರಂಭಿಸಿತು. ಕಂಡ ತೊಂದರೆಯಲ್ಲಿ ಸುಧಾರಣೆ ಕಂಡಿತು. ಜನ ನಿಟ್ಟುಸಿರು ಬಿಟ್ಟರು. ಆದರೂ ಆಹಾರದಲ್ಲಿ ಸುಧಾರಣೆ ಕಾಣಲಿಲ್ಲ. ಜೀವನ ಹಾಗೇ ಕುಂಟುತ್ತ ನಡೆದಿತ್ತು. ಅಷ್ಟರಲ್ಲಿ ಬರಗಾಲ ಪೀಡಿತ ಪ್ರದೇಶದಲ್ಲಿ ಹೊಸದೊಂದು ರೋಗ ತಲೆ ಎತ್ತಿತು. ಅದನ್ನು ಜನರು "ಜಲೋದರ ಪಿಡುಗು" ಎಂದೇ ಕರೆದರು.

'ಜಲೋದರ' ಎಂದರೆ ಉದರ ಚೀಲದಲ್ಲಿ ನೀರು ತುಂಬಿಕೊಳ್ಳುವುದು. ಇದರಿಂದ ಹೊಟ್ಟೆಯು ಉಬ್ಬಿಕೊಂಡು ನಿಮಿರಿ ನಿಲ್ಲುವುದು. ಉದರದ ಮೇಲಿನ ತ್ವಚೆಯು ಹೀಚಿದಂತಾಗಿ ತೆಳ್ಳಗಾಗುತ್ತದೆ. ಹೊಕ್ಕಳದ ಸುತ್ತಲೂ ನಿಮಿರಿನಿಂತ ನೀಲ ರಕ್ತವಾಹಿನಿಗಳು ತಲೆ ಎತ್ತುವುವು. ರೋಗಿ ಸೊರಗಿ ಸೊಣಕಲಾಗುತ್ತಾನೆ. ಬರಬರುತ್ತ ರಕ್ತವಾಂತಿ ಪ್ರಾರಂಭವಾಗಿ ಮರಣ ಹೊಂದುತ್ತಾನೆ. ಜಲೋದರ ರೋಗ ಸಾಮಾನ್ಯವಾಗಿ ಯಕೃತ್ತಿನಲ್ಲಿ ಕಾಣುವ ಸಿರೊಸಿಸ್ ಎಂಬ ತೊಂದರೆಯಿಂದ ಉದ್ಭವಿಸುವುದು. ಅಫಘಾನಿಸ್ತಾನದಲ್ಲಿ ತೋರಿದ ಜಲೋದರ ಪಿಡುಗಿನ ರೂಪ ತಳೆದಿತ್ತು. ನಾಡಿನ ತುಂಬೆಲ್ಲ ಈ ರೋಗ ತಾಂಡವವಾಡಲು ಪ್ರಾರಂಭಿಸಿತು. ಜನತೆ ಹಾಗೂ ಸರಕಾರಗಳು ಗಲಿಬಿಲಿಗೊಂಡವು. ಅಲ್ಲಿಯ ವೈದ್ಯರಿಗೆ ಇದರ ಬಗ್ಗೆ ಏನೇನೂ ತಿಳಿಯ

ಲಿಲ್ಲ. ಆಗ ಅಫಘಾನಿಸ್ತಾನ ಸರಕಾರ ಭಾರತ ಸರಕಾರವನ್ನು ಸಹಾಯಕ್ಕೆ ಕೇಳಿತು. ಭಾರತ ಸರಕಾರ ಈ ರೋಗ ಪತ್ತೆ ಹಚ್ಚಲು ದೆಹಲಿಯ ತಜ್ಞರಾದ ಬಿ. ಎನ್. ಟಂಡನ್ ಅವರನ್ನು ನಿಯಮಿಸಿತು. ಅವರು ತತ್‌ಕ್ಷಣವೇ ಸಂಶೋಧನೆಗೆ ಬೇಕಾದ ಎಲ್ಲ ಸಲಕರಣೆಗಳನ್ನು ಹೊಂದಿಸಿಕೊಂಡು ಅಫಘಾನಿಸ್ತಾನಕ್ಕೆ ಹೋದರು.

ಆ ದೇಶದಲ್ಲಿ ತಮ್ಮ ಸಂಶೋಧನೆಗೆ ಒಂದು ಶಿಬಿರ ನಿರ್ಮಿಸಿ ಕಾರ್ಯ ಪ್ರಾರಂಭಿಸಿದರು, ಜಲೋದರ ರೋಗ ಅನೇಕರಲ್ಲಿ ಕಂಡಿತ್ತು. ಸ್ತ್ರೀ-ಪುರುಷರು, ಮಕ್ಕಳು ಹಾಗೂ ಮುದುಕರು ಬಳಲುತ್ತಿದ್ದರು. ಜಲೋದರ ಕಂಡ ಕೆಲ ತಿಂಗಳುಗಳಲ್ಲಿ ರೋಗಿಗಳು ಪಟಪಟನೆ ಸಾಯುತ್ತಿದ್ದರು. ವೈದ್ಯರು ಹಲವಾರು ಕೋನಗಳಿಂದ ಆ ಸಮಸ್ಯೆಯನ್ನು ಬಿಡಿಸಲು ಪ್ರಯತ್ನಿಸಿದರು. ಆದರೆ ಸಮಸ್ಯೆ ಜಟಿಲವಾಗುತ್ತಲೇ ನಡೆಯಿತು. ದಿನಗಳುರುಳಿದವು, ವಾರಗಳು ಮುಗಿದು ತಿಂಗಳುಗಳು ಕಳೆದುವು. ಸಮಸ್ಯೆಗೆ ಉತ್ತರ ದೊರಕದೇ ಹೋಯಿತು. ವೈದ್ಯರಿಗೆ ಕೊಟ್ಟ ಗಡುವು ಮುಗಿಯುತ್ತ ಬಂದಿತು. ಸಮಸ್ಯೆಗೆ ಪರಿಹಾರ ಕಾಣಲೇ ಇಲ್ಲ. ವೈದ್ಯರ ತಳಮಳ ಹೆಚ್ಚಿತು. ಸಂಶೋಧನೆ ಮಾಡಲು ಉತ್ಸಾಹದಿಂದ ಬಂದವರು ಬರಿಕೈಯಿಂದಲೇ ಮರಳುವ ಸ್ಥಿತಿ ಬಂದಿತು. ಅವರ ಚಿಂತೆ ಹೆಚ್ಚಾಯಿತು. ಮುಖವು ಪೆಚ್ಚಾಯಿತು. ಒಂದು ದಿನ ಇದೇ ಚಿಂತೆಯಲ್ಲಿ ಸಂಶೋಧನಾ ಕೇಂದ್ರದ ಕಡೆಗೆ ಹೆಜ್ಜೆ ಹಾಕುತ್ತಿರುವಾಗ ಇವರನ್ನು ಕಂಡು ಒಬ್ಬ ಮುದುಕ ಮಾತನಾಡಿಸಿದನು.

"ಯಾಕ್ರಿ ಸಾಹೇಬ್ರ, ಆರೋಗ್ಯ ಸರಿ ಇಲ್ಲವೇನು? ಮುಖ ಬಾಡಿದೆಯಲ್ಲ?"

"ಹಾಗೇನೂ ಇಲ್ಲ ಅಜ್ಜಪ್ಪಾ ಆದರೆ ನಾನು ಈ ದೇಶಕ್ಕೆ ಬಂದು ಏನೂ ಮಾಡದೇ ಹೊರಟಿರುವೆನು. ಕಾರಣ ಮುಖದಲ್ಲಿ ಯಾವುದೇ ತರದ ಗೆಲುವಿನ ಚಿಹ್ನೆ ಕಾಣದು" ಎಂದು ಹೇಳಿದರು.

ಮುದುಕ: "ಯಾವ ಚಿಂತೆ ನಿಮಗೆ?"

ವಿಜ್ಞಾನಿ: ನಿಮ್ಮ ದೇಶದಲ್ಲಿ ತಲೆಯೆತ್ತಿದ ಜಲೋದರ ಪಿಡುಗಿನ ಕಾರಣ ಗೊತ್ತಾಗಲಿಲ್ಲ. ನಾನು ಎಲ್ಲ ಪ್ರಯತ್ನಗಳನ್ನು ಮಾಡಿ ಮುಗಿಸಿದೆ. ನನ್ನ ಸಂಶೋಧನೆ ಯಶಸ್ವಿ ಆಗುವುದು ಎಂದು ಬಂದಿದ್ದೆ. ಆದರೆ ಅದರ ಎದುರು ಸೋತು ಹೋಗಿರುವೆ" ಎಂದರು.

ಮುದುಕ: "ಅಷ್ಟೇ ಏನು?" ಎಂದು ನಗ ಹತ್ತಿದ.

ವಿಜ್ಞಾನಿ: "ಯಾಕೆ ಅಜ್ಜಾ ನನ್ನ ಸೋಲು ನಿನಗೆ ನಗುವಂತೆ ಮಾಡಿತೇ?" ಎಂದ.

ಮುದುಕ: ಹಾಗೇನು ಇಲ್ಲ ಸಾಹೇಬ್ರ. ಅದರ ಕಾರಣ ನನಗೆ ಗೊತ್ತಿದೆ. ಆದರೆ ನನ್ನಂಥ ದಡ್ಡನ ಮಾತು ಯಾರು ಕೇಳುತ್ತಾರೆ? ಅದಕ್ಕೆ ನಕ್ಕದ್ದು.

ವಿಜ್ಞಾನಿ: 'ಏನು? ಅದರ ಕಾರಣ ನಿಮಗೆ ಗೊತ್ತೋ?'

ಮುದುಕ: ಹೌದು. ಬಹಳ ದಿನಗಳಿಂದ ಗೊತ್ತು. ನನ್ನನ್ನು ನೋಡಿರಿ ನನಗೇನಾಗಿದೆ. ಜಲೋದರ ತೊಂದರೆ ನನ್ನ ಸಮೀಪ ಬರದು. ನಾನು ನನ್ನ ಆಹಾರದಲ್ಲಿ ಬಲು ಕಟ್ಟುನಿಟ್ಟು.

ವಿಜ್ಞಾನಿಗೆ ಆಚ್ಚರಿಯಾಯಿತು.

ವಿಜ್ಞಾನಿ ಕೇಳಿದನು: ಅಜ್ಜಾ ನೀನು ಹೇಳು ವುದು ನನಗೆ ಅರ್ಥ ಆಗಲಿಲ್ಲ.

ಮುದುಕ: ನೋಡಿ, ಈ ತೊಂದರೆ ಬರುವುದು ಒಂದು ಗಿಡದ ಬೀಜಗಳನ್ನು ಆಹಾರದಲ್ಲಿ ಸೇವಿಸುವುದರಿಂದ. ನಾನು ನನ್ನ ಆಹಾರದಲ್ಲಿ ಆ ಬೀಜಗಳು ಸೇರ ದಂತೆ ನೋಡಿಕೊಳ್ಳುತ್ತೇನೆ. ಆ ಬೀಜ ಗಳು ನನ್ನ ಸಾಕು ಪ್ರಾಣಿಗಳಿಗೂ ಸಿಗದಂತೆ ಮಾಡಿರುವೆ. ಕಾರಣವೇ ನನ್ನ ಆಡು, ಕುರಿಗಳು ಜಲೋದರದಿಂದ ಬಳಲುವುದಿಲ್ಲ. ಆದರೆ ಬೇರೆಯವರ ಪ್ರಾಣಿಗಳನ್ನು ನೋಡಿರಿ ಅವೂ ಸಹ ಜಲೋದರದಿಂದ ಬಳಲುತ್ತವೆ.

ವಿಜ್ಞಾನಿಗೆ ಇದೊಂದು ಹೊಸ ವಿಷಯ ವಾಯಿತು. ಅವನು ಕೇಳಿದ: ಅಜ್ಜಾ, ಆ ಬೀಜಗಳನ್ನು ತೋರಿಸುವೆಯಾ?

ಮುದುಕ: ಓಹೋ, ಬನ್ನಿ ನನ್ನೊಡನೆ ಬನ್ನಿ ಎನ್ನುತ್ತ ಸಮೀಪದ ಮನೆಯಲ್ಲಿ ಹೊಕ್ಕು ಅವರಿಂದ ಅವರು ಸಂಗ್ರಹಿ ಸಿದ್ದ ಕಾಳನ್ನು ಹೊರ ತಂದನು. ಕಾಳಿ ನಲ್ಲಿ ಕೂಡಿಕೊಂಡಿದ್ದ ಕೆಲವು ಬೀಜ ಗಳನ್ನು ಆರಿಸಿ ತಗೆದನು. ವಿಜ್ಞಾನಿಯ ಕೈಯಲ್ಲಿ ಕೊಟ್ಟನು. ನೋಡಲು ಅವು ಮಡಿಕೆಯನ್ನು ಹೋಲುತ್ತಿ ದ್ದವು.

ಆಗ ವಿಜ್ಞಾನಿಯು ಅಂಥ ಬೀಜಗಳನ್ನು ಹುಡುಕಿಸಿದನು. ಅವುಗಳ ಬೀಜಗಳನ್ನು ಪತ್ತೆ ಹಚ್ಚಿದನು. ಈ ಬೀಜಗಳನ್ನು ಕುಟ್ಟಿ ಪುಡಿ ಮಾಡಿ ಪ್ರಯೋಗ ಪ್ರಾಣಿಗಳಿಗೆ ತಿನಿಸಿದನು. ಆಶ್ಚರ್ಯವೆಂದರೆ ಆ ಪ್ರಾಣಿ ಗಳಲ್ಲಿ ಜಲೋದರ ಪ್ರಕಟವಾಯಿತು. ಅಂಥ ಪ್ರಾಣಿಗಳ ಯಕೃತ ಅಭ್ಯಸಿಸಿದಾಗ ಮಾನವರಲ್ಲಿ ಕಂಡು ಬಂದ ಬದಲಾವಣೆ ಗಳು ಇಲ್ಲಿಯೂ ಕಂಡವು. ಅನಂತರ ಹಲ ವಾರು ಸಾಕು ಪ್ರಾಣಿಗಳನ್ನು ಕೊಯ್ದು ನೋಡಿದನು. ಜಲೋದರ ಇದ್ದ ಪ್ರಾಣಿ ಗಳ ಯಕೃತ ಅದೇ ಪ್ರಕಾರದ ಬದಲಾವಣೆ ತೋರುತ್ತಿರುವುದು ಕಂಡನು. ಇದೊಂದು ಅವನಿಗೆ ಸೋಜಿಗ ತಂದಿತ್ತು. ಸಂಶೋಧನೆ ಯಶಸ್ವಿ ಆಗಿತ್ತು. ಮುದುಕನಿಗೆ ಕೃತಜ್ಞತೆ ಹೇಳಿ ಸಂತೋಷದಿಂದ ಭಾರತಕ್ಕೆ ಮರಳಿ ದರು. ತಮ್ಮ ವರದಿ ಕೊಟ್ಟರು. ಬಿ. ಎನ್. ಟಂಡನ್ ಅವರಿಗೆ ಆ ವರ್ಷ ಪದ್ಮಶ್ರೀ ಪ್ರಶಸ್ತಿ ದೊರೆಯಿತು.

ಅವರು ಮರಳಿ ಬಂದ ನಂತರ ಇಂಥವೇ ಕೆಲವು ಪ್ರಸಂಗಗಳ ಪ್ರಗ್ಗೆಯೂ ಸಂಶೋ ಧನೆ ಮಾಡಿದರು. ಮಧ್ಯ ಪ್ರದೇಶ ಹಾಗೂ ರಾಜಾಸ್ಥಾನದಲ್ಲಿ ಇಂಥ ಗೋಳು ಇದ್ದು ದನ್ನು ಪತ್ತೆ ಹಚ್ಚಿದರು.

ನಡೆದ ಘಟನೆ ಕೆಳಗಿನಂತೆ ಇದೆ. 'ಗೆಜ್ಜೆ ಗಿಡ' ಎಂಬ ಹೆಸರಿನ ಸಸ್ಯವಿದೆ. ಇದು ಬರಗಾಲ ಬೀಳುವ ಪ್ರದೇಶದಲ್ಲಿ ವಿಪುಲ ವಾಗಿ ಬೆಳೆಯುತ್ತದೆ. ಬರಗಾಲ ಕಂಡಾಗ ಇದು ಇನ್ನೂ ಜೋರಿನಿಂದ ಬೆಳೆಯುತ್ತದೆ. ಈ ಗಿಡಕ್ಕೆ ಹೆಸರುಕಾಯಿಯಂಥ ಕಾಯಿ ಗಳು ಆಗುತ್ತವೆ. ಬೆಳೆಯನ್ನು ಕೊಯ್ದು, ಕಾಳನ್ನು ಬಿಡಿಸಿಕೊಂಡು ಹೋಗುವಾಗ ಈ ಬೀಜಗಳು ಧಾನ್ಯವನ್ನು ಸೇರುತ್ತವೆ. ಬರಗಾಲದಿಂದ ಧಾನ್ಯದ ಉತ್ಪಾದನೆ ಕಡಿಮೆ ಯಾಗಿರುವುದರಿಂದ ಜನರು ಈ ಬೀಜ ಗಳನ್ನು ಧಾನ್ಯದಿಂದ ಬೇರ್ಪಡಿಸದೇ ಬಳಸಲು ಆಶಿಸುತ್ತಾರೆ. ಈ ಬೀಜಗಳು ಜಠರ ಸೇರಿದರೆ ಅವುಗಳಲ್ಲಿದ್ದ ವಿಷವು ರಕ್ತ

ವನ್ನು ಸೇರಿ ಯಕೃತವನ್ನು ಹಾಳು ಮಾಡುತ್ತದೆ. ಇದರಿಂದ ಜಲೋದರ ರೋಗ ಬರುತ್ತದೆ.

ಇಂಥ ವೈಜ್ಞಾನಿಕ ಕಟು ಸತ್ಯವನ್ನು ಆ ಮುದುಕ ಕೇವಲ ತನ್ನ ಅನುಭವ ಹಾಗೂ ತನ್ನ ಪರಿವೀಕ್ಷಣೆಯಿಂದ ಅರಿತಿದ್ದನು. ಅವನ ಈ ಜ್ಞಾನ ವೈದ್ಯರಿಗೊಂದು ಕೊಡುಗೆಯಾಯಿತು.

ನಾವು ಸಾಮಾನ್ಯರೆಂದು ತಿಳಿದುಕೊಂಡವರ ತೀಕ್ಷ್ಣ ಮತಿಗಳು ಎಂತೆಂಥ ಸಂಗತಿಗಳನ್ನು ಹೊರಗೆಡಹುತ್ತವೆ ಎಂಬುದು ನಿಜವಾಗಿ ಅಚ್ಚರಿಯ ಸಂಗತಿ.



ಕಣ್ಣಿನಲ್ಲಿ ಹೆಮ್ಮೆ ಬೇಡ, ನಾಲಿಗೆಯಲ್ಲಿ ಸುಳ್ಳು ಬೇಡ, ಕೈ ಕೊಳೆಯಾಗದಿರಲಿ, ಮನಸ್ಸು ಕೆಟ್ಟದ್ದನ್ನು ಯೋಚಿಸದಿರಲಿ, ಕಾಲು ಕೆಡಕಿನತ್ತ ಹೋಗದಿರಲಿ, ದೇಹ ದೇವನಿಗೆ ಸಲ್ಲಲಿ.

ನಾಶದ ದಾರಿ ದೊಡ್ಡದಾಗಿದೆ ಮತ್ತು ಬಹುಪಾಲು ಜನರು ಆ ದಾರಿಯಲ್ಲಿ ನಡೆಯುತ್ತಾರೆ. ಆದ್ದರಿಂದ ನೀನು ಇಕ್ಕಟ್ಟಾದ ಬಾಗಿಲನ್ನು ಪ್ರವೇಶಿಸು. ಏಕೆಂದರೆ ನಿಜವಾದ ಬದುಕಿನ ದಾರಿ ಕಠಿಣ ಮತ್ತು ಅದಕ್ಕೆ ಹೋಗುವ ಬಾಗಿಲು ಇಕ್ಕಟ್ಟಾದದ್ದು ; ಕೆಲವರು ಮಾತ್ರ ಅಲ್ಲಿ ನಡೆಯುತ್ತಾರೆ.

ಬೈದರೆ ಬೈದವರ ಬಾಯಿ ನೋಯುವುದು ; ಆದರಿಂದ ಇತರರಿಗೆ ಏನಾಗುವುದು ?

—ಏಸುಕ್ರಿಸ್ತ

ಮನಸ್ಸಿದ್ದರೆ ಮಾರ್ಗ

ಟಿ. ವಿ. ರಾಧ

"ತನ್ನ ಶಕ್ತಿಯನಳೆದು ತನ್ನ ಗುಣಗಳ ಬಗೆದು। ಸನ್ನಿವೇಶದ ಸೂಕ್ಷ್ಮವರಿತು ಧೃತಿ ದಳೆದು। ತನ್ನ ಕರ್ತವ್ಯ ಪಂಥಿಯ ಮೀರದುಜ್ಜುಗಿಸೆ। ಪುಣ್ಯಶಾಲಿಯ ಪಾಡು ಮಂಕುತಿಮ್ಮ." ಮನದ ನೆಗೆತ, ಒಡಲ ದುಡಿಮೆ, ಸಹಕಾರ ಬೆಸುಗೆ— ಗಗನವೇ ಗಮನ ಮಿತಿ ಎಂಬ ಅನುಭವಜನ್ಯ ಉಕ್ತಿಗೆ ಇನ್ನೂ ಒಂದು ನಿದರ್ಶನ.

ವಸುಂಧರೆ ಹಸಿರು ಸೀರೆಯನ್ನುಟ್ಟು, ತನ್ನ ನಳಿದೋಳುಗಳಿಂದ ಎಲ್ಲರನ್ನೂ ಕೂಗಿ ಕರೆಯುತ್ತಿರುವಾಗ, ಆ ಕರೆಗೆ ಓಗೊಡುವಂತೆ ಆಗಾಗ್ಗೆ ಕಲರವಗೈಯ್ಯುವ ಪಕ್ಷಿಗಳು, ತಮ್ಮ ಮೃದು ಮಧುರ ಇಂಚರದಿಂದ ಉಲಿದಾಡುತ್ತಿವೆ. ಸುತ್ತಲೂ ರಾಗಿ, ಜೋಳ, ಭತ್ತದ ತೆನೆಗಳು ತೂಗಾಡುತ್ತಾ ದಾರಿಹೋಕರನ್ನು ಆಹ್ವಾನಿಸುತ್ತಿವೆ, ಅಲ್ಲಲ್ಲಿ ಬೆಳೆದು ನಿಂತಿರುವ ತೆಂಗಿನ ಮರಗಳು ತಮ್ಮ ಗರಿಗಳ ಮೂಲಕ ಗಾನಗೈಯುತ್ತಿರುವಾಗ, ಬಾಳೆಯ ಗಿಡಗಳು ತಮ್ಮ ಎಲೆಗಳಿಂದ ಆವರಿಸಲ್ಪಟ್ಟ ಗೊನೆಗಳೊಡನೆ ತೂಗಾಡಿ ನರ್ತನಗೈಯುತ್ತಿರುವ ದೃಶ್ಯ ರಮಣೀಯ ವನಸಿರಿಗೆ ರಕ್ಷಣೆ ಒದಗಿಸಲೋ ಎಂಬಂತಿರುವ ಚಿಕ್ಕಪುಟ್ಟ ಗುಡ್ಡ ಬೆಟ್ಟಗಳು ಕೋಟೆಯಂತೆ ಆವರಿಸಿವೆ.

ಇಂತಹ ಅಪರೂಪದ ವನಸಿರಿಯ ಮಧ್ಯದಲ್ಲಿದೆ ಒಂದು ಪುಟ್ಟ ಸರ್ಕಾರಿ ಶಾಲೆಯ ಕಟ್ಟಡ. ಶಾಲೆಯ ಹೊರಾಂಗಣ ವನಸಿರಿಯಿಂದಾವೃತವಾಗಿ ಸಾಕಷ್ಟು ಜನಸಂಪತ್ತನ್ನು ಹೊಂದಿರಲವಕಾಶವಿದ್ದರೂ ಶಾಲೆಯ ಒಳಾಂಗಣ ಕಿಷ್ಕಿಂಧಾಪಟ್ಟಣದಂತೆ. ಒಂದೇ ಒಂದು ಕೊಠಡಿ. ಅದರ ಮುಂದೆ ಅಂಗೈಯಗಲದ ವರಾಂಡ. ಇವನ್ನು ನೋಡಿದಾಗ ಅನ್ನಿಸುತ್ತದೆ, ಪ್ರಕೃತಿ ಮಾತೆ ಧಾರಾಳಿ, ತನ್ನ ಮಡಿಲಿನಲ್ಲಿ ವಿಶ್ವಕ್ಕೆ ಆಶ್ರಯವೀಯಬಲ್ಲಳು, ಆದರೆ ಈ ಹುಲು ಮಾನವನ ಶಕ್ತಿ ಸಾಮರ್ಥ್ಯಗಳು ಸೀಮಿತ. ಹೀಗಾಗಿ ನಾಲ್ಕು ತರಗತಿಗಳು ನಡೆಯಲು ಸ್ಥಳಾವಕಾಶವಿಲ್ಲದೆ ಬೋಧಕರು ಅವಸ್ಥೆ ಪಡುವಂತಹ ಪರಿಸ್ಥಿತಿಯೊದಗಿದೆ, ಆದರೆ ಪ್ರಕೃತಿ ಮಾತೆಯ ವಿಶಾಲ ಮನೋಭಾವ ತರಗತಿಗಳನ್ನು ಮರದ ಕೆಳಗೆ, ಮೈದಾನವಲ್ಲಿ ದೇವಸ್ಥಾನವಲ್ಲಿ ಮಾಡುವ ಅವಕಾಶ ಒದಗಿಸಿದೆ. ಇದೇ ಗುಲಗಂಜನಹಳ್ಳಿ ಶಾಲೆ.

ಬೆಂಗಳೂರು ಜಿಲ್ಲೆಯ ಈ ಗುಲಗಂಜನಹಳ್ಳಿಯ ಶಾಲೆ ೧೯೫೭ರಲ್ಲಿ ಪ್ರಾರಂಭವಾದರೂ, ಸರಿಯಾದ ಕಟ್ಟಡವಿಲ್ಲದೆ

ಚಾವಡಿಯಲ್ಲಿ ಶಾಲೆ ನಡೆಸುವ ಪರಿಸ್ಥಿತಿ ಒದಗಿತು. ಸ್ಥಳಾಭಾವವೇ ಅಲ್ಲದೆ ಬೋಧಕರ ಅಭಾವವೂ ಇದ್ದು, ಇದು ಏಕೋಪಾಧ್ಯಾಯ ಶಾಲೆಯಾಗಿತ್ತು. ಈ ಶಾಲೆ ಹಿರೇಮಣಿಗಳ ಸಹಾಯದಿಂದ, ಶಿಕ್ಷಕರ ಮೇಲ್ವಿಚಾರಣೆಯಲ್ಲಿ, ಪ್ರಕೃತಿಯ ಮಡಿಲಲ್ಲೇ ಮುಂದುವರಿಯಿತು. ಇಂತಹ ಸುಂದರ ವಾತಾವರಣದಲ್ಲಿ ಒಂದು ಶಾಲೆ, ಆ ಶಾಲೆಗೊಂದು ಕಟ್ಟಡ ಇಲ್ಲದಿದ್ದರೆ ಹೇಗೆ ಎಂದು ಗ್ರಾಮಸ್ಥರಿಗೆ ಅನಿಸತೊಡಗಿತು. ಅವರುಗಳ ಪ್ರಯತ್ನದಿಂದ ಅಂತೂ ಇಂತೂ ೧೯೬೧ರಲ್ಲಿ ಒಂದು ಕೊಠಡಿ ಕಟ್ಟಲ್ಪಟ್ಟಿತು. ಸ್ಥಳಕ್ಕೆ ಕೊರತೆಯಾದರೇನು? ಪ್ರತಿಭೆಗೆ, ಉತ್ಸಾಹಕ್ಕೆ ಕೊರತೆಯೇ? ಆ ಪುಟ್ಟ ಕೊಠಡಿಯಲ್ಲೇ ಭಾರತದ ಭಾವೀನಾಗರೀಕರು ರೂಪಗೊಳ್ಳತೊಡಗಿದರು. ಈ ಪ್ರಕೃತಿಯ ಕಾರ್ಯಾಗಾರದಲ್ಲಿ ಭಾವೀ ಭಾರತೀಯ ಪೌರರು, ಗಾಯಕರು, ವಿಜ್ಞಾನಿಗಳು, ಶಿಕ್ಷಕರು ಮುಂತಾದವರಿಗೆ ಭದ್ರ ಬುನಾದಿ ಹಾಕಬೇಕೆಂಬ ಗ್ರಾಮಸ್ಥರ ಅಪೇಕ್ಷೆ, ಈ ದಿಶೆಯಲ್ಲಿ ಅವರನ್ನು ಮುಂದುವರಿಯುವಂತೆ ಮಾಡಿತು. ಇನ್ನೂ ಕೆಲವು ಬೋಧಕರ ನೇಮಕ ಆದರೆ ಎಷ್ಟು ಚೆನ್ನ? ಈ ಪುಟ್ಟ ಹಳ್ಳಿ, ಭಾರತದ ಪ್ರಧಾನಿ, ರಾಷ್ಟ್ರಪತಿಗಳನ್ನೇ ಏಕೆ ರೂಪಿಸಬಾರದು? ಎಂಬ ಉತ್ಸಾಹದೊಡನೆ, ಶಿಕ್ಷಕರು, ಗ್ರಾಮಸ್ಥರು ಸರ್ಕಾರಕ್ಕೆ ಮಾಡಿದ ಮನವಿಯ ಪರಿಣಾಮ ಈ ಏಕೋಪಾಧ್ಯಾಯ ಶಾಲೆಯನ್ನು ಬಹೂಪಾಧ್ಯಾಯ ಶಾಲೆಯಾಗಿ ಮಾರ್ಪಡಿಸಿದ ಕೀರ್ತಿ ದಕ್ಕಿಸಿಕೊಂಡರು. ಇವರುಗಳ ಉತ್ಸಾಹ ದಿನೇ ದಿನೇ ವೃದ್ಧಿಗೊಂಡುದರ ಫಲವಾಗಿ ೧೯೯೪ರಲ್ಲಿ ಕೇವಲ ಕಿರಿಯ ಪ್ರಾಥಮಿಕ ಶಾಲೆಯಾಗಿದ್ದ ಗುಲಗಂಜಿ ಹಳ್ಳಿಯ ಪ್ರಾಥಮಿಕ ಶಾಲೆ, ಐದನೆಯ ತರಗತಿಯನ್ನು ಪ್ರಾರಂಭಿಸಿ ಹಿರಿಯ ಪ್ರಾಥಮಿಕ ಶಾಲೆಯಾಗಿ ಮಾರ್ಪಟ್ಟಿತು. ೨-೩ ವರ್ಷಗಳಿಂದ, ಐದನೇ ತರಗತಿಗಾಗಿ, ಪಕ್ಕದ ಹಳ್ಳಿಗೆ ಹೋಗುತ್ತಿದ್ದ ಮಕ್ಕಳಿಗೆ, ತಮ್ಮ ಹಳ್ಳಿಯಲ್ಲೇ ಐದನೆ ತರಗತಿ ಪ್ರಾರಂಭವಾದಾಗ, ಸ್ವರ್ಗಕ್ಕೆ ಮೂರೇ ಗೇಣೆನಿಸಿತು. ವಿಕ್ರಮನಂತೆ ಛಲಕೊಟ್ಟ ಶಾಲಾಭಿಮಾನಿಗಳ ಪರಿಶ್ರಮದ ಫಲವಾಗಿ ಸರ್ಕಾರದ ಸಹಾಯ ಪಡೆದು ಶಾಲೆಗೆ ಇನ್ನೊಂದು ಕೊಠಡಿ ಕಟ್ಟುವ ಅವಕಾಶ ಒದಗಿ ಬಂತು. ೧೯೯೪ರಲ್ಲಿ ನಾಲ್ಕು ಜನ ಶಿಕ್ಷಕರನ್ನು ಪಡೆದುಕೊಂಡ ಈ ಶಾಲೆಗೆ ಇನ್ನೂ ಇಬ್ಬರು ಶಿಕ್ಷಕರ ಆವಶ್ಯಕತೆ ಇದೆ. ಒಂದೊಂದೇ ಮೆಟ್ಟಿಲು ಹತ್ತುತ್ತಾ ಏಳನೇ ತರಗತಿಯನ್ನೂ ಪ್ರಾರಂಭಿಸಿದ ಈ ಶಾಲೆ ಇಂದು ಪಬ್ಲಿಕ್ ಪರೀಕ್ಷೆಗೆ ತನ್ನ ವಿದ್ಯಾರ್ಥಿಗಳನ್ನು ಕಳುಹಿಸುವ ಮಟ್ಟಕ್ಕೇರಿದೆ

ಶಿಕ್ಷಕರು ಮತ್ತು ಗ್ರಾಮಸ್ಥರು ಆ ಶಾಲೆಗೆ ಇನ್ನೊಂದೆರಡು ಕೊಠಡಿಗಳನ್ನು ಕಟ್ಟಿಸಿ, ಶಾಲೆಗೆ ಕಕ್ಕಟ್ಟು ಕಟ್ಟಿಸಲು ಸರ್ಕಾರದ ಆರ್ಥಿಕ ನೆರವನ್ನು ಕೋರಿದ್ದಾರೆ. ಪ್ರೌಢಶಾಲೆಯನ್ನು ಪ್ರಾರಂಭಿಸುವ ಉತ್ಸಾಹ, ಈ ದಿಶೆಯಲ್ಲಿ ಮುನ್ನಡೆಸಿದೆ.

ಈ ಹಳ್ಳಿಯಲ್ಲಿ ಓದು ಬರಹ ಬಲ್ಲವರೂ ಇದ್ದಾರೆ. ಪದವೀಧರರೂ, ಸರ್ಕಾರಿ ನೌಕರರೂ ಇದ್ದಾರೆ. ಜೊತೆ ಜೊತೆಯಲ್ಲೇ ನಿರಕ್ಷರ ಕುಕ್ಷಿಗಳೂ ಇದ್ದಾರೆ. ಶಾಲೆಯ ಶಿಕ್ಷಕರು ಶಾಲಾ ಮಕ್ಕಳಿಗೆ ಬೋಧಿಸು

ವುದರ ಜೊತೆಜೊತೆಗೆ ಹಳ್ಳಿಯ ನಿರಕ್ಷರ ಕುಕ್ಷಿಗಳಿಗೆ ಓದು ಬರಹ ಕಲಿಸಿ ಸಾಕ್ಷರತಾ ಆಂದೋಲನಕ್ಕೆ ತಮ್ಮ ಕೊಡುಗೆಯನ್ನಿತ್ತಿದ್ದಾರೆ. ಇವರ ಪರಿಶ್ರಮದ ಫಲವಾಗಿ ಹೆಬ್ಬೆಟ್ಟಿನ ರಾಕ್ಷಸನನ್ನು ಜಯಿಸಿ ಸರಸ್ವತೀ ಸುಪುತ್ರರನ್ನು ರೂಪಿಸಿದ್ದಾರೆ. ಎಲ್ಲರ ಸಹಕಾರ ದೊರೆತಲ್ಲಿ, ಗುಲಗಂಜಿ ಹಳ್ಳಿಯ ಪ್ರಗತಿಯಲ್ಲಿ ಸಂಶಯವಿಲ್ಲ. ಆ ದಿನ ದೂರವಿಲ್ಲ. 'ಮನಸ್ಸಿದ್ದರೆ ಮಾರ್ಗ' ಎನ್ನುವುದು ನಿಜ.



ಬೇಡು; ಬೇಡಿದ್ದು ನಿನಗೆ ದೊರೆಯುತ್ತದೆ. ಹುಡುಕು; ಹುಡುಕಿದ್ದು ನಿನಗೆ ದೊರೆಯುತ್ತದೆ. ತಟ್ಟು ನೀ ತಟ್ಟುವ ಬಾಗಿಲು ನಿನಗೆ ತೆರೆಯುತ್ತದೆ.

ಮುಳ್ಳು ಗಿಡಗಳಿಂದ ದ್ರಾಕ್ಷಿಯನ್ನಾಗಲಿ, ಅಂಜೂರವನ್ನಾಗಲಿ ಪಡೆಯಲು ಸಾಧ್ಯವೆ? ಹಾಗೆಯೇ ಒಳ್ಳೆಯ ಮರದಿಂದ ಒಳ್ಳೆಯ ಹಣ್ಣು, ಕೆಟ್ಟ ಮರದಿಂದ ಕೆಟ್ಟ ಹಣ್ಣು ದೊರೆಯುತ್ತದೆ.

ಕಣ್ಣು ದೇಹದ ದೀಪ; ನಿನ್ನ ಕಣ್ಣು ನೆಟ್ಟಗಿದ್ದರೆ, ನಿನ್ನ ಇಡೀ ದೇಹ ಬೆಳಕಿನಿಂದ ತುಂಬಿರುತ್ತದೆ. ನಿನ್ನ ಕಣ್ಣು ಕೆಟ್ಟಿದ್ದರೆ ನಿನ್ನ ಇಡೀ ದೇಹ ಕತ್ತಲಲ್ಲಿ ಮುಳುಗಿರುತ್ತದೆ.

—ಏಸುಕ್ರಿಸ್ತ

ಕಲಿಕೆಯಲ್ಲಿ ಹೊಂದಾಣಿಕೆ ಮತ್ತು ವರ್ತನಾಸಮಸ್ಯೆಗಳು

ಡಾ|| ಎ. ಎಸ್. ರಾಘವಕುಮಾರಿ

ಪೀಠಿಕೆ

ಸಮಾಜದಲ್ಲಿನ ಪ್ರತಿಯೊಬ್ಬ ವ್ಯಕ್ತಿ ವೈವಿಧ್ಯಮಯವಾಗಿಯೂ ವೈಶಿಷ್ಟ್ಯಪೂರ್ಣವಾಗಿಯೂ ಗುಣಾಗ್ರಗಣ್ಯನಾಗಿಯೂ ಎಲ್ಲರ ಗಮನವನ್ನು ಸೆಳೆಯುವಂಥವನಾಗಿಯೂ ಇರಲು ಪ್ರಯತ್ನಿಸುತ್ತಾನೆ. ಹುಟ್ಟಿನಿಂದ ಎಲ್ಲರೂ ಸಮಾನರಾಗಿದ್ದರೂ ಮುಂದಿನ ಜೀವನ ಕ್ರಮದಲ್ಲಿ ಅವರವರ ವಯಸ್ಸು, ಅಂಗ, ವಿದ್ಯೆ, ಆಸ್ತಿಪಾಸ್ತಿ, ಉದ್ಯೋಗ ಮುಂತಾದ ಅಂಶಗಳ ಸಲುವಾಗಿ ವ್ಯತ್ಯಾಸಗಳು, ವಿಭಾಗಗಳು ಏರ್ಪಡುವುದು ಸಹಜವೇ. ಕೆಲವರು ಪರಿಸರ, ಜನ, ಸ್ಥಳ, ಮುಂತಾದವುಗಳಿಗೆ ಹೆಚ್ಚಿನ ಪ್ರಾಧಾನ್ಯ ನೀಡದೆ ಸಲೀಸಾಗಿ ತಮಗೆ ಅಪರಿಚಿತ ಸನ್ನಿವೇಶವಾಗಿದ್ದರೂ ಚಿರಪರಿಚಿತವಾಗಿರುವಂತೆ ವರ್ತಿಸುತ್ತಾರೆ. ಆದರೆ ಮತ್ತೆ ಕೆಲವರು ಪರಿಚಿತ ಸನ್ನಿವೇಶದಲ್ಲೂ ಅಪರಿಚಿತರಂತೆ ಹೆದರಿಕೆ, ಅನುಮಾನ ಮುಂತಾದವುಗಳಿಗೆ ಈಡಾಗಿಯೊ ಇಲ್ಲವೆ ಒಂದು ರೀತಿಯ ಶಂಕೆಯಿಂದಲೇ ಬಲು ಕಷ್ಟಕ್ಕೆ ಒಳಪಡುತ್ತಾರೆ.

ತಕ್ಕಮಟ್ಟಿನ ವಿದ್ಯಾರ್ಹತೆಯನ್ನು ಪಡೆದುಕೊಂಡ ವ್ಯಕ್ತಿಯೊಬ್ಬ ತನ್ನ ಜೀವನ ನಿರ್ವಹಣೆಗಾಗಿ ಉದ್ಯೋಗವೊಂದನ್ನು ಬಯಸಿ ಯಾವುದಾದರೊಂದು ಕಛೇರಿಯಲ್ಲೋ ಶಾಲೆಯಲ್ಲೋ ಇಲ್ಲವೆ ಮತ್ಯಾವುದೇ ವ್ಯವಸ್ಥಾಪನೆಯಲ್ಲಿ ಕೆಲಸ ಗಳಿಸುತ್ತಾನೆ ಎಂದು ಇಟ್ಟುಕೊಳ್ಳೋಣ. ಎಷ್ಟೇ ಆದರೂ ಅವನು ಪ್ರವೇಶಿಸುವ ವ್ಯವಸ್ಥಾಪನೆ ಅವನಿಗೆ ತೀರ ಅಪರಿಚಿತ ಪರಿಸರವಾಗುವುದು ಸಹಜವೇ. ಅಲ್ಲಿ ಆತನ ಸಹೋದ್ಯೋಗಿ ಮಿತ್ರರು, ತಾನು ಕೆಲಸ ಮಾಡುವ ವಿಭಾಗದ ಮೇಲ್ವಿಚಾರಕ, ಇಡೀ ವ್ಯವಸ್ಥಾಪನೆಯ ಆಡಳಿತವರ್ಗದ ನೀತಿ ಧೋರಣೆಗಳ ಅಂತರಾಂಶವನ್ನು ಅಂದರೆ, ಅವರ ಮನೋಭಿಲಾಷೆ, ಕೆಲಸ ಮಾಡಿಸುವ ಪರಿ ಇತ್ಯಾದಿಗಳನ್ನು ಆತ ಗ್ರಹಿಸಿಕೊಳ್ಳಬೇಕಾಗುತ್ತದೆ. ಈ ಪ್ರಯತ್ನದಲ್ಲಿ ವ್ಯಕ್ತಿ ತಾನು ಪ್ರವೇಶಿಸಿರುವ ಹೊಸ ಪರಿಸರಕ್ಕೆ ತನ್ನನ್ನು ಹೊಂದಿಸಿಕೊಂಡು ತನ್ನ ಮೇಲಧಿಕಾರಿಗಳ ಅಗತ್ಯಗಳಿಗೆ ಅನುಗುಣವಾಗಿ ಕೆಲಸ

ನಿರ್ವಹಿಸಬೇಕಾಗುತ್ತದೆ. ಇಲ್ಲಿ ನಮಗೆ ಎದುರಾಗುವುದು ಹೊಸ ಪರಿಸರಕ್ಕೆ ತನ್ನನ್ನು ತಾನು ಹೊಂದಿಸಿಕೊಳ್ಳುವುದು ಮೇಲಧಿಕಾರಿಗಳ ಅಗತ್ಯಗಳನ್ನು ಪೂರೈಸುವುದು. ಮೊದಲನೆಯದು ಪರಿಸರೀಯ ಸಮಸ್ಯೆಗಳನ್ನು ಒಡ್ಡುವಂಥದು; ಎರಡನೆಯದು ವರ್ತನಾಸಮಸ್ಯೆಗಳನ್ನು ಒಡ್ಡುವಂಥದು. ಕಾಲಸಂದಂತೆ ಹೊಸ ಪರಿಸರ ಹೆಚ್ಚು ಹೆಚ್ಚು ಪರಿಚಿತವಾಗಿ ಕೆಲಸ ಸುಗಮವಾಗುವ ಅವಕಾಶ ಒದಗುತ್ತದೆ. ವರ್ತನಾಸಮಸ್ಯೆಗಳಿಗೆ ಸಂಬಂಧಿಸಿದಂತೆ ಉದ್ಯೋಗಿ ಮತ್ತು ಅಧಿಕಾರಿಗಳ ನಡುವಿನ ಸಂಬಂಧ ಸಾಮರಸ್ಯ ಯಾವ ಪರಿಯಲ್ಲಿರುತ್ತದೆ ಎಂಬುದು ಗಮನಾರ್ಹ. ಇವರ ನಡುವೆ ಜರುಗುವ ಅನ್ಯೋನ್ಯಕ್ರಿಯೆ ಯುಕ್ತ ರೀತಿಯದ್ದಾಗಿದ್ದಲ್ಲಿ ಮಾತ್ರ ಉದ್ದೇಶಿತ ಕೆಲಸ ಫಲಪ್ರದವಾಗುತ್ತದೆ. ಇಲ್ಲಿ ಎದುರಾಗುವ ಯಾವುದೇ ವೈಮನಸ್ಯ, ಅಸೂಯೆ, ವೃತ್ತೀಯ ಪೂರ್ವಾಗ್ರಹಗಳು ಮುಂತಾದವೆಲ್ಲ ಇಡೀ ವ್ಯವಸ್ಥಾಪನೆಯ ಪತನಕ್ಕೆ ತಮ್ಮ ಕೊಡುಗೆಯನ್ನು ನೀಡುತ್ತವೆ.

ಇಂಥದೇ ಪರಿಸ್ಥಿತಿಯನ್ನು ಕಲಿಕಾ ಸನ್ನಿವೇಶದಲ್ಲಿ ಕೂಡಾ ಕಾಣಬಹುದು. ವಿದ್ಯಾಭ್ಯಾಸಕ್ಕೆ ಹಾತೊರೆದು ಶಾಲೆಗೆ ಸೇರುವ ವಿದ್ಯಾರ್ಥಿಗಳು ಒಂದೆಡೆ, ಅವರಿಗೆ ಬೋಧಿಸುವ ಶಿಕ್ಷಕವೃಂದ ಇನ್ನೊಂದೆಡೆ. ವಿದ್ಯಾರ್ಥಿ-ವಿದ್ಯಾರ್ಥಿನಿಯರು, ಎಷ್ಟರಮಟ್ಟಿಗೆ ತಾವು ಶಾಲೆಯಲ್ಲಿರುವ ಪರ್ಯಂತವೂ ಶಿಸ್ತುಭರಿತ ಶಿಕ್ಷಣವನ್ನು ಪಡೆಯುತ್ತಾರೆ. ಅದಕ್ಕೆ ಪೋಷಕವಾಗಿ ಅವರಿಗೆ ವಿದ್ಯೆ ಕಲಿಸುವ ಶಿಕ್ಷಕರು ಎಷ್ಟರಮಟ್ಟಿಗೆ ನಿಷ್ಠೆಯಿಂದ ತಮ್ಮ ಕೆಲಸವನ್ನು ನಿರ್ವಹಿಸುತ್ತಾರೆ ಎಂಬುದು ಗಮನಿಸಬೇಕಾದ ಅಂಶ. ಹಿಂದೆ ತಿಳಿಸಿದಂಥ ವ್ಯವಸ್ಥಾಪನೆಯ ಸಂದರ್ಭದಲ್ಲಿ ಹೇಗೋ ಶಾಲೆಯ ಸಂದರ್ಭದಲ್ಲಿಯೂ ಶಾಲಾ ಪರಿಸರಕ್ಕೆ ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಹೊಂದಾಣಿಕೆ, ಶಿಕ್ಷಕರು ಮತ್ತು ಶಿಕ್ಷಣಾಧಿಕಾರಿಗಳ ನಡುವೆ ಇರುವ ಅನ್ಯೋನ್ಯ ಸಂಬಂಧ, ವೃತ್ತಿತೃಪ್ತಿ ಮುಂತಾದವುಗಳ ಫಲವಾಗಿ ವಿದ್ಯಾರ್ಥಿಗಳಿಗೆ ಲಭಿಸುವ ನ್ಯಾಯಪೂರ್ಣ ಶಿಕ್ಷಣ—ಇವೆಲ್ಲ ಪರಿಸರ ಮತ್ತು ವರ್ತನೆಗಳಿಗೆ ಸಂಬಂಧಿಸಿದ ಸಮಸ್ಯಾಮುಖಗಳನ್ನು ಪ್ರತಿಬಿಂಬಿಸುತ್ತವೆ.

ಇಲ್ಲಿ ಹೇಳಿರುವ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಸಮಾಜದಲ್ಲಿರುವ ಜನರನ್ನು ಇಲ್ಲವೆ ಯುವಪೀಳಿಗೆಯನ್ನು ಒಟ್ಟಾರೆ ಎರಡು ಸಮೂಹಗಳಾಗಿ ವಿಂಗಡಿಸಬಹುದು: ಸಮಸ್ಯಾಸಹಿತರು ಮತ್ತು ಸಮಸ್ಯಾರಹಿತರು. ವಿದ್ಯಾವಂತರಾಗಿರಲಿ ಅಲ್ಲದಿರಲಿ ಈ ಎರಡೂ ಸಮೂಹಗಳನ್ನು ಪ್ರತಿಯೊಂದು ಸಮಾಜದಲ್ಲೂ ಕಾಣಬಹುದಾಗಿದೆ.

ಪ್ರತಿಯೊಬ್ಬ ವ್ಯಕ್ತಿಯೂ ಈ ಸಮಾಜದ ಒಂದು ಅಂತರಿಕಭಾಗ ಎಂಬುದು ವೇದ್ಯ. ಸಾಮಾಜಿಕ ಅಂಶಗಳಲ್ಲಿ ಅನೇಕ ಬದಲಾವಣೆಗಳು ಆಗಿಂದಾಗ್ಗೆ ಆಗುತ್ತಲೇ ಇವೆ. ಸಾಮಾನ್ಯ ದೃಷ್ಟಿಯಲ್ಲಿ ಹೇಳುವುದಾದರೆ ಬೇರೆಡೆಯಲ್ಲಿರುವಂತೆ ಭಾರತದಲ್ಲೂ ಜನ ಅನೇಕ ಸಮೂಹಗಳಲ್ಲಿ ವಾಸಮಾಡುತ್ತಿದ್ದಾರೆ. ಸಾಮಾಜಿಕ ಅಂಶಗಳಲ್ಲಾದ ಬದಲಾವಣೆ ಈ ಸಮೂಹಗಳ ಮೇಲೆ ಪ್ರಭಾವ ಬೀರುತ್ತದೆ. ಮುಖ್ಯವಾಗಿ,

ಹಿರಿಯರಿಗಿಂತ ಕಿರಿಯರಿಗೆ ಕೆಲವು ವಿಷಯಗಳಿಗೆ ಸಂಬಂಧಿಸಿದಂತೆ ತಪ್ಪು ಭಾವನೆಗಳು ಇಲ್ಲವೆ ಅನಿಸಿಕೆಗಳು ಇದ್ದಿರಬಹುದು ಅಥವಾ ಬರುವ ಸಾಧ್ಯತೆ ಉಂಟು. ಉದಾಹರಣೆಗೆ ಮನೋಭಾವಗಳು, ಗ್ರಹಿಕೆ, ಆಸಕ್ತಿ ಮುಂತಾದವುಗಳನ್ನು ಗಮನಿಸಬಹುದು. ಮನೋಭಾವಗಳ ಬೆಳವಣಿಗೆಯೇ ಶಿಕ್ಷಣದ ಪ್ರಮುಖಕಾರ್ಯ ಎಂಬುದನ್ನು ಇಲ್ಲಿ ಗಮನಿಸಬೇಕಾದ ಅಂಶ. ಏಕೆಂದರೆ ನೂತನ, ಸ್ಥಿರ, ಅರ್ಥಪೂರ್ಣ ಮತ್ತು ಉಪಯುಕ್ತ ಸಮಾಜವನ್ನು ನಿರ್ಮಿಸುವ ಪ್ರಯತ್ನವನ್ನು ಇಲ್ಲಿ ಮಾಡಬೇಕಾಗುತ್ತದೆ.

'ಇಂದಿನ ಯುವಕರೇ ನಾಳಿನ ಪೌರರು' ಎಂಬ ತಜ್ಞರ ಹೇಳಿಕೆ ಅರ್ಥಪೂರ್ಣವಾಗಿದೆ. ಹುಟ್ಟಿದಾಗಿನಿಂದ ಪ್ರತಿಯೊಂದು ಮಗುವನ್ನೂ ಸಮಾಜೀಕರಣಕ್ಕೆ ಒಳಪಡಿಸಿ ಸಾಧ್ಯವಾದಷ್ಟುಮಟ್ಟಿಗೆ ಅವಶ್ಯವಾಗಿರುವ ಜ್ಞಾನ, ಕೌಶಲ, ಗುಣ, ಮುಂತಾದವುಗಳನ್ನು ಕಲಿಯಲು ಮತ್ತು ಬೆಳೆಸಿಕೊಳ್ಳಲು ಅವಕಾಶ ಹಾಗೂ ಉತ್ತೇಜನಗಳನ್ನು ನೀಡುವುದು ಈಗ ನಡೆದು ಬಂದಿದೆ. ವ್ಯಕ್ತಿಯ ಮೇಲೆ ಪ್ರಭಾವ ಬೀರುವ ಹಲವಾರು ಪ್ರಮುಖ ಅಂಶಗಳ ಪೈಕಿ ಮನೋಭಾವ ಎಂಬುದು ಅತಿ ಮುಖ್ಯ. ಮನೋಭಾವವು ವ್ಯಕ್ತಿಯ ಯೋಜನಾ ಸಾಮರ್ಥ್ಯಕ್ಕೆ ಸ್ಥಿರತೆಯನ್ನು ಕೊಡುತ್ತದೆ. ಇದು ವಿವಿಧ ರೀತಿಯ ಹೊಂದಾಣಿಕೆಗಳ ಮೇಲೂ ಪ್ರಭಾವ ಬೀರುವಂಥದ್ದು. ವ್ಯಕ್ತಿ ತನ್ನ ಪ್ರತಿಕ್ರಿಯೆಗಳ ಮೂಲಕ ಮನೋಭಾವಗಳನ್ನು ವ್ಯಕ್ತಪಡಿಸುತ್ತಾನೆ. ಅಣಕಿಸುವುದು, ಅವಲೋಕನ, ಅನುಕರಣೆಗಳ ಮೂಲಕ ಇವುಗಳನ್ನೂ ರೂಪಿಸಿಕೊಳ್ಳುತ್ತಾನೆ. ಸಕಾರಾತ್ಮಕ ಇಲ್ಲವೆ ಸದೃಢ ಮನೋಭಾವಗಳು ವ್ಯಕ್ತಿಗೆ ಹಿತಬಯಸುವಂಥವಾದರೆ, ನಕಾರಾತ್ಮತಕ ಇಲ್ಲವೆ ಅದೃಢ ಮನೋಭಾವಗಳು ವ್ಯಕ್ತಿಯ ಅನೇಕ ರೀತಿಯ ಸಮಸ್ಯೆಗಳಿಗೆ ತಾಣವಾಗುತ್ತವೆ.

ಪರಿಕಲ್ಪನೆಗಳು

ಇಲ್ಲಿ ಮೂರು ಪರಿಕಲ್ಪನೆಗಳು ನಮ್ಮ ಆಲೋಚನಾ ಪರಿಧಿಯೊಳಗೆ ಬರುತ್ತವೆ. ಅವಾವುವೆಂದರೆ—೧) ಹೊಂದಾಣಿಕೆ, ೨) ಅಪಹೊಂದಾಣಿಕೆ ಮತ್ತು ೩) ವರ್ತನಾ ಸಮಸ್ಯೆ.

೧ ಹೊಂದಾಣಿಕೆ

ಅ) ಸನ್ನಿವೇಶಗಳಿಗೆ ಸರಿಹೋಗುವಂತೆ ಜೀವಿಗಳು ತಮ್ಮ ವರ್ತನೆಯನ್ನು ಮಾರ್ಪಡಿಸಿಕೊಳ್ಳುವುದು.

ಆ) ಸಮಾಜಜೀವನದಲ್ಲಿ ಗುಂಪುಗಳೂ ವ್ಯಕ್ತಿಗಳೂ ತಮ್ಮತಮ್ಮೊಳಗೆ ತಲೆದೋರಬಹುದಾದ ವ್ಯತ್ಯಾಸಗಳನ್ನು ಕಡಿಮೆ ಮಾಡಿಕೊಂಡು ಅನ್ಯೋನ್ಯವಾಗಿರುವುದು.

೨ ಅಪಹೊಂದಾಣಿಕೆ

ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಗೆ, ಸಮಾಜಕ್ಕೆ ಇಲ್ಲವೆ ಇವೆರಡಕ್ಕೂ ಮಾರಕವಾಗುವ ರೀತಿಯಲ್ಲಿ ವರ್ತಿಸುವ ಪರಿ.

೩ ವರ್ತನಾಸಮಸ್ಯೆ

ಅ) ಮಗುವು ವಿಚಿತ್ರರೀತಿಯಲ್ಲಿ ವರ್ತಿಸುವಂತೆ ಮಾಡುವ ಇಲ್ಲವೆ

ವರ್ತಿಸಲು ತಂದೊಡ್ಡುವ ಯಾವುದಾದರೂ ತೊಡಕು. ಮಗುವಿನ ವರ್ತನೆಯಲ್ಲಿ ವಿಕಾರ ಉಂಟು ಮಾಡುವ ಯಾವುದಾದರೂ ಒಂದು ಸನ್ನಿವೇಶ.

೪) ವಿಪರೀತ ಗಲಾಟೆ ಮಾಡುವ ಇಲ್ಲವೆ ತೀರ ಜಡವಾಗಿರುವ ಮಗು ಅಥವಾ ಯುವಕನ ಸ್ಥಿತಿ.

ಸಮಸ್ಯಾ ಗುಣಧರ್ಮಗಳು

ವ್ಯಕ್ತಿಯೊಬ್ಬನ ವರ್ತನೆ, ಸನ್ನಿವೇಶಗಳು ಯಾವುದೇ ಆಗಿರಲಿ, ವ್ಯಕ್ತಿಯು, ಪ್ರಸಾಮಾನ್ಯ ವರ್ತನೆಗೆ ಭಿನ್ನ ಎಂದು ಅನಿಸಿದಲ್ಲಿ ಆ ವ್ಯಕ್ತಿಯ ವರ್ತನೆಯಲ್ಲಿ ಅಪಹೊಂದಾಣಿಕೆ ವ್ಯಕ್ತವಾಗುತ್ತದೆ. ಇಂಥ ಸನ್ನಿವೇಶದಲ್ಲಿ ಎದುರಾಗುವ ಸಮಸ್ಯೆಗಳ ಗುಣಧರ್ಮಗಳನ್ನು ಈ ಮುಂದಿನಂತೆ ಅರಿಯಬಹುದು.

೧ ವಿವಿಧ ಪರಿಸರಗಳಲ್ಲಿ ಕಡಿಮೆ ಹೊಂದಾಣಿಕೆ ಇಲ್ಲವೆ ಅಪಹೊಂದಾಣಿಕೆ (ಉದಾ: ಮನೆ, ಶಾಲೆ, ಸಮಾಜ, ಮುಂತಾದೆಡೆಗಳು).

೨ ಹೆಚ್ಚು ಸಮಯ ಮನೆಯಿಂದ ಹೊರಗೆ ಇರುವುದು.

೩ ವಿನಾಕಾರಣ ಅಹಿತಕರ ವಾತಾವರಣಕ್ಕೆ ಎಡೆಮಾಡುವುದು.

೪ ಜೊತೆಯಲ್ಲಿರುವವರ ನೆಮ್ಮದಿಗೆ ಭಂಗತರುವುದು.

೫ ಪರಿಸ್ಥಿತಿ ಇಲ್ಲವೆ ಸಂದರ್ಭವನ್ನು ಅರ್ಥಮಾಡಿಕೊಳ್ಳದಿರುವುದು.

೬ ಅತಿಯಾಗಿ ಮಾತನಾಡುವುದು.

೭ ಮಾಡಬೇಕಾಗಿರುವ ಕೆಲಸಗಳನ್ನು ಅಲಕ್ಷಿಸುವುದು.

೮ ಆರ್ಥಿಕ ಮುಗ್ಗಟ್ಟು.

೯ ಆರೋಗ್ಯದ ಬಗ್ಗೆ ಅಸಡ್ಡೆ.

೧೦ ಭಾವನೆ ಇಲ್ಲವೆ ಅನಿಸಿಕೆಗಳ ಅನಭಿವ್ಯಕ್ತಿ.

೧೧ ಸಜ್ಜನರ ಸ್ನೇಹವನ್ನು ಮಾಡದಿರುವುದು.

೧೨ ವಿಶಾಲ ಮನೋಭಾವವನ್ನು ಬೆಳೆಸಿಕೊಳ್ಳದಿರುವುದು.

೧೩ ವೈಜ್ಞಾನಿಕ ಮನೋಭಾವವನ್ನು ಜೀವನದಲ್ಲಿ ಬಳಸಲಾಗದ ಅಸಾಮರ್ಥ್ಯ.

೧೪ ಆಸಕ್ತಿ ಬೆಳವಣಿಗೆಗೆ ಪೂರ್ಣವಿರಾಮ ಹಾಕುವುದು.

೧೫ ಪಡೆದಿರುವ ಶಿಕ್ಷಣ, ತರಬೇತಿ ಇಲ್ಲವೆ ಅನುಭವ ಮುಂತಾದವುಗಳಿಂದ ಸಮಸ್ಯೆಗಳ ಅಪರಿಹಾರ ಮುಂತಾದವು.

ವರ್ತನಾ ಸಮಸ್ಯೆಗಳ ಕಾರಣಗಳು

ಪ್ರಧಾನವಾಗಿ ಇವುಗಳನ್ನು ಎರಡು ಕೋನಗಳಿಂದ ನೋಡಬಹುದು — ಅನುವಂಶೀಯ ಅಂಶಗಳು ಮತ್ತು ಪರಿಸರೀಯ ಅಂಶಗಳು. ಅನುವಂಶೀಯ ಅಂಶದಲ್ಲಿ ಮೂರು ಸ್ಥಿತಿಗಳನ್ನು ಗುರುತಿಸಲಾಗಿದೆ.

೧. ಭೌತಸ್ಥಿತಿ: ಅನೇಕ ರೋಗರುಜಿನಗಳು ರಕ್ತಗತವಾಗಿ ಬಂದಿರುತ್ತವೆ. ಉದಾ: ಕ್ಷಯ, ಮೂರ್ಛೆರೋಗ ಮುಂತಾದವು.

೨. ಬೌದ್ಧಿಕಸ್ಥಿತಿ: ತಂದೆತಾಯಿಗಳ ಬುದ್ಧಿ ಸಾಮರ್ಥ್ಯ ಕೆಳಮಟ್ಟದ್ದಾದರೆ ಅವರ ಮಕ್ಕಳದ್ದೂ ಅದೇ ರೀತಿಯದ್ದಾಗುತ್ತದೆ. ಇಂಥ ಮಕ್ಕಳು ಮಾನಸಿಕವಾಗಿ ದುರ್ಬಲರಾಗಿರುವುದರಿಂದ ಯಾವುದೇ ಕೆಲಸಕ್ಕಾಗಲಿ ಅವರನ್ನು ಬಳಸಿಕೊಳ್ಳಬಹುದು.

೩. ಮಾನಸಿಕಸ್ಥಿತಿ: ತಂದೆತಾಯಿಯವರ ನಡೆವಳಿಕೆ (ಮಾನಸಿಕ ಸ್ಥಿತಿ) ಅಸ್ಥಿರವಾಗಿದ್ದರೆ ಅವರ ಮಕ್ಕಳ ನಡೆವಳಿಕೆಗಳೂ ಅದೇ ರೀತಿಯದ್ದಾಗುವುವು. ಇವರನ್ನು ಸುಲಭವಾಗಿ ಉದ್ರೇಕಿಸಬಹುದು. ಇವರು ಸಾಮಾನ್ಯ, ಸಹಜ ರೀತಿಯಲ್ಲಿ ವರ್ತಿಸದಿರುವ ಸಾಧ್ಯತೆಗಳೂ ಉಂಟು. ಪರಿಸರೀಯ ಅಂಶದಲ್ಲಿ ಎರಡು ಬಗೆಯ ಪರಿಸರಗಳನ್ನು ಪರಿಗಣಿಸಿದೆ:

ಅ) ಮನೆ ಪರಿಸರ

೧) ತ್ಯಜಿಸಿರುವ ಮಗು: ಬೇಡದಿರುವ ಮತ್ತು ಅಲಕ್ಷಿತ ಮಗು ಸಾಮಾನ್ಯ ಮಗುವಿನಂತೆ ಬೆಳೆಯುವುದಿಲ್ಲ. ಈ ಮಗುವಿಗೆ ಸ್ನೇಹ, ಪ್ರೀತಿ, ವಿಶ್ವಾಸ, ಮೆಚ್ಚುಗೆ ಮುಂತಾದವುಗಳು ಅಷ್ಟಾಗಿ ಲಭ್ಯವಾಗಿರುವುದಿಲ್ಲ. ಆದ್ದರಿಂದ ತನಗೆ ಇದು ಭದ್ರತೆ ಇಲ್ಲವೆಂಬ ಭಾವನೆಯನ್ನು ಬೆಳೆಸಿಕೊಳ್ಳುತ್ತದೆ ಮತ್ತು ಸಮಾಜ ಹಾಗೂ ಕುಟುಂಬಗಳನ್ನು ದ್ವೇಷಿಸುತ್ತದೆ.

೨) ದೋಷಪೂರಿತ ಶಿಸ್ತು: ಅತಿಯಾಗಿ ಸಲಿಗೆ ಕೊಟ್ಟಿರುವ ಇಲ್ಲವೆ ಬಲುಬಿಗಿಯಿಂದ ಇರುವ ಹಾಗೂ ವಿವಿಧ ಮಟ್ಟಗಳಲ್ಲಿ ಶಿಸ್ತನ್ನು ಪಾಲಿಸಲೇಬೇಕೆಂದು ನಿರ್ಣಯಿಸಿರುವ ತಂದೆತಾಯಿಗಳ ವರ್ತನೆ ಹಾಗೂ ವ್ಯವಹಾರಗಳು ಮಗುವಿನ ಮೇಲೆ ಅನಾರೋಗ್ಯಕರವಾದ ಪ್ರಭಾವಗಳನ್ನು ಬೀರುತ್ತವೆ. ಅಂತೆಯೇ ಅತಿಯಾಗಿ ಕಟ್ಟೆಚ್ಚರದಲ್ಲಿರುವ ಮಗು ಜೀವನದಲ್ಲಿ ತನ್ನ ಕೆಲಸಗಳನ್ನೇ ಮಾಡಿಕೊಳ್ಳುವುದಕ್ಕೆ ಆಗದೆ ಕಷ್ಟಪಡುವುದನ್ನು ವಿವಿಧ ಸಮಾಜ ಇಲ್ಲವೆ ಕುಟುಂಬಗಳಲ್ಲಿ ಕಾಣುವುದಿದೆ.

೩) ವಿಷಮಯ ಪರಿಸರ: ತಂದೆತಾಯಿಗಳು ಇಲ್ಲವೆ ಕುಟುಂಬದ ಹಿರಿಯರು ನಿರಂತರವಾಗಿ ಜಗಳವಾಡುತ್ತಲೇ ಇದ್ದರೆ ಅವರ ಮಕ್ಕಳಮೇಲೆ ಇದು ಅನಾರೋಗ್ಯಕರವಾದ ಪ್ರಭಾವವನ್ನು ಬೀರುತ್ತದೆ. ಮನೆಯ ಹಿರಿಯರ ಪೈಕಿ ಯಾರಾದರೂ ಅನೈತಿಕ ಕೆಲಸದಲ್ಲಿ ಮಗ್ನರಾಗಿದ್ದರೆ ಮಗುವೂ ಅಂಥ ವ್ಯವಹಾರವನ್ನು ತಾನೂ ಮಾಡುವುದಕ್ಕೆ ಪ್ರಯತ್ನಿಸುವುದು ಸಹಜ.

ಆ) ಶಾಲಾ ಪರಿಸರ

ಅತಿಶಿಸ್ತು, ದೋಷಭರಿತ ಬೋಧನಾ ವಿಧಾನಗಳು, ಶಿಕ್ಷಕರ ಮನೋಭಾವ, ಅಭದ್ರತೆ, ಪತ್ತೆ ಹಚ್ಚುವಿಕೆ ಇಲ್ಲದಿರುವುದು, ಮನರಂಜನ ಸೌಲಭ್ಯಗಳ ಅಭಾವ,

ದೋಷಯುಕ್ತ ವೇಳಾಪಟ್ಟಿ ಮತ್ತು ಪಠ್ಯ ಕ್ರಮ, ಬಿಡುವಿಲ್ಲದ ತರಗತಿಗಳು ಮೊದಲಾದ ಅಂಶಗಳು ಮಗು ಶಾಲೆಯ ಬಗ್ಗೆ ದ್ವೇಷ ಬೆಳೆಸಿಕೊಳ್ಳುವಂತೆ ಮಾಡುತ್ತವೆ. ಅಂದರೆ, ವ್ಯಕ್ತಿಯ ಇರುವಿಕೆ ಇಲ್ಲವೆ ವರ್ತನೆಯ ಮೇಲೆ ಪರಿಸರ ಎಷ್ಟರಮಟ್ಟಿಗೆ ಪ್ರಭಾವ ಬೀರುತ್ತದೆ ಎಂಬುದು ಇಲ್ಲಿ ಮುಖ್ಯ.

ವರ್ತನಾಸಮಸ್ಯೆಯ ಲಕ್ಷಣಗಳು

೧) ವಿದ್ಯಾರ್ಥಿಗಳು ಸಮೂಹಕ್ಕೆ ಸೇರದಿರುವುದು.

೨) ತನ್ನ ವರ್ತನೆಯಲ್ಲಾಗಿರುವ ಅಸ್ಥಿರ ಬದಲಾವಣೆಗಳನ್ನು ವಿದ್ಯಾರ್ಥಿ ವ್ಯಕ್ತಪಡಿಸುವುದು.

೩) ಸಮಾಜವಿರೋಧೀ ಕಲಿಕಾ ವಿಧಾನಗಳನ್ನು ಹೆಚ್ಚಾಗಿ ಬಳಸುವುದು.

೪) ನಿರಂತರವಾಗಿ ವಿದ್ಯಾರ್ಥಿ ಪರೀಕ್ಷೆಯಲ್ಲಿ ಅನುತ್ತೀರ್ಣನಾಗುವುದು.

೫) ಶಾಲಾಕೆಲಸಗಳಲ್ಲಿ ನಿರಂತರವಾಗಿ ದಿವ್ಯ ಅನಾಸಕ್ತಿಯನ್ನು ವ್ಯಕ್ತಪಡಿಸುವುದು.

೬) ಹೆದರಿಕೆ, ನಡುಕ ಮುಂತಾದ ನರದೌರ್ಬಲ್ಯಗಳನ್ನು ಆಗಾಗ್ಗೆ ಪ್ರಕಟಪಡಿಸುವುದು.

೭) ತನ್ನ ಉದ್ವೇಗಗಳನ್ನು ವ್ಯಕ್ತಪಡಿಸಲು ಆಗಾಗ್ಗೆ ವಿವಿಧ ಕಾರ್ಯಗಳನ್ನು ಮಾಡುವುದು—

ಉದಾ : ಬೆರಳು ಚೀಪುವುದು, ಶಿಳ್ಳೆ ಹಾಕುವುದು ಮುಂತಾದವು.

೮) ಬಲು ನಾಚಿಕೆ ಇಲ್ಲವೆ ಅಂಜಿಕೆಯಿಂದಿರುವುದು.

೯) ತರಗತಿಯಲ್ಲಿ ಉದಾಸೀನವಾಗಿದ್ದು ಪಾಠಕ್ಕೆ ಗಮನ ನೀಡದೇ ಇರುವುದು.

೧೦) ಸೋಮಾರಿತನ, ಆಯಾಸ, ಇಲ್ಲವೆ ಬೇಸರವನ್ನು ಪ್ರಕಟಪಡಿಸುವುದು.

ವರ್ತನಾಸಮಸ್ಯೆಯ ಬಗೆಗಳು

ಐದು ಬಗೆಯ ವರ್ತನಾ ಸಮಸ್ಯೆಗಳಿವೆ. ಇವುಗಳ ಬಗ್ಗೆ ಅಧ್ಯಾಪಕರು, ತಂದೆತಾಯಿಗಳು, ವಿದ್ಯಾರ್ಥಿಯ ಹಿತೈಷಿಗಳು ಗಮನ ಕೊಡಬೇಕಾಗಿರುವುದು ಅನಿವಾರ್ಯ.

೧ ಶಾಲೆಗಳ್ಳ: ಶಾಲೆಗೆ ಹೋಗುವುದನ್ನು ತಪ್ಪಿಸಿ ಹೊರಗೆ ಸ್ವೇಚ್ಛೆಯಾಗಿ ಆಡ್ಡಾಡುವ ಪ್ರವೃತ್ತಿಯುಳ್ಳ ವ್ಯಕ್ತಿಯನ್ನು ಶಾಲೆಗಳ್ಳ ಎಂದು ಹೇಳುವುದಿದೆ. ಇಂಥ ವಿದ್ಯಾರ್ಥಿ ವೇಳೆಗೆ ಸರಿಯಾಗಿ ಮನೆಯಿಂದ ಹೊರಟರೂ ಶಾಲೆಗೆ ಹಾಜರಾಗುವುದಿಲ್ಲ. ಇವನಿಗೆ ಅಪರಾಧಿಕ್ರಿಯೆಗಳಲ್ಲಿ ತೊಡಗಿಸಿಕೊಳ್ಳಲು ಪ್ರೇರಣೆ ಸಿಗಬಹುದು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ತನ್ನ ಇಚ್ಛೆಗೆ ಅನುಗುಣವಾಗಿ ಮತ್ತು ಆಸಕ್ತಿದಾಯಕ ಕೆಲಸಗಳು ಶಾಲೆಯಲ್ಲಿ ಇಲ್ಲದಿರುವುದರಿಂದ ವಿದ್ಯಾರ್ಥಿ ಶಾಲೆಗೆ ಹೋಗದೆ ಇರುವುದು ಒಂದು ಕಾರಣವಾದರೆ, ಅರ್ಥಪೂರ್ಣ ಕಲಿಕೆಗೆ ಬೇಕಾಗಿರುವ ಪರಿಸರ ಇಲ್ಲದಿರುವುದು ಮತ್ತೊಂದು ಕಾರಣ. ಮತ್ತೆ ಕೆಲವು ವಿದ್ಯಾರ್ಥಿಗಳು ತುಂಬಾ ತುಂಟರು, ಹೆದರಿಕೆ ಉಂಟುಮಾಡುವಂಥವರೂ ಆಗಿದ್ದಲ್ಲಿ ಇಂಥವರಿಗೆ ಹೆದರಿ ಉಳಿದ ವಿದ್ಯಾರ್ಥಿಗಳು ಶಾಲೆಯ ಹೊರಗೇ ಉಳಿಯಲು ಇಷ್ಟಪಡು

ವರು ಎಂಬುದು ಮತ್ತೊಂದು ಕಾರಣ ವಾಗುತ್ತದೆ.

೨. ಕದಿಯುವುದು: ತನಗೆ ಬೇಕಾಗಿರುವ ವಸ್ತು ತನ್ನಲ್ಲಿ ಇಲ್ಲದೆ ಬೇರೆಯವರಲ್ಲಿ ಇದ್ದು, ಆ ವಸ್ತುವನ್ನು ಕೊಂಡುಕೊಳ್ಳಲು ಆಗದಿದ್ದಾಗ ವಸ್ತುವಿನ ಮಾಲಿಕನಿಗೆ ತಿಳಿಯದಂತೆ ಅದನ್ನು ತಾನು ತೆಗೆದುಕೊಳ್ಳುವುದು. ಮಗು ಚಿಕ್ಕದಾಗಿದ್ದಾಗಲೋ ಅಥವಾ ಮೊದಲ ಬಾರಿ ಇಂಥ ಕೆಲಸ ನಡೆದರೆ ಕ್ಷಮಿಸಿ ಮಗುವಿಗೆ ತಿಳಿಯ ಹೇಳಬಹುದು. ಇದೇ ಕೆಲಸವನ್ನು ಪ್ರೌಢ ಹಂತದ ಒಬ್ಬ ವಿದ್ಯಾರ್ಥಿ ಮಾಡಿದರೆ ಅದು ಕಳ್ಳತನ ಎಂದೆನಿಸುತ್ತದೆ. ಇಲ್ಲಿಯೂ ಮೊತ್ತಮೊದಲ ಸಲ ಕ್ಷಮೆ ಸಿಗಬಹುದು. ಆದರೆ ಇಂಥ ಪ್ರವೃತ್ತಿಯನ್ನು ಮುಂದುವರಿಸಿಕೊಂಡು ಹೋದಲ್ಲಿ ಅದು ಅಕ್ಷಮ್ಯ ಅಪರಾಧವಾಗೇ ಪರಿಣಮಿಸುತ್ತದೆ.

೩. ಮೋಸ ಮಾಡುವುದು: ನಿಶ್ಚಿತ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಸಾಧ್ಯವಾಗದಾಗ ವಿದ್ಯಾರ್ಥಿಗಳು ಇಲ್ಲವೇ ವ್ಯಕ್ತಿಗಳು ಮಾಡುವ ಯತ್ನ. ಉದಾ: ಪರೀಕ್ಷೆಯಲ್ಲಿ ಯಾರಿಗೂ ಗೊತ್ತಿಲ್ಲದಂತೆ ಕಾಪಿ ಹೊಡೆಯುವುದು ಅಥವಾ ಮನೆ ಕೆಲಸಗಳನ್ನು ಮಾಡಬೇಕಾದ ಸಮಯದಲ್ಲಿ ಮಾಡದೆ ಯಾವುದಾದರೊಂದು ಸಬೂಬು ಹೇಳುವುದು, ಇತ್ಯಾದಿ. ವಿದ್ಯಾರ್ಥಿಗಳ ಆಸಕ್ತಿ, ಮನೋಭಾವ, ಅಭಿರುಚಿ, ಆವಶ್ಯಕತೆಗಳನ್ನು ಪರಿಗಣಿಸದೆ ಉದ್ದೇಶಗಳನ್ನು ನಿರ್ಣಯಿಸಿ ಪಠ್ಯಕ್ರಮವನ್ನು ರಚಿಸಿದಾಗ ಇಂಥ ಕೆಲಸಗಳು ಆಗುತ್ತವೆ. ಕೆಲಸ ಚಿಕ್ಕದಾಗಲಿ, ದೊಡ್ಡದಾಗಲಿ, ಸುಲಭದ್ದಾಗಿರಲಿ, ಕಠಿಣದ್ದಾಗಿರಲಿ ನಾನು ಮಾಡಬಲ್ಲೆ, 'ನಾನು ಮಾಡಲೇಬೇಕು' ಎಂಬ ದೃಢ ಆತ್ಮವಿಶ್ವಾಸವನ್ನು ವಿದ್ಯಾರ್ಥಿಗಳಾಗಲಿ ಇಲ್ಲವೆ ವ್ಯಕ್ತಿಗಳಾಗಲಿ ಬೆಳೆಸಿಕೊಳ್ಳದಿದ್ದಾಗಲೂ ಮೋಸವೆಸಗುವ ಸಂದರ್ಭಗಳು ತಲೆದೋರಬಹುದು.

೪. ಜಗಳಗಂಟತನ ಮತ್ತು ಪೀಡನೆ: ತ್ಯಾಜ್ಯಮಕ್ಕಳು ಅಧ್ಯಾಪಕರ ಪ್ರೀತಿಗಳಿಸಿರುವ ವಿದ್ಯಾರ್ಥಿಗಳನ್ನು ಅವಹೇಳನ ಮಾಡಿ ಹಿಯ್ಯಾಳಿಸುತ್ತಾರೆ ಎಂದು ಸ್ಪರ್ನ್ ಎಂಬ ಶಿಕ್ಷಣ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಮಾಡುವುದಕ್ಕೆ ಯುಕ್ತ ಕೆಲಸಗಳು ಇಲ್ಲದ ಕಾರಣ ಇಂಥ ವಿದ್ಯಾರ್ಥಿಗಳು ಮಕ್ಕಳು ಪರಿಚಿತರನ್ನು ಪೀಡಿಸುತ್ತಲೂ ಅಪರಿಚಿತರನ್ನು ಅವಹೇಳನ ಮಾಡುತ್ತಲೂ ಹಾಗೂ ಇಬ್ಬರು ಪರಿಚಿತರ ನಡುವೆ ಇಲ್ಲದ ಸಲ್ಲದ ವಿಚಾರಗಳನ್ನು ತೂರಿ ವೃಥಾ ಜಗಳಕ್ಕೆ ಅವಕಾಶ ಮಾಡುತ್ತಲೂ ಕಾಲ ಕಳೆಯುವವರು ಎಂಬುದು ಮನೋವಿಶ್ಲೇಷಕರ ಅನಿಸಿಕೆ. ವ್ಯಕ್ತಿ ಯಾರೇ ಆಗಿರಲಿ ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಅವಕಾಶ ಸ್ವಾತಂತ್ರ್ಯಗಳು ಮಾತ್ರವಲ್ಲ ಅವುಗಳನ್ನು ಒಪ್ಪಿಕೊಳ್ಳುವ, ಮೆಚ್ಚುವಂಥ ಜನರೂ ಅಗತ್ಯ ಎಂಬುದು ಸತ್ಯ.

೫. ಸುಳ್ಳು ಹೇಳುವುದು: ಶಿಕ್ಷೆಯಿಂದ ತಪ್ಪಿಸಿಕೊಳ್ಳಲು, ಶಿಕ್ಷೆಯನ್ನು ಕಡಿಮೆ ಮಾಡಿಕೊಳ್ಳಲು, ತೊಂದರೆಗಳಿಂದ ಪಾರಾಗಲು, ಸಮಸ್ಯೆಗಳ ಜಾಲದಲ್ಲಿ ಸಿಲುಕ

ವಿರಲು, ಕೆಲಸದಿಂದ ಜಾರಿಕೊಳ್ಳಲು ಮಕ್ಕಳು ವಿದ್ಯಾರ್ಥಿಗಳು : ವ್ಯಕ್ತಿಗಳು ಆಯ್ಕೆ ಮಾಡಿಕೊಂಡಿರುವ : ಬಳಸುವ ಇಟ್ಟುಕೊಂಡಿರುವ ಒಂದು ವಿಧಾನ.

ನಿವಾರಣಾ ಕ್ರಮಗಳು

೧. **ಶಿಕ್ಷಕ ಹಾಗೂ ವಿದ್ಯಾರ್ಥಿಗಳ ನಡುವಿನ ಸಂಬಂಧ:** ಇದು ಉತ್ತಮ ಮಟ್ಟದ್ದಾಗಿರಬೇಕು. ಇದು ಶಾಶ್ವತ ಮತ್ತು ಸುದೃಢವಾಗಿದ್ದಲ್ಲಿ ಯಾವ ಕೆಟ್ಟ ಅಂಶಗಳೂ ಇಲ್ಲಿ ಪ್ರಭಾವ ಬೀರುವುದಿಲ್ಲ. ಏಕೆಂದರೆ ಶಿಕ್ಷಕನಾದವನು ಎಲ್ಲ ವಿದ್ಯಾರ್ಥಿಗಳನ್ನೂ ಕೆಲವು ವರ್ಷಗಳ ತನಕ ಸಮಾನ ದೃಷ್ಟಿಯಿಂದ ನೋಡಿಕೊಳ್ಳಬೇಕು. ಆತ ವಿದ್ಯಾರ್ಥಿಗಳ ಹಿತೈಷಿಯಾಗಿ ಅವರವರ ಮನೆಯ ಪರಿಸ್ಥಿತಿಗಳನ್ನೂ ಸಾಧ್ಯವಾದಷ್ಟುಮಟ್ಟಿಗೆ ತಿಳಿದಿರಬೇಕು. ಪೂರ್ವಾಗ್ರಹ ಪೀಡಿತನಾಗದೆ ಪಕ್ಷಪಾತಿಯಾಗದೆ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಪ್ರೋತ್ಸಾಹ ನೀಡಿ ಅವಕಾಶಗಳನ್ನು ಕಲ್ಪಿಸಬೇಕು. ಸಮಸ್ಯೆಗಳಿಗೆ ನೇರವಾಗಿ ಪರಿಹಾರ ನೀಡಲು ಆಗದಿದ್ದರೆ ಕಡೆಯ ಪಕ್ಷ ಸಲಹೆ, ನಿರ್ದೇಶನಗಳನ್ನಾದರೂ ನೀಡಬೇಕು.

೨. **ಸ್ವಾತಂತ್ರ್ಯ ಮತ್ತು ಸ್ವಶಿಸ್ತು :** 'ನನಗೆ ಭದ್ರತೆ ಇಲ್ಲ', 'ನಾನು ಕೆಲಸಕ್ಕೆ ಬಾರದವನು/ಳು' ಎಂಬ ಭಾವನೆಗಳು ವ್ಯಕ್ತಿಯ ಮಾನಸಿಕ ಆರೋಗ್ಯದ ಶತ್ರುಗಳು ಎಂದು ತಜ್ಞರು ಹೇಳಿರುವರು. ಈ ಶತ್ರುಗಳನ್ನು ಓಡಿಸಲು ಶಿಕ್ಷಕ ವಿದ್ಯಾರ್ಥಿಗೆ ಸ್ವಾತಂತ್ರ ಕೊಟ್ಟು ಯುಕ್ತ ಮಾರ್ಗವನ್ನೂ ತೋರಬೇಕು. ಅನಾವಶ್ಯಕವಾದ ನೀತಿನಿಯಮಗಳ ಪಾಲನೆಯು ಮಗುವಿಗೆ ಹೊರೆಯಾಗಿ ಅದರ ಮನಸ್ಸಿನ ಸಮಸ್ಥಿತಿಯನ್ನು ಕೆಡಿಸಬಹುದು. ಹೆಚ್ಚು ಕಟ್ಟುನಿಟ್ಟುಗಳು, ಅಡ್ಡಿ ಆತಂಕಗಳು ಇಲ್ಲದ ಪರಿಸರದಲ್ಲಿ ಕಲಿಯುವ ಮಗು ಧೈರ್ಯ, ತೃಪ್ತಿ, ವಿಶ್ವಾಸ, ಆಸಕ್ತಿಗಳನ್ನು ವೃದ್ಧಿಸಿಕೊಳ್ಳುತ್ತದೆ. ಇದಕ್ಕೆ ತದ್ವಿರುದ್ಧವಾದ ಪರಿಸರದಲ್ಲಿರುವ ಮಗು ಶಿಕ್ಷಕನನ್ನು ಕಂಡರೆ ಶತ್ರುವನ್ನು ಕಂಡಂತೆ ಹೆದರಿ ಓಡಬಹುದು ಇಲ್ಲವೆ ಅಂಜಿಕೆಯಿಂದ ನಡುಗಿ ಮೌನವಾಗಿ ನಿಲ್ಲಬಹುದು, ಇಲ್ಲವೆ ತರಗತಿಗೆ ಬಾರದೇ ಹೊರಗೇ ಉಳಿಯಬಹುದು. ಆದ್ದರಿಂದ ತರಗತಿಗೆ ಬರಲು, ಕುಳಿತುಕೊಳ್ಳಲು, ಪ್ರಶ್ನೆ ಕೇಳಲು ಹಾಗೂ ಕಲಿಯಲು ಮಗುವಿಗೆ ಸ್ವಾತಂತ್ರ್ಯ ದೊರಕಬೇಕು ಮತ್ತು ಸ್ವಶಿಸ್ತನ್ನು ಬೆಳೆಸಿಕೊಳ್ಳಲು ಮಗುವಿಗೆ ಅವಶ್ಯಕವಾದ ವಿಧಿವಿಧಾನಗಳನ್ನು ಶಿಕ್ಷಕರು ತಿಳಿಸಿ ಕೊಡಬೇಕು.

೩. **ಯುಕ್ತ ಪರಿಸರ:** ಮನೆ ಮತ್ತು ಶಾಲೆಗಳಲ್ಲಿ ಯುಕ್ತ ಪರಿಸರಗಳು ಇಲ್ಲದಿದ್ದರೆ ಮಗುವಿನ ಮಾನಸಿಕ ಅಸ್ವಸ್ಥತೆಗೆ ಅವಕಾಶವಾಗುತ್ತದೆ. 'ಮಗುವೊಂದು ಅಪರಾಧಿಯಾಗಿದೆ', 'ಅಪರಾಧ ಮಾಡುತ್ತಿದೆ' ಎಂದರೆ ಇದಕ್ಕೆ ಯಾರು ಕಾರಣ? ಆ ಮಗುವಿನ ಮನೆ ಪರಿಸರ ಅಲ್ಲವೆ? ಇದಕ್ಕೆ ತಂದೆತಾಯಿ ಇಲ್ಲವೆ ಪೋಷಕರು ಹೊಣೆ ಅಲ್ಲವೆ? ಆದ್ದರಿಂದ ಅವಶ್ಯಕತೆಯಿದ್ದಲ್ಲಿ ತಂದೆತಾಯಿಗಳಿಗೆ ಮನೆ ಪರಿಸರವನ್ನು ಸರಿಪಡಿಸಿಕೊಳ್ಳಲು ಶಿಕ್ಷಕರು ತಿಳಿಯಹೇಳುವುದು ಉಚಿತ. ಇದು ಸಾಧ್ಯವಾಗದಿದ್ದರೆ, ಅಂದರೆ ಶಿಕ್ಷಕ ಹೇಳಿದ

ನಂತರವೂ ಮನೆ ಪರಿಸರದಲ್ಲಿ ಬೇಕಾಗಿರುವ ಉದ್ದೇಶಿತ ಬದಲಾವಣೆಗಳು ಆಗದಿದ್ದಾಗ ಮಗುವನ್ನು ಒಂದು ವಿದ್ಯಾರ್ಥಿನಿಲಯಕ್ಕೆ ಸೇರಿಸುವುದು ಉಚಿತ. ಒಂದು ವೇಳೆ ಶಾಲೆಯಲ್ಲಿ ಇಂಥ ಪರಿಸ್ಥಿತಿ ತಲೆದೋರಿದ್ದಲ್ಲಿ ತಂದೆತಾಯಿಗಳು ತಮ್ಮ ಮಗುವನ್ನು ಆ ಶಾಲೆಯಿಂದ ಬೇರೆ ಶಾಲೆಗೆ ಸೇರಿಸುವುದು ಒಳ್ಳೆಯದು.

೪. **ಶಾಲಾಜೀವನ:** ಕಲಿಯುವುದಕ್ಕೆ ಶಾಲೆಯಲ್ಲಿ ವಿವಿಧ ಬೋಧನಾ ವಿಧಾನಗಳನ್ನೂ ಸಾಮಗ್ರಿಗಳನ್ನೂ ಬಳಸುವುದಿದೆಯೇ? ಮಗು ಸ್ವತಂತ್ರವಾಗಿ ಯೋಚಿಸಲು, ಕಲಿಯಲು, ಕೆಲಸ ಮಾಡಲು ಅವಕಾಶಗಳಿವೆಯೇ? ಪಠ್ಯಕ್ರಮ ಹೇಗಿದೆ? ಕಲಿಕೆಯಲ್ಲಿ ಬರುವ ತೊಂದರೆಗಳಿಗೆ ವಿಶೇಷ ಗಮನ ನೀಡಲಾಗುತ್ತಿದೆಯೇ? ಎಂಬುದನ್ನು ಗಮನಿಸುತ್ತ ಸಾಮಾಜಿಕ ಜೀವನಕ್ಕೆ ಬೇಕಾಗಿರುವ ಕೆಲವು ವಿಚಾರಗಳನ್ನಾದರೂ ಮಗು ಕಲಿಯುವುದಕ್ಕೆ ಸಾಧ್ಯವಿದೆಯೇ ಎಂಬುದನ್ನೂ ತಿಳಿದುಕೊಳ್ಳಬೇಕು.

೫. **ಮಾರ್ಗದರ್ಶನ:** ವೈಯಕ್ತಿಕ ಸಹಾಯ ಬೇಕಿಲ್ಲದಿದ್ದಾಗ ಇಲ್ಲವೆ ತನ್ನ ಸಮಸ್ಯೆಯ ಬಗ್ಗೆ ಮಗು ತಿಳಿಸದಿದ್ದಾಗ ಸಮೂಹಕ್ಕೇ ಅನ್ವಯವಾಗುವಂಥ ಪರಿಹಾರವನ್ನು ಸೂಚಿಸಬೇಕು. ಯುಕ್ತ ನಿರ್ದೇಶನ ಹಾಗೂ ಬೆಂಬಲ ಕೊಟ್ಟರೆ ಮಗು ಸ್ವತಃ ಪರಿಹಾರ ಕಂಡುಕೊಳ್ಳಲು ಸಾಧ್ಯ. ಇದು ಎಲ್ಲ ವ್ಯಕ್ತಿಗಳಿಗೂ, ಎಲ್ಲ ವೇಳೆಯಲ್ಲೂ ಉಪಯುಕ್ತ ಎಂಬುದು ಸರ್ವವಿದಿತವಾಗಿದೆ.

ಅಧ್ಯಾಪಕರು ಹಾಗೂ ತಂದೆತಾಯಿಗಳ ಪಾತ್ರ:

ಅ) ಮಕ್ಕಳು ತಮ್ಮ ತಮ್ಮ ಅನಿಸಿಕೆ, ಭಾವನೆ ಹಾಗೂ ಕಲ್ಪನೆಗಳನ್ನು ವ್ಯಕ್ತಪಡಿಸಲು ಅವಕಾಶ ಕೊಡುವುದು.

ಆ) ವ್ಯಕ್ತವಾದ ಅಭಿಪ್ರಾಯ, ಕಲ್ಪನೆ-ಅನಿಸಿಕೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಸಮ್ಮತಿಸಿ ಬಳಿಕ ಅವಶ್ಯವಿದ್ದರೆ ಅವನ್ನು ಸರಿಪಡಿಸುವುದು.

ಇ) ವಿದ್ಯಾರ್ಥಿಗಳು ಆತ್ಮವಿಶ್ವಾಸ, ಧೃತಿ, ನಿಷ್ಠೆ ಮುಂತಾದುವನ್ನು ಬೆಳೆಸಿಕೊಳ್ಳಲು ಉತ್ತೇಜನ ಕೊಡುವುದು.

ಈ) ತೊಂದರೆ ಉಂಟುಮಾಡುವ ಮಕ್ಕಳನ್ನು ಉಪಾಯದಿಂದ ಸರಿಯಾದ ಮಾರ್ಗಕ್ಕೆ ತರಲು ಪ್ರಯತ್ನಿಸುವುದು.

ಉ) ಉತ್ತಮವಾದ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುವುದು.

ಊ) ವರ್ತನಾ ಸಮಸ್ಯೆಗಳನ್ನು ಪತ್ತೆಹಚ್ಚಿ, ತಜ್ಞರ ಸಹಕಾರ, ಸಲಹೆಗಳಿಂದ ನಿದಾನ ಹಾಗೂ ಚಿಕಿತ್ಸಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

ಎ) ಪ್ರತಿಯೊಬ್ಬ ವಿದ್ಯಾರ್ಥಿಗೆ ಸಂಬಂಧಿಸಿದ ಮಾಹಿತಿಯನ್ನು ವರದಿ ಪುಸ್ತಕದಲ್ಲಿ ದಾಖಲಿಸುವುದು.

ಏ) ತಮ್ಮ ಮಗುವಿನ/ವಿದ್ಯಾರ್ಥಿಯ ವರ್ತನೆ ಸಾಮಾನ್ಯ ಮಗುವಿನ ವರ್ತನೆಯಂತೆ ಇಲ್ಲ ಎಂಬುದನ್ನು ಗಮನಿಸಿದ ಕೂಡಲೆ ವಿಶೇಷ ಗಮನ ಕೊಡುವುದು ಹಾಗೂ ಮುಂದಿನ ಕ್ರಮಕ್ಕಾಗಿ ತಜ್ಞರನ್ನು ಭೇಟಿ ಮಾಡುವುದು.

ಉಪಸಂಹಾರ

ವ್ಯಕ್ತಿಯೊಬ್ಬನ (ವಿದ್ಯಾರ್ಥಿ/ಉದ್ಯೋಗಿ) ಕಲಿಕೆಯ ಸಂದರ್ಭದಲ್ಲಾಗಲೀ ಇಲ್ಲವೇ ಉದ್ಯೋಗದ ಸಂದರ್ಭದಲ್ಲಾಗಲೀ ತನ್ನ ಪರಿಸರಕ್ಕೆ ಹೊಂದಿಕೊಂಡು ಕೆಲಸ ನಿರ್ವಹಿಸುವುದು ಅಪೇಕ್ಷಣೀಯ. ಈ ಮೊದಲೇ ವಿಚಾರ ಮಾಡಿದಂತೆ ವಿದ್ಯಾರ್ಥಿ–ಶಿಕ್ಷಕ–ತಂದೆತಾಯಂದಿರು ಇವುಗಳ ನಡುವೆ ಇರುವ ವರ್ತನೆಗಳು ಹಾಗೂ ತತ್ಸಂಬಂಧೀ ಸಮಸ್ಯೆಗಳು, ವ್ಯಕ್ತಿ ಉದ್ಯೋಗಸ್ಥನಾದಲ್ಲಿ, ಸಮಯೋಚಿತ ಪರಿಸರ ಮತ್ತು ಪರಿಹಾರಗಳು ಒದಗದಿದ್ದಾಗ ಬೃಹದಾಕಾರವಾಗಿ ಬೆಳೆದುಬಿಡುವ ಸಾಧ್ಯತೆ ಉಂಟು. ಬೆಳೆಯುವ ಪೈರು ಮೊಳಕೆಯಲ್ಲಿ ಎಂಬ ನಾಣ್ಣುಡಿಯಂತೆ ಕಲಿವ ಮತ್ತು ಬೆಳೆಯುವ ಮಕ್ಕಳಿಗೆ ಯುಕ್ತ ಪರಿಸರವನ್ನು ಕಲ್ಪಿಸಿ ಅದರೊಂದಿಗೆ ಹೊಂದಿಕೊಂಡು ಹೋಗುವ ವರದಿಯನ್ನು ತಂದೆತಾಯಂದಿರು ಮತ್ತು ಶಿಕ್ಷಕರು ರೂಪಿಸಿ, ಅನುಷ್ಠಾನಕ್ಕೆ ತಂದರೆ ಮಕ್ಕಳಲ್ಲಿ ತಲೆದೋರುವ ವಿವಿಧ ವರ್ತನಾ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಬಹುದು.



ಇತರರ ಕಷ್ಟವನ್ನು ನೋಡಿ ನಗುವುದಕ್ಕೆ ಕಣ್ಣು ನನಗಿರದಿರಲಿ. ಇತರರನ್ನು ನಿಂದಿಸುವ ನಾಲಿಗೆಯು ನನಗಿರದಿರಲಿ. ಇತರರ ಬಗ್ಗೆ ಕೆಟ್ಟದ್ದನ್ನು ಕೇಳುವ ಕಿವಿ ನನಗಿರದಿರಲಿ. ಇತರರದ್ದನ್ನು ಅಪಹರಿಸುವ ಕೈಗಳು ನನಗಿರದಿರಲಿ.

—ಏಸುಕ್ರಿಸ್ತ

ಬಟವಾಡೆಯಾಗದ ಪತ್ರ

ಟಿ. ಎಸ್. ಲಲಿತ

ಬಾಗ್ದಾದಿನಿಂದ ಬಾಸ್ರಾಕ್ಕೆ, ಸೇನೆಯ ಹೆಲಿಕಾಪ್ಟರಿನಲ್ಲಿ ಪ್ರಯಾಣ ಮಾಡಲು, ನಮಗೆ ಮೂರು ಘಂಟೆಗಳು ಬೇಕಾಯ್ತು. ಗಲ್ಫಿನ ಕೊಲ್ಲಿಯುದ್ಧ ಉಗ್ರತೆಯ ತುಟ್ಟ ತುದಿಯಲ್ಲಿತ್ತು. ಇರಾನ್-ಇರಾಕ್‌ಗಳ ನಡುವಣ ಭೀಕರ ಯುದ್ಧದ ವರದಿಯೊಪ್ಪಿಸಲು ಹೋದ ಅನೇಕ ಪತ್ರಿಕಾ ವರದಿಗಾರರಲ್ಲಿ ನಾನೂ ಒಬ್ಬನಾಗಿದ್ದೆ. ಶತ್-ಅಲ್-ಅರಬ್ ವಿಮಾನ ನಿಲ್ದಾಣವು ಸೇನಾ ವಿಮಾನಗಳಿಂದ ಕಿಕ್ಕಿರಿದು, ಬೇಸಗೆಯ ಧೂಳಿನಿಂದಾವೃತವಾಗಿತ್ತು.

ನಾವು ಹೆಲಿಕಾಪ್ಟರ್‌ನಿಂದ ಇಳಿಯುತ್ತಿದ್ದಂತೆ, ಇರಾಕಿನ ಹಿರಿಯ ಸೇನಾಧಿಕಾರಿಯೊಬ್ಬ ಇತರ ಮೂವರು ಸೇನಾ ಸಿಬ್ಬಂದಿಗಳೊಂದಿಗೆ ಇಂಗ್ಲಿಷ್‌ನಲ್ಲಿ ನಮ್ಮನ್ನು ಅಭಿವಂದಿಸಿದ. ರಾತ್ರಿ ಉಳಿಯಲು ನಮ್ಮನ್ನು ನೇರವಾಗಿ, ಹೋಟೆಲೊಂದಕ್ಕೆ ಕರೆದೊಯ್ಯಲಾಯ್ತು. ವಿಶಾಲವಾದ ಬಾಸ್ರಾ ಶೆರಟನ್ ಹೋಟೆಲಿನಲ್ಲಿ ಪ್ರವಾಸಿಗಳಾರನ್ನೂ ನಾವು ನೋಡಲಿಲ್ಲ. ಹೆಚ್ಚುವರಿ ಕೊಠಡಿಗಳೆಲ್ಲವೂ ಕೇವಲ ಸೇನಾ ಸಿಬ್ಬಂದಿಗಳಿಂದ ತುಂಬಿತ್ತು.

ಇಡೀ ರಾತ್ರಿ ನನಗೆ ಕಣ್ಣೆವೆ ಕೂಡಿಸುವಷ್ಟು ನಿದ್ರೆಯೂ ಬರಲಿಲ್ಲ. ನಡುನಡುವೆ ಯುದ್ಧದ ಗುಂಡಿನ ಚಕಮಕಿ ಕೇಳುತ್ತಲೇ ಇತ್ತು. ಬೆಳಗಿನ ಜಾವದ ನಾಲ್ಕು ಗಂಟೆಯವರೆಗೂ ಈ ಕ್ರಿಯೆ ಹಾಗೆಯೇ ಮುಂದುವರಿಯಿತು.

ಬೆಳಕು ಮೂಡುವಷ್ಟರಲ್ಲೇ ಮೃದುವಾದ ಧ್ವನಿಯೊಂದು ಫೋನಿನಲ್ಲಿ ತೇಲಿಬಂತು. "ಸರ್, ತಾವು ಇಷ್ಟಪಟ್ಟಲ್ಲಿ, ನಿನ್ನೆ ರಾತ್ರಿ ತೀವ್ರ ಯುದ್ಧ ನಡೆದ ಸ್ಥಳಕ್ಕೆ ತಮ್ಮನ್ನು ಕರೆದುಕೊಂಡು ಹೋಗುತ್ತೇವೆ. 'ಶತ್-ಅಲ್-ಅರಬ್' ನೀರ್ಗಾಲುವೆಯ ಬಾಗಿಲವರೆಗೂ, ಶತ್ರುಗಳು ಬಂದುಬಿಟ್ಟಿದ್ದರು. ನಮ್ಮ ಸೈನಿಕರು, ಅವರಲ್ಲಿ ಕಡೇ ಪಕ್ಷ ೬೦೦ ಜನರನ್ನು ಕೊಂದಿದ್ದಾರೆ. ಬೆಳಗಿನ ವೇಳೆಗೆ ಶತ್ರುಗಳನ್ನೆಲ್ಲ ನಮ್ಮ ನೆಲದಿಂದಾಚೆ ಅಟ್ಟಿದ್ದೆವು. ಆ ಜಾಗವೆಲ್ಲ ಈಗ ನಮ್ಮ ಇರಾಕಿ ಸೇನೆಯ ವಶದಲ್ಲಿದೆ. ಇನ್ನು ನಲವತ್ತು ನಿಮಿಷಗಳೊಳಗಾಗಿ ತಾವು ಸಿದ್ಧವಾಗುವುದಾದರೆ, ತಾವೇ ಸ್ವತಃ ನಮ್ಮ ಸೈನಿಕರ ಪರಾಕ್ರಮವನ್ನು ಪರಾ

ಮೂಲ: ಶ್ರೀ ಎಂ. ವಿ. ಸಿಂಗ್ ಅವರ 'ದಿ ಅನ್‌ಡೆಲಿವರ್ಡ್ ಲೆಟರ್' ಎಂಬ ಇಂಗ್ಲಿಷ್ ಕಥೆ.

ವರ್ಣಿಸಲು, ಯುದ್ಧ ನಡೆದ ಜಾಗಕ್ಕೇ ತಮ್ಮನ್ನು ಕರೆದೊಯ್ಯುತ್ತೇವೆ.

ಬೆಳಗಿನ ೭-೪೫ ಗಂಟೆಗೆ ನಮ್ಮ ದಳ, ಸ್ಥಳ ವೀಕ್ಷಣೆಗಾಗಿ ಹೊರಟಿತು. ವಿಚಿತ್ರ ಶಾಂತಿ ನೆಲಸಿದ ದಾರಿಯು, ಎಷ್ಟೋ ದೂರದ ವರೆಗೂ ಕೇವಲ ಬೂದು ಬಣ್ಣದ ಮಣ್ಣು ಹರಡಿತ್ತು. ಅನಂತರ ನಮ್ಮ ವಾಹನಗಳನ್ನು ನಿಲ್ಲಿಸಿ, ಐನೂರು ಗಜಗಳಷ್ಟು ದೂರದ ದಾರಿಯನ್ನು ಕಾಲ್ನಡಿಗೆಯಿಂದ ಕ್ರಮಿಸಿದೆವು. ಸೂರ್ಯ ತನ್ನ ತೀಕ್ಷ್ಣತೆಯಿಂದ ನಮ್ಮನ್ನಿರಿಯುತ್ತಿದ್ದ. ಬಾಯಾರಿದ್ದ ನಮಗೆ, ನಮ್ಮ ಮಾರ್ಗದರ್ಶಿಯಾಗಿದ್ದ ಅಧಿಕಾರಿ ನೀರು ಕೊಟ್ಟ. ಇನ್ನೂ ದೂರ ಸಾಗಿದಾಗ, ಅಲ್ಲಲ್ಲಿ ಚೆಲ್ಲಾಪಿಲ್ಲಿಯಾಗಿದ್ದ ಕೆಲವು ಹೆಣಗಳು ಕಾಣ ಸಿಕ್ಕವು. ಅದೊಂದು ಹೃದಯವಿದ್ರಾವಕ ದೃಶ್ಯ—ತಂದೆ-ಮಕ್ಕಳುಗಳು-ಅಣ್ಣತಮ್ಮಂದಿರು, ಕೆಲವಂತೂ ಕೇವಲ ೧೮-೧೯ ವಯಸ್ಸಿನ ಹುಡುಗರ ಹೆಣಗಳ.. ಅದೊಂದು ಉಬ್ಬಳಿಕೆ ತರಿಸುವ ದೃಶ್ಯವಾಗಿತ್ತು. ಕೆಲವರಿಗೆ ಗಂಡಸ್ಥಲದ ಮೇಲೆ ಗುಂಡಿನ ಗಾಯವಾಗಿದ್ದರೆ, ಒಬ್ಬ ಸೈನಿಕನ ಕರುಳು ಈಚೆ ಬಂದು, ರಕ್ತದಲ್ಲಿ ನೆನೆದ ದೇಹವನ್ನೆಲ್ಲಾ ಸುತ್ತಿಕೊಂಡಿತ್ತು. ಒಂದು ಹೆಣದ ತೊಡೆಯ ಮೇಲೆ ಕೋವಿ ಇದ್ದು, ಕೈಬೆರಳುಗಳ ಮಧ್ಯೆ ಜಪಮಾಲೆ ತೂಗಿತ್ತು.

ಶತ್ರು ಸೈನಿಕರು ರಾತ್ರಿ ಇರಾಕ್ ಪ್ರದೇಶದೊಳಗೆ ಹೇಗೆ ನುಸುಳಿ ಬರಲು ಪ್ರಾರಂಭಿಸಿದ್ದರೆಂದು ಸೇನಾಧಿಕಾರಿ ವಿವರಿಸುತ್ತಿದ್ದ. ಆತ ಮಾತನಾಡುತ್ತಿದ್ದಂತೆಯೇ, ಒಬ್ಬ ವರದಿಗಾರ ಸತ್ತ ಸೈನಿಕನೊಬ್ಬನ ಜೇಬಿನಿಂದ ಹೊರಗಿಣುಕುತ್ತಿದ್ದ ಕೆಲವು ಕಾಗದಗಳನ್ನು ಬೆರಳು ಮಾಡಿ ತೋರಿಸಿದ, ಪರ್ಷಿಯನ್ ಭಾಷೆಯಲ್ಲಿ ಬರೆದ, ನಾಲ್ಕು ಪುಟಗಳ ಆ ದೊಡ್ಡ ಕಾಗದವನ್ನು ಇರಾಕಿ ಅಧಿಕಾರಿ ಹೊರಗೆಳೆದ. ಅದನ್ನು ಓದಲು ಪ್ರಯತ್ನಿಸಿದನಾದರೂ ಪರ್ಷಿಯನ್ ಬಾರದ ಪ್ರಯುಕ್ತ, ಓದುವ ತನ್ನ ಯತ್ನವನ್ನವನು ಅಲ್ಲಿಯೇ ನಿಲ್ಲಿಸಬೇಕಾಯ್ತು. ಹತ್ತಿರದ ಸೆರೆಯಾಳುಗಳ ಕ್ಯಾಂಪಿನಲ್ಲಿರುವ ಇರಾನಿಯನ್ ಯುದ್ಧಖೈದಿಯೊಬ್ಬನಿಂದ ಆ ಪತ್ರವನ್ನು ಭಾಷಾಂತರಿಸಿ ತಿಳಿಸುವುದಾಗಿ ನಮಗೆ ಆ ಅಧಿಕಾರಿ ಭರವಸೆ ಕೊಟ್ಟ.

ಬಾಸ್ರಾದ ಯುದ್ಧ ಖೈದಿಗಳ ತಾತ್ಕಾಲಿಕ ಕ್ಯಾಂಪಿಗೆ ನಾವು ಹೋದೆವು. ಓದು. ಬರಹ ಬಲ್ಲ ಅಲ್ಲಿಯ ಇರಾನಿ ಯುದ್ಧ ಖೈದಿಯೊಬ್ಬನನ್ನು ಆರಿಸಿ, ಅವನಿಂದ ಇರಾಕಿ ಅಧಿಕಾರಿ ಆ ಕಾಗದದ ಭಾಷಾಂತರ ಮಾಡಿಸಿದ. ಭಾಷಾಂತರಗೊಂಡ ಪತ್ರದ ಸಾರಾಂಶ ಇದು :

"ನನ್ನ ಮುದ್ದಿನ ಮಗಳೆ,

ದಯಾಮಯನಾದ ಆ ಅಲ್ಲಾ ನಮ್ಮೊಂದಿಗಿರಲಿ. ನನ್ನ ಕಮಾಂಡರ್ ನನಗೆ ಹತ್ತು ದಿನಗಳ ರಜೆ ಮಂಜೂರು ಮಾಡಿದ್ದಾರೆ! ಸೋಮವಾರ ಸಂಜೆ ಏಳು ಗಂಟೆಗೆ ನಾನು ಅಬಾದಾನ್‌ನಲ್ಲಿರುವೆ. ನನಗಾಗಿ ನೀನೆಷ್ಟು ಕಾತುರದಿಂದ ಕಾಯುತ್ತಿರುವೆ ಎಂದು ನನಗೆ ಗೊತ್ತು. ನಿನ್ನ ತಾಯಿಯ ಸಾವಿನ ಅನಂತರ ನೀನೆಷ್ಟು ಒಂಟಿತನ ಅನುಭವಿಸುತ್ತಿರುವೆ ಎಂದು ನಾನು ಊಹಿಸಬಲ್ಲೆ. ನಾನು ನಿನಗಾಗಿ ಬಟ್ಟೆಗಳನ್ನೂ ಹಾಗೂ ನಿನಗೆ

ಬೇಕಾಗಿದ್ದ ಗಡಿಯಾರವನ್ನೂ ಖರೀದಿಸಿದ್ದೇನೆ. ಇತ್ತೀಚೆಗಷ್ಟೆ ನಿನ್ನ ಅಮ್ಮನ ಸಾವಿನ ಸುದ್ದಿ ನನಗೆ ತಿಳಿಯಿತು. ಇಬ್ರಾಹಿಂ ನನಗೆ ಬರೆದಿದ್ದ. ಕಳೆದ ವರ್ಷ ನಿನ್ನ ಹಿರಿಯಣ್ಣ ಸತ್ತ ಸ್ಥಳದಲ್ಲೇ ಇಬ್ರಾಹಿಮನೂ ಕೊಲ್ಲಲ್ಪಟ್ಟನೆಂದು ಕಳೆದ ವಾರವಷ್ಟೇ ನನಗೆ ತಿಳಿದುಬಂತು.

ಮಗೂ, ಸೋಮವಾರ ಸಂಜೆ ಏಳು ಗಂಟೆಗೆ ನೀನು ಮನೆಯಲ್ಲೇ ಇರು. ನಾನು ಖಂಡಿತ ಆ ವೇಳೆಗೆ ಅಲ್ಲಿಗೆ ಬರುವೆ."

ನಿನ್ನ ಪ್ರೀತಿಯ ತಂದೆ
'ಅಬ್ಬಾಸ್'

ಪತ್ರವನ್ನೋದಿದ ಇರಾನಿಯನ್ ಸೆರೆಯಾಳು, ದುಃಖ ತಡೆಯಲಾರದೆ ಕುಸಿದು ಕುಳಿತ. ಇರಾಕಿನ ಸೇನಾಧಿಕಾರಿಯ ಕಣ್ಣಂಚುಗಳು ಕೂಡ ತೇವಗೊಂಡಿದ್ದವು.



ಇತರರು ನಿನ್ನನ್ನು ಹೇಗೆ ನಡೆಸಿಕೊಳ್ಳಬೇಕೆಂದು ನೀನು ಬಯಸುತ್ತೀಯೋ ಹಾಗೆಯೇ ಇತರರನ್ನು ನೀನು ನಡೆಸಿಕೋ.

ದಾನವನ್ನು ಮತ್ತು ಪ್ರಾರ್ಥನೆಯನ್ನು ಗುಟ್ಟಾಗಿ ಮಾಡಬೇಕು.

ಯಾರು ಶುದ್ಧ ಹೃದಯರೋ ಅವರು ಧನ್ಯರು. ಏಕೆಂದರೆ ಅವರು ದೇವರನ್ನು ಕಾಣುತ್ತಾರೆ.

—ಏಸುಕ್ರಿಸ್ತ

ಹುಚ್ಚುನಾಯಿ ರೋಗ: ರೇಬೀಸ್

ಡಾ|| ಬಿ. ಡಿ. ಸತ್ಯನಾರಾಯಣ

"ತೊಟ್ಟಿಲುಗಳೆಷ್ಟೊ ಮಸಣಗಳಷ್ಟು ಧರೆಯೊಳಗೆ ತೊಟ್ಟಿಲಿಗೆ ಹಬ್ಬಿ ಮಸಣವು ತೇಗುತಿರಲು ಹುಟ್ಟಿದವರೆಲ್ಲ ಸಾಯದೆ ನಿಲ್ಲೆ ಹೊಸಬಾಗಿ ಹುಟ್ಟುವರ್ಗೆಡೆಯೆಲ್ಲಿ? ಮಂಕುತಿಮ್ಮ." ಬಡದೇಶಗಳಲ್ಲಿ (ಭಾರತ ಈ ಗುಂಪಿನಲ್ಲಿಯೇ ಇದೆ) ಇನ್ನೂ ಒಂದು ಮಸಣ ಕರೆ ಉಂಟು; ಹುಚ್ಚುನಾಯಿ ರೋಗ. ಮನುಷ್ಯ-ನಾಯಿ ಸಂಬಂಧ ಪ್ರಾಚೀನತಮವಾದದ್ದು: ಮಾನವನ ಮೊದಲ ಬೇಟೆ ಸಂಗಾತಿ ನಾಯಿ. ಗಗನದಲ್ಲಿಯ ಮಹಾವ್ಯಾಧ ಮತ್ತು ಮಹಾಶ್ವಾನ ನಕ್ಷತ್ರ ಪುಂಜಗಳನ್ನು ನೋಡಿದರೆ ಇದು ತಿಳಿಯುತ್ತದೆ. ಸೃಷ್ಟಿಕರ್ತ ಬ್ರಹ್ಮನ ನಾಲ್ಕು ದೂತರು ಯಾರು? ಶ್ವಾನಗಳೇ. ಧರ್ಮರಾಯನ ಜೊತೆ ಸ್ವರ್ಗಕ್ಕೆ ಜೀವಂತ ಹೋದ ಏಕೈಕಜೀವಿ ಯಾವುದು? ಸಾಕ್ಷಾತ್ ಶುನಕವೇ. ಅದರೆ ಇದೇ ನಾಯಿಗೆ ಹುಚ್ಚು ಬಂದು ಮನುಷ್ಯನನ್ನು ಕಚ್ಚಿದರೆ ಅದು ಕಾಲರಾಯನ ತುತ್ತು ಅಗುವುದೊಂದು ವಿಪರ್ಯಾಸ. ಇದನ್ನು ನಿವಾರಿಸಲು ನಾವು ಏನು ಮಾಡಬಹುದು? ತಜ್ಞ ಅನುಭವ ವಾಣಿ ಇಲ್ಲಿದೆ.

ಸಾಂಕ್ರಾಮಿಕ ರೋಗಗಳ ಪೈಕಿ ಭೀಕರ ಸಾವಿನಿಂದ ಪಾರಾಗಲಸಾಧ್ಯವಾದ ರೋಗ ಇದು. ರೇಬೀಸ್ ಒಂದು ಜಾತಿಯ ವೈರಸ್ ರೋಗಾಣುವಿನಿಂದ ಬರುವ ಅಂಟುಜಾಡ್ಯ. ಪ್ರಪಂಚಾದ್ಯಂತ ಹಬ್ಬಿದ್ದರೇ ಬಡ ದೇಶಗಳಲ್ಲಿ ಬಲು ಜಾಸ್ತಿ. ಭಾರತದಲ್ಲಿ ಪ್ರತಿ ವರ್ಷ ಸುಮಾರು ಏಳು ಲಕ್ಷ ಜನರು ನಾಯಿಗಳಿಂದ ಕಚ್ಚಿಸಿಕೊಂಡರೆ ಸುಮಾರು ಐವತ್ತು ಸಾವಿರ ಜನರು ರೇಬೀಸ್ ಕಾಯಿಲೆಯಿಂದ ಅಸುನೀಗುತ್ತಿದ್ದಾರೆ.

ಮನುಷ್ಯರು, ನಾಯಿ, ಬೆಕ್ಕು, ಕುದುರೆ, ಹಂದಿ ಮತ್ತು ಜಾನುವಾರುಗಳಲ್ಲಿ ಈ ರೋಗ ಕಾಣಿಸಿಕೊಂಡರೆ ಕಾಡಿನಲ್ಲಿನ ನರಿ, ತೋಳ, ಕಪಿ ಮತ್ತು ಒಂಟೆ ಮುಂತಾದ ಪ್ರಾಣಿಗಳಲ್ಲಿ ಕಾಣಿಸಿಕೊಂಡು ಅನೇಕಸಲ ಕಾಡಿನ ಪ್ರಾಣಿಗಳ ಕಡಿತದಿಂದ ಊರಿನ ಪ್ರಾಣಿಗಳಿಗೂ ರೋಗ ಅಂಟುತ್ತದೆ. ರೇಬೀಸ್ ಕಾಯಿಲೆ ತಗುಲಿರುವ ವ್ಯಕ್ತಿ ಅಥವಾ ಪ್ರಾಣಿಗಳ ಕಡಿತದಿಂದ ಮನುಷ್ಯರಿಗೆ ರೋಗ ತಗುಲಬಹುದಾದರೂ ಕಾಯಿಲೆಯಿಂದ ನರಳುತ್ತಿರುವ ಊರಿನ ನಾಯಿಗಳ ಕಡಿತದಿಂದಲೆ ಮನುಷ್ಯರಿಗೆ ಈ ರೋಗ ಸಾಮಾನ್ಯವಾಗಿ ಅಂಟುತ್ತದೆ.

ಕಾಯಿಲೆಯಿಂದ ನರಳುತ್ತಿರುವ ಮನುಷ್ಯರು, ನಾಯಿ ಮತ್ತು ಇತರ ಪ್ರಾಣಿಗಳ ಮೆದುಳು, ನರ, ಜೊಲ್ಲು, ಮೂತ್ರ, ಎದೆ ಹಾಲು, ಕಣ್ಣೀರು ಮತ್ತು ಲಿಂಫ್ ರಸದಲ್ಲಿ ಕಾಣಿಸಿಕೊಳ್ಳುವ ವೈರಸ್ ರೋಗಾಣುಗಳು, ಮೆದುಳು, ಜೊಲ್ಲಿನ ಗ್ರಂಥಿಗಳು ಮತ್ತು ಜೊಲ್ಲಿನಲ್ಲಿ ಯಥೇಚ್ಛವಾಗಿ ವೃದ್ಧಿಸುತ್ತಿರುತ್ತವೆ. ಇವು ಬಿಸಿಲು, ಶಾಖ, ಅತಿನೇರಳೆ ಕಿರಣಗಳು ಮತ್ತು ಫೀನಾಲ್ ಮುಂತಾದ ಕ್ರಿಮಿನಾಶಕಗಳಿಂದ ಸುಲಭವಾಗಿ ನಾಶವಾಗುತ್ತವೆ.

ರೇಬೀಸ್‌ನಿಂದ ರೋಗಬರಲು ನಾಯಿ ಅಥವಾ ಇತರೆ ಪ್ರಾಣಿಗಳ ಕಡಿತವೇ ಕಾರಣವಾಗಬೇಕಾಗಿಲ್ಲ, ವ್ಯಕ್ತಿಯ ಚರ್ಮ ಯಾವುದೇ ಕಾರಣದಿಂದ ಜಖಂಗೊಂಡಿದ್ದಾಗ ವ್ಯಾಧಿಗ್ರಸ್ತವ್ಯಕ್ತಿಯ ಅಥವಾ ಪ್ರಾಣಿಯ ಜೊಲ್ಲು ಅಲ್ಲಿಗೆ ಸೋಕಿದರೂ ರೋಗಾಣುಗಳು ಸುಲಭವಾಗಿ ಒಳನುಗ್ಗಿ ರೋಗವನ್ನು ತರುತ್ತವೆ.

ರೋಗಾಣುಗಳು ದೇಹ ಹೊಕ್ಕು ನಾಲ್ಕು ದಿನಗಳಿಂದ ಒಂದು ವರ್ಷದೊಳಗೆ ಸಾಮಾನ್ಯವಾಗಿ ೪ ರಿಂದ ೮ ವಾರದೊಳಗೆ ಕಾಯಿಲೆಯ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಕಡಿತ ಭೀಕರವಿದ್ದಾಗ, ಕಚ್ಚಿದ ಸ್ಥಳ ಮೆದುಳಿಗೆ ಹತ್ತಿರವಿದ್ದಾಗ, ಕೈ ಮತ್ತು ಕಾಲಿನ ಬೆರಳುಗಳು ಕಡಿತಕ್ಕೆ ಒಳಪಟ್ಟಾಗ, ಮೈ ಮೇಲೆ ಬಟ್ಟೆ ಇಲ್ಲದೆ ಬರಿ ಚರ್ಮದ ಮೇಲೆ ಕಚ್ಚಿದಾಗ, ಕಚ್ಚಿದ ನಾಯಿ ಅಥವಾ ರೋಗಿಯ ಸೋಂಕು ತೀಕ್ಷ್ಣತೆಯಿಂದ ಕೂಡಿದ್ದಾಗ ಕಾಯಿಲೆಯ ಲಕ್ಷಣಗಳು ಬೇಗನೆ ಕಾಣಿಸಿಕೊಳ್ಳುತ್ತವೆ.

ಹುಚ್ಚು ನಾಯಿ ಕಚ್ಚಿದ ಸ್ಥಳದಲ್ಲಿರುವ ನರತಂತುಗಳಲ್ಲಿ ರೋಗಾಣುಗಳು ವೃದ್ಧಿಸುತ್ತಾ ಸ್ಪೈನಲ್ (ಬೆನ್ನುರಿನರ) ನರಗಳ ಮುಖಾಂತರ ಮೆದುಳನ್ನು ತಲುಪಿ, ಮೆದುಳಿನಲ್ಲಿರುವ ಜ್ಞಾನ (ಸೆನ್ಸರಿ), ಕ್ರಿಯಾ (ಮೋಟಾರ್), ಸ್ವಾಯತ್ತ (ಆಟೋನಾಮಿಕ್) ಮತ್ತು ಮಾನಸಿಕ (ಮೆಂಟಲ್) ಮೆದುಳಿನ ಕೇಂದ್ರಗಳನ್ನು ಅನುಕ್ರಮವಾಗಿ ಕೆರಳಿಸಿ, ಅನಂತರ ನಾಶ ಮಾಡುವುದರಿಂದ ಉಂಟಾಗುವ ಲಕ್ಷಣಗಳನ್ನು ರೇಬೀಸ್ ರೋಗಿಗಳಲ್ಲಿ ಅಥವಾ ರೋಗದಿಂದ ನರಳುತ್ತಿರುವ ನಾಯಿ ಮತ್ತು ಪ್ರಾಣಿಗಳಲ್ಲಿ ನಾವು ಸಾಮಾನ್ಯವಾಗಿ ನೋಡುತ್ತೇವೆ.

ರೋಗದ ಲಕ್ಷಣಗಳು

ಮನುಷ್ಯರಲ್ಲಿ, ಮೊದಲಿಗೆ ಎರಡರಿಂದ ಹತ್ತು ದಿನಗಳ ತನಕ ತಲೆನೋವು, ಗಂಟಲು ನೋವು, ಜ್ವರ, ಸುಸ್ತು, ಕೆಲವೊಮ್ಮೆ ಕಚ್ಚಿದ ಸ್ಥಳದಲ್ಲಿ ನೋವು, ಸೆಳೆತ ಅಥವಾ ಜೋಮು ಕಾಣಿಸಿಕೊಳ್ಳಬಹುದು. ನಂತರ ರೋಗಿಗಳು ನೀರು, ಶಬ್ದ, ಬಿಸಿಲು, ಸೂರ್ಯನ ಕಿರಣ ಮತ್ತು ಚಳಿಯ ಪ್ರೇರಣೆಗಳಿಗೆ ಗಾಢವಾಗಿ ಪ್ರತಿಕ್ರಿಯಿಸಿ ಗಂಟಲು, ಅನ್ನನಾಳ ಮುಂತಾದವು ಸಂಕುಚಿತಗೊಳ್ಳುತ್ತವೆ. ಇದರಿಂದ ಉಸಿರು ಕಟ್ಟಿದಂತಾಗಿ ಹೆದರುವುದು (ಸೆನ್ಸರಿ), ಮಾಂಸಖಂಡಗಳು ಗಡುಸಾಗಿ ಬಿಗಿದುಕೊಂಡಿರುವುದು, ಪೆಟ್ಟು ಅಥವಾ ಹೊಡೆತಕ್ಕೆ ಅತಿಯಾಗಿ ಪ್ರತಿಕ್ರಿಯಿಸುವುದು (ಮೋಟಾರ್) ಜೊಲ್ಲು, ಬೆವರು ಮತ್ತು ಕಣ್ಣೀರು ಜಾಸ್ತಿ ಉತ್ಪತ್ತಿಯಾಗಿ ಸೋರುವುದು (ಅಟೋನಾಮಿಕ್), ಕೋಪ, ಚಡಪಡಿಸುವಿಕೆ, ಮಂಕಾಗಿರುವುದು ಹಾಗೂ

ಮೃತ್ಯುವಿನಭಯ (ಮೆಂಟಲ್) ಮುಂತಾದ ಲಕ್ಷಣಗಳು ಅನುಕ್ರಮವಾಗಿ ಕಾಣಿಸಿಕೊಳ್ಳುತ್ತವೆ. ರೋಗದ ಲಕ್ಷಣಗಳೆಲ್ಲಾ ದಿನದಿನಕ್ಕೆ ತೀವ್ರವಾಗುತ್ತ ರೋಗಿಗೆ ನೀರು ಕುಡಿಸಲಸಾಧ್ಯವಾಗುವುದು (ಹೈಡ್ರೊಫೋಬಿಯ), ಕೊನೆಗೆ ನೀರನ್ನು ನೋಡಿದರೆ ಅಥವಾ ನೀರಿನ ಶಬ್ದ ಕೇಳಿದ ಮಾತ್ರದಿಂದಲೆ ನುಂಗಲು ಅಥವಾ ಉಸಿರಾಡಲು ತೊಂದರೆ ಆಗುವುದರಿಂದ ರೋಗಿಗಳು ನೀರಿನ ಬಗ್ಗೆಯೆ ಭಯಭೀತರಾಗುತ್ತಾರೆ. ಒಂದು ವಾರದೊಳಗೆ ಹೆಚ್ಚಾಗಿ ಎರಡು ಮೂರು ದಿನಗಳಲ್ಲಿಯೆ ರೋಗಿ ಕೊನೆಯುಸಿರೆಳೆಯುತ್ತಾನೆ. ಸಾಮಾನ್ಯವಾಗಿ ಒದರುವಿಕೆ (ಕನ್ವಲ್ಷನ್) ಅಥವಾ ಉಸಿರಾಟದ ಲಕ್ವ (ರೆಸ್ಪಿರೇಟರಿಪೆರಾಲಿಸಿಸ್)ದಿಂದಲೆ ಸಾವನ್ನು ಅಪ್ಪುವುದು ಹೆಚ್ಚು.

ನಾಯಿಗಳಲ್ಲಿ ರೇಬೀಸ್ ಕಾಯಿಲೆ

ನಾಯಿಗಳಲ್ಲಿ ಸಾಮಾನ್ಯವಾಗಿ ಎರಡು ರೀತಿಯಾಗಿ ರೇಬೀಸ್ ಕಾಯಿಲೆಯ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಹೆಚ್ಚಿನ ನಾಯಿಗಳು ರೇಬೀಸ್ ಕಾಯಿಲೆ ತಗುಲಿದಾಗ ಸುಲಭವಾಗಿ ಕೆರಳುವುದು, ಪ್ರಚೋದನೆ ಇಲ್ಲದೆ ಬೊಗಳುವುದು, ಕಚ್ಚುವುದು, ಸಿಕ್ಕಿದ್ದನ್ನು ಹಲ್ಲಿನಿಂದ ಕಡಿಯುವುದು, ಮನೆ ಬಿಟ್ಟು ಬೊಗಳಿ ಸಿಕ್ಕಿದವರಿಗೆ ಕಚ್ಚುತ್ತಾ ಓಡಾಡುವುದು, ಜೊಲ್ಲು ಸುರಿಯುತ್ತಿರುವುದು, ಧ್ವನಿ ಬದಲಾಗುವುದು, ಉಸಿರಾಡಲು ತೊಂದರೆಯಾಗಿ ಕ್ರಮೇಣ ಧ್ವನಿಪೆಟ್ಟಿಗೆ ಲಕ್ವದಿಂದ, ಬೊಗಳಲಸಾಧ್ಯವಾಗಿ ಹತ್ತು ದಿನದೊಳಗೆ ಉಸಿರಾಟದ ಲಕ್ವದಿಂದ ಪ್ರಾಣ ಬಿಡುತ್ತದೆ.

ಕೆಲವು ರೇಬೀಸ್ ನಾಯಿಗಳು ಇದಕ್ಕೆ ವಿರುದ್ಧವಾಗಿ ಯಾವುದೇ ಹುಚ್ಚಾಟವಿಲ್ಲದೆ ಊಟ, ನೀರು ಬಿಟ್ಟು ಸುಸ್ತಾಗಿ ನಿದ್ರಿಸುತ್ತಾ ೩–೪ ದಿನಗಳಲ್ಲಿ ಕೊನೆಯುಸಿರೆಳೆಯುತ್ತವೆ. ನೀರಿನ ಭಯ ನಾಯಿ ಮತ್ತು ಇತರ ಪ್ರಾಣಿಗಳಲ್ಲಿ ಕಾಣಿಸಿಕೊಳ್ಳುವುದಿಲ್ಲ.

ಒಮ್ಮೆ ರೇಬೀಸ್ ಕಾಯಿಲೆ ತಗಲಿ ರೋಗದ ಲಕ್ಷಣಗಳು ಕಾಣಿಸಿಕೊಂಡ ನಂತರ ಯಾವ ಔಷಧಿಯೂ ಪ್ರಯೋಜನಕ್ಕೆ ಬಾರದೆ ರೋಗಿ ಸಾಯುವುದು ಖಚಿತವಾದುದರಿಂದ ಕಾಯಿಲೆ ಬರದಂತೆ ನೋಡಿಕೊಳ್ಳುವುದೊಂದೆ ಸಧ್ಯಕ್ಕೆ ಉಳಿದಿರುವ ದಾರಿ.

ರೇಬೀಸ್ ನಿಯಂತ್ರಣ

ಕಾಡು ಪ್ರಾಣಿಗಳು ಮತ್ತು ಊರು ಪ್ರಾಣಿಗಳ ನಡುವೆ ಸಂಪರ್ಕವಿಲ್ಲದಂತೆ ನೋಡಿಕೊಳ್ಳಬೇಕು. ವಾರಸುದಾರರಿಲ್ಲದ ಬೀದಿ ನಾಯಿಗಳನ್ನು ಕೊಂದು ರಸ್ತೆಗಳಲ್ಲಿ ನಾಯಿಗಳಿಲ್ಲದಂತೆ ನಿಯಂತ್ರಿಸಬೇಕು. ನಾಯಿ ಅಥವಾ ಇತರೆ ಪ್ರಾಣಿಗಳಿಗೆ ರೋಗ ತಗಲಿದ್ದು ಖಚಿತಪಟ್ಟ ತಕ್ಷಣವೆ ಅವುಗಳನ್ನು ಕೊಂದು ಹೂಳಬೇಕು ಅಥವಾ ಸುಡಬೇಕು ರೋಗ ತಗಲಿದ ವ್ಯಕ್ತಿಗಳನ್ನು ಇತರರಿಂದ ಬೇರ್ಪಡಿಸಿ ಚಿಕಿತ್ಸೆಕೊಡಬೇಕು. ರೋಗದಿಂದ ನರಳುತ್ತಿರುವ ಮನುಷ್ಯರು ಅಥವಾ ಪ್ರಾಣಿಗಳ ಶುಶ್ರೂಷೆಯಲ್ಲಿ ನಿರತರಾಗಿರುವ ವೈದ್ಯರು ಅಥವಾ ಇತರ ವ್ಯಕ್ತಿಗಳ ದೇಹದ ಚರ್ಮ ಯಾವುದೇ ಕಾರಣದಿಂದ ಜಖಂಗೊಂಡಿದ್ದರೆ ಆ ಭಾಗಕ್ಕೆ ಕಾಯಿಲೆಯ ವ್ಯಕ್ತಿಗಳ ಅಥವಾ ಪ್ರಾಣಿಗಳ ಜೊಲ್ಲು ತಗಲದಂತೆ ಎಚ್ಚರಿಕೆ ವಹಿಸಬೇಕು.

ಕಾಯಿಲೆಯ ವ್ಯಕ್ತಿ, ಪ್ರಾಣಿ ಅಥವಾ ನಾಯಿ ಇತರರಿಗೆ ಕಚ್ಚಿದ ತಕ್ಷಣವೆ ಕಚ್ಚಿದ ಭಾಗವನ್ನು ಪ್ರಥಮ ಚಿಕಿತ್ಸೆಯಿಂದ ಉಪಚರಿಸಬೇಕು: ತಕ್ಷಣವೆ ಸಾಬೂನಿನಿಂದ ಬ್ರಷ್ ಅಥವಾ ಜುಂಗು ಉಪಯೋಗಿಸಿ ಚೆನ್ನಾಗಿ ನೀರಿನಿಂದ ಕಚ್ಚಿದ ಸ್ಥಳವನ್ನು ತೊಳೆಯಬೇಕು. ತಕ್ಷಣ ಸಾಬೂನು ಸಿಗದಿದ್ದರೆ ನೀರಿನಿಂದಲೆ ಚಿಲುಮೆಯೋಪಾದಿಯಲ್ಲಿ ಕಚ್ಚಿದ ಸ್ಥಳದ ಮೇಲೆ ಮೇಲಿನಿಂದ ಸುರಿದು ತೊಳೆಯಬೇಕು. ಆನಂತರ ಸಾಬೂನು ಉಪಯೋಗಿಸಿ ತೊಳೆದು ಕ್ರಿಮಿನಾಶಕಗಳಾದ ಟಿಂಕ್ಚರ್ ಬೆನ್‌ಜಾಯಿನ್, ಪೋವಿಡಿನ್ ಅಯೋಡಿನ್ ಅಥವಾ ಸ್ಪಿರಿಟ್ ಮುಂತಾದ ಕ್ರಿಮಿನಾಶಕಗಳನ್ನು ಸವರಬೇಕು.

ಟಿಟನಸ್ ಕಾಯಿಲೆ ಬರದಂತೆ ಮುನ್ನೆಚ್ಚರಿಕೆಯಾಗಿ ಟಿಟನಸ್ ಟಾಕ್ಸಾಯ್ಡ್ ಇಂಜೆಕ್ಷನ್ ತೆಗೆದುಕೊಳ್ಳಬೇಕು.

ಒಮ್ಮೆ ರೇಬೀಸ್ ಕಾಯಿಲೆ ತಗಲಿ ಕಾಯಿಲೆಯ ಲಕ್ಷಣಗಳು ಕಾಣಿಸಿಕೊಂಡ ಹತ್ತು ದಿನದೊಳಗೆ ರೋಗಿ ಅಥವಾ ನಾಯಿ ಸಾಯುವುದು ಖಂಡಿತ. ಆದರೂ ಅಪರೂಪವಾಗಿ ರೇಬೀಸ್ ನಾಯಿಯಿಂದ ಕಚ್ಚಿಸಿಕೊಂಡ ನಾಲ್ಕು ದಿನಗಳಲ್ಲೆ ರೋಗದ ಲಕ್ಷಣಗಳು ಕಾಣಿಸಿಕೊಳ್ಳಬಹುದಾದುದರಿಂದ ಮತ್ತು ಕೆಲವು ನಾಯಿಗಳಲ್ಲಿ ರೇಬೀಸ್ ರೋಗ ತಗಲಿದ್ದರೂ ಕಾಯಿಲೆಯ ಯಾವ ಲಕ್ಷಣಗಳು ಕಾಣಿಸಿಕೊಳ್ಳದೆ ಜಾಸ್ತಿ ದಿನ ನಾಯಿ ಬದುಕಬಹುದು ಎಂದು ಇತ್ತೀಚೆಗೆ ತಜ್ಞ ವೈದ್ಯರು ಶಂಕಿಸಿರುವುದರಿಂದ ಕಚ್ಚಿದ ತಕ್ಷಣವೆ ಮುನ್ನೆಚ್ಚರಿಕೆಯಾಗಿ ಆಂಟಿರೇಬೀಸ್ ವ್ಯಾಕ್ಸಿನೇಷನ್ ಹಾಕಿಸಿಕೊಳ್ಳುವುದು ಉತ್ತಮ.

ಮನೆಯಲ್ಲಿ ಸಾಕಿದ ನಾಯಿ ಅಥವಾ ಪ್ರಾಣಿಗಳು ಮೊದಲಿನಿಂದಲೂ ಬೇರೆ ನಾಯಿ ಅಥವಾ ಪ್ರಾಣಿಗಳ ಸಂಪರ್ಕ ಪಡೆಯದಿದ್ದರೆ ಅಥವಾ ಮುನ್ನೆಚ್ಚರಿಕೆಯಾಗಿ ಮೊದಲೆ ಆಂಟಿರೇಬೀಸ್ ವ್ಯಾಕ್ಸೀನ್ ಕೊಡಿಸಿದ್ದರೆ ಅಂತಹ ಪ್ರಾಣಿಗಳು ಕಚ್ಚಿದಾಗ ಕಚ್ಚಿದ ಸ್ಥಳವನ್ನು ಪ್ರಥಮ ಚಿಕಿತ್ಸೆಯಿಂದ ಉಪಚರಿಸಿ ೧೦ರಿಂದ ೧೫ ದಿನಗಳವರೆಗೆ ಪ್ರಾಣಿಗಳ ಮೇಲೆ ನಿಗಾ ಇಟ್ಟು ನಾಯಿ ಅಥವಾ ಪ್ರಾಣಿ ಸಾಯದಿದ್ದರೆ ಕಾಯಿಲೆ ಇಲ್ಲ ಎಂದು ತಿಳಿಯಬೇಕು; ಸತ್ತರೆ ಪೂರ್ಣ ಪ್ರಮಾಣದಲ್ಲಿ ವ್ಯಾಕ್ಸಿನೇಷನ್ ತೆಗೆದುಕೊಳ್ಳಬೇಕು.

ಒಂದು ಪಕ್ಷ ಕಚ್ಚಿದ ನಾಯಿ ಅಥವಾ ಪ್ರಾಣಿಗೆ ನಿಜವಾಗಿಯೂ ರೇಬೀಸ್ ರೋಗ ತಗಲಿದ್ದರೆ ಕಾಯಿಲೆಯ ಭೀಕರತೆಯನ್ನು ಮುಂದಾಲೋಚಿಸಿ ಸೋಂಕಿನ ಪ್ರಮಾಣವನ್ನು ತೀವ್ರ, ಮಧ್ಯಮ ಮತ್ತು ಅಲ್ಪ ಎಂದು ತೀರ್ಮಾನಿಸಿ ಅದಕ್ಕೆ ತಕ್ಕಂತೆ ಆಂಟಿರೇಬೀಸ್ ವ್ಯಾಕ್ಸಿನೇಷನ್ ಕೊಡುವ ಪ್ರಮಾಣವನ್ನು ನಿರ್ಧರಿಸಬೇಕು. ತಲೆ, ಮುಖ, ಕುತ್ತಿಗೆ ಕೈ ಕಾಲಿನ ಬೆರಳುಗಳಲ್ಲಿ ಎಲ್ಲಿಯಾದರೂ ಅಥವಾ ಒಟ್ಟು ಐದಕ್ಕಿಂತ ಹೆಚ್ಚು ಸ್ಥಳಗಳಲ್ಲಿ ಕಚ್ಚಿದ್ದರೆ ಅಥವಾ ಕಾಡು ಪ್ರಾಣಿಗಳ ಕಡಿತಕ್ಕೆ ಒಳಗಾಗಿದ್ದರೆ ತೀವ್ರ ತರಹದ ಸೋಂಕಿಗೆ ಒಳಪಡುವ ಸಂಭವವಿರುತ್ತದೆ; ಮೇಲಿನ ಸ್ಥಳಗಳನ್ನು ಹೊರತುಪಡಿಸಿ ಬೇರೆಲ್ಲಾದರೂ ಕಚ್ಚಿದ್ದರೆ ಅಥವಾ ಐದಕ್ಕಿಂತ ಕಡಿಮೆ ಸ್ಥಳಗಳಲ್ಲಿ ಕಚ್ಚಿದ್ದರೆ ಮಧ್ಯಮ ತರಹದ ಸೋಂಕಿಗೆ

ಒಳಪಡುವ ಸಂಭವವಿರುತ್ತದೆ ಮತ್ತು ರೋಗದ ನಾಯಿ, ವ್ಯಕ್ತಿ ಅಥವಾ ಪ್ರಾಣಿ ಕಚ್ಚದೆ ನೆಕ್ಕಿ ಜೊಲ್ಲು ಚರ್ಮಕ್ಕೆ ಸೋಕಿದ್ದರೆ, ರೇಬೀಸ್ ಪ್ರಾಣಿಯ ಹಾಲನ್ನು ಕಾಯಿಸದೆ ಕುಡಿದಿದ್ದರೆ ಮತ್ತು ರೋಗದ ಪ್ರಾಣಿಯ ಮಾಂಸ ಅಥವಾ ಪ್ರಾಣಿಯನ್ನು ಮುಟ್ಟಿದ್ದರೆ ಅಲ್ಪ ಪ್ರಮಾಣದ ಸೋಂಕಿಗೆ ಒಳಪಡುವ ಸಂಭವವುಂಟು. ನುರಿತ ವೈದ್ಯರನ್ನು ತತ್‌ಕ್ಷಣ ಸಂಪರ್ಕಿಸುವುದು ಜರೂರಿನ ಅಗತ್ಯ.

ಕಚ್ಚಿದ ನಾಯಿ, ವ್ಯಕ್ತಿ ಅಥವಾ ಪ್ರಾಣಿ ರೋಗದಿಂದ ನರಳುತ್ತಿರುವುದು ನಿಜವಿದ್ದರೆ ಕಚ್ಚಿದ ಮೊದಲ ದಿನ, ಮೂರು, ಏಳು, ಹದಿನಾಲ್ಕು, ಮೂವತ್ತು ಮತ್ತು ತೊಂಭತ್ತನೆ ದಿನಗಳಂದು ಒಂದೊಂದು ಒಟ್ಟು ಆರು ಮತ್ತು ಒಂದು ವರ್ಷದ ನಂತರ ಒಂದು ನವೀನ ರೀತಿಯ ವ್ಯಾಕ್ಸೀನ್‌ಗಳನ್ನು ಒಂದು ಎಂ.ಎಲ್. ಪ್ರಮಾಣದಲ್ಲಿ ತೆಗೆದುಕೊಳ್ಳಬೇಕು.

ರೋಗ ಇರುವಿಕೆಯ ಬಗ್ಗೆ ನಿಖರವಾಗಿ ಗೊತ್ತಿಲ್ಲದಿದ್ದಾಗ ಕಚ್ಚಿದ ಮೊದಲ ದಿನ, ಮೂರು, ಏಳು ಮತ್ತು ಹದಿನಾಲ್ಕು ದಿನಗಳು ಒಂದೊಂದು ವ್ಯಾಕ್ಸೀನ್ ತೆಗೆದುಕೊಂಡು ೧೫ ದಿನಗಳ ನಂತರವೂ ಕಚ್ಚಿದ ನಾಯಿ ಅಥವಾ ಪ್ರಾಣಿ ಸಾಯದೆ ಆರೋಗ್ಯದಿಂದಿದ್ದರೆ ವ್ಯಾಕ್ಸೀನ್ ತೆಗೆದುಕೊಳ್ಳುವುದನ್ನು ನಿಲ್ಲಿಸಬಹುದು.

ತೀವ್ರ ತರಹದ ಸೋಂಕಿನ ಭಯವಿದ್ದಾಗ ಮತ್ತು ಕಡಿತದಿಂದ ತಳ ಭಾಗದಲ್ಲಿರುವ ಮಾಂಸಖಂಡಗಳು ಮತ್ತು ನರಗಳು ಜಖಂಗೊಂಡಿದ್ದರೆ ಅಂತಹ ವ್ಯಕ್ತಿಗಳು ಆಂಟಿರೇಬೀಸ್ ವ್ಯಾಕ್ಸೀನೇಷನ್ ಜೊತೆಗೆ ಆಂಟಿರೇಬೀಸ್ ಸೀರಮ್ ಔಷಧವನ್ನು ತೆಗೆದುಕೊಳ್ಳುವುದರಿಂದ ರೇಬೀಸ್ ರೋಗ ಬರದಂತೆ ಮತ್ತಷ್ಟು ಎಚ್ಚರಿಕೆ ವಹಿಸಬಹುದು.

ಪಶುವೈದ್ಯ ಶಾಲೆಯ ಸಿಬ್ಬಂದಿಯವರು, ಕಟುಕರು, ಬೀದಿ ನಾಯಿಗಳನ್ನು ಹಿಡಿದು ನಿಯಂತ್ರಿಸುವವರು, ರೇಬೀಸ್ ರೋಗಿಗಳ ಶುಶ್ರೂಷೆಯಲ್ಲಿ ನಿರತರಾಗಿರುವವರು ಮತ್ತು ಪೋಸ್ಟ್‌ಮ್ಯಾನ್ ಮುಂತಾದವರು ಮುನ್ನೆಚ್ಚರಿಕೆಯಾಗಿ ಹೊಸರೀತಿಯ ವ್ಯಾಕ್ಸೀನ್‌ಗಳನ್ನು ಮೊದಲ ದಿನ, ಏಳನೆಯ ದಿನ, ಇಪ್ಪತ್ತೊಂದನೆಯ ದಿನ ಮತ್ತು ಒಂದು ವರ್ಷದ ನಂತರ ಒಟ್ಟು ೪ ಸಲ ಆ ನಂತರ ಪ್ರತಿ ೨ ರಿಂದ ೫ ವರ್ಷಕ್ಕೊಮ್ಮೆ ವ್ಯಾಕ್ಸಿನೇಷನ್ ತೆಗೆದುಕೊಳ್ಳುವುದು ಕ್ಷೇಮಕರ.

ಅಂತಿಮವಾಗಿ ಕಾಯಿಲೆಯ ತಗಲುವಿಕೆ, ಇರುವಿಕೆ ಮತ್ತು ನಂತರದ ದುಷ್ಪರಿಣಾಮಗಳನ್ನು ಅರಿತು ಸರ್ಕಾರ, ಸ್ವಯಂಸೇವಾ ಸಂಸ್ಥೆಗಳು, ನಾಗರಿಕರು ಮತ್ತು ವೈದ್ಯರು ದೇಶದಲ್ಲಿರುವ ಬೀದಿ ನಾಯಿಗಳು ಇಲ್ಲದಂತೆ ನಿಯಂತ್ರಿಸುವುದು. ಇದು ಸಾಧ್ಯವಾಗದಿದ್ದರೆ ಎಲ್ಲಾ ನಾಯಿಗಳಿಗೂ ಪ್ರತಿ ವರ್ಷ ಮುಂಜಾಗ್ರತಾ ಆಂಟಿರೇಬೀಸ್ ವ್ಯಾಕ್ಸಿನೇಷನ್ ಚುಚ್ಚುವುದರಿಂದ ಮತ್ತು ಹೊಸ ರೀತಿಯ ವ್ಯಾಕ್ಸಿನ್‌ಗಳು ಸುಲಭ ಬೆಲೆಯಲ್ಲಿ ಎಲ್ಲರಿಗೂ ಎಟಕುವಂತೆ ನೋಡಿಕೊಂಡರೆ ರೇಬೀಸ್ ಕಾಯಿಲೆಯನ್ನು ಭವಿಷ್ಯದಲ್ಲಿ ಇಲ್ಲದಂತೆ ನಿರ್ಮೂಲನೆ ಮಾಡಬಹುದು.

ಮರ-ನರ ಸಂಬಂಧ ಅನಿವಾರ್ಯವೇ?

ಎ. ಪಿ. ಚಂದ್ರಶೇಖರ

ಬೃಹನ್ನಗರಗಳ ಬೆಂಕಿಪೊಟ್ಟಣ ಮನೆಗಳಲ್ಲಿ ಜನನ, ವಾಸ, ವಿಕಾಸ, ಕಾರು, ವಿಮಾನಗಳಲ್ಲಿ ಯಾನ. ದೂರದರ್ಶನ, ಕಾರ್ಖಾನೆ, ಗಣಕ, ವಿವಿಧ ಬೃಹದುದ್ಯಮಗಳು—ಮುಂತಾದ ಯಂತ್ರ ನಿಯಂತ್ರಿತ ವ್ಯವಸ್ಥಾಪನೆಗಳಲ್ಲಿ ಧನ ಗಳಿಸುವ ದಂಧೆ. ಇಂಥ ಅಸಂಖ್ಯ ಆಧುನಿಕ ನರನಾರಿಯರಿಗೆ ಮರವೆಂದರೇನು, ದನವೆಂದರೇನು, ಬೇಸಾಯವೇಕೆ, ಬದುಕಿಗೆ ಅರ್ಥ ಉಂಟೇ ಮುಂತಾದ ಮೂಲಪಾಠಗಳನ್ನೂ ಬೋಧಿಸಬೇಕಾದ ಕಾಲ ಬಂದಿದೆ ಎಂದೇ "ಮರಗಳು ನಮಗೆ ಏಕೆ ಬೇಕು?" ಎಂಬ ಪ್ರಶ್ನೆ ಹಿಂದೆಂದಿಗಿಂತ ಇಂದು ಪ್ರಸ್ತುತವಾಗಿದೆ—ಜರೂರಾಗಿ ಕೂಡ.

"ಮರಗಳು, ಕಾಡುಗಳು ನಮ್ಮ ಅಭಿವೃದ್ಧಿಗೆ ತಡೆಗಳಾಗಿವೆ. ಪೇಟೆಗಳು ಶ್ರೀಮಂತಿಕೆಯನ್ನು ಸೃಷ್ಟಿಸುತ್ತವೆ. ಒಂದು ದೇಶದ ಆರ್ಥಿಕ ಪ್ರಗತಿ ಪೇಟೆಯಲ್ಲಿದೆ, ಕಾರ್ಖಾನೆಯಲ್ಲಿದೆ" ಎಂದು ವಾದಿಸುವ ಹಲವು ಮಂದಿಗಳಿದ್ದಾರೆ. ಹಲವು ಮಂದಿಗಳ್ಯಾಕೆ? ನಮ್ಮ ಒಟ್ಟಾರೆ ಪ್ರಪಂಚ ವ್ಯವಸ್ಥೆ, ರಾಜಕೀಯ ದೃಷ್ಟಿ ಇದನ್ನೇ ಹೇಳುತ್ತಿದೆ. ಆದರೆ ಅಲ್ಲೊಂದು ಇಲ್ಲೊಂದು ಅಪಸ್ವರ—ಪರಿಸರ, ಮಾಲಿನ್ಯ, ಮರಗಿಡ ಕಾಡು....ಹೀಗೆ. ಇವರೆಲ್ಲಾ ಎಲ್ಲರ ದೃಷ್ಟಿಯಲ್ಲಿ ಪ್ರತಿಗಾಮಿಗಳು, ಪ್ರಗತಿ ವಿರೋಧಿಗಳು.

ನಮ್ಮ ಅಭಿವೃದ್ಧಿಗೆ ವಿದ್ಯುತ್ ಬೇಕು. ನಮ್ಮ ಬೇಸಾಯಕ್ಕೆ ನೀರು ಬೇಕು. ಹಾಗಾಗಿ ನಾವು ಅಣೆಕಟ್ಟು ಕಟ್ಟಬೇಕು. ನಮ್ಮ ಹೊಟ್ಟೆ ತುಂಬಲು ಆಹಾರ ಬೇಕು. ನಮಗೆಲ್ಲಾ ಬಟ್ಟೆಬೇಕು, ಮನೆಬೇಕು. ಈ ಎಲ್ಲದಕ್ಕಾಗಿ ಕಾಡು ಕಡಿಯಬೇಕು. ಇಂಥಾ ಅನಿವಾರ್ಯತೆಗಾಗಿ ಕಾಡು ಕಡಿಯುವಾಗಲೆಲ್ಲಾ ಕಾದು ವಿರೋಧಿಸುವ ಪರಿ, ಇದೆಂಥಾ ಪರಿಸರವಾದ ಎಂದು ಪ್ರಗತಿವಾದಿಗಳು ಪ್ರಕೋಪಗೊಳ್ಳುತ್ತಾರೆ.

ಆದರೆ ವಾಸ್ತವ ಸತ್ಯ ಸಾರ್ವಜನಿಕ ಅಭಿಪ್ರಾಯದೊಳಗೆ ಇರುವುದಿಲ್ಲ. ನಾವು ಇಂದು ಏನೆಲ್ಲವನ್ನು ಅಭಿವೃದ್ಧಿ ಎಂದು ತಿಳಿದಿದ್ದೇವೋ ಭ್ರಮಿಸಿದ್ದೇವೋ ಅವ್ಯಾವುವೂ ನಿಜವಾದ ಪ್ರಗತಿ ಅಲ್ಲ ಅಥವಾ ಪ್ರಗತಿಯನ್ನೇ ಪ್ರಗತಿ ಎಂದು ನಾವು ಪ್ರತಿಪಾದಿಸುತ್ತಿದ್ದೇವೆ. ನಾವು ಏನು ಅದ್ಭುತಗಳನ್ನು ಸಾಧಿಸಿದ್ದೇವೆಂದೂ, ಸೃಷ್ಟಿಗೆ ಪ್ರತಿ ಸೃಷ್ಟಿ ಮಾಡಿದ್ದೇವೆಂದೂ ತಿಳಿದ

ದ್ದರೇ ಸೃಷ್ಟಿ ಅದನ್ನು ಶೂನ್ಯದಿಂದ ಮಾಡುವುದಲ್ಲ. ನಮ್ಮ ಒಂದೊಂದು ಸೃಷ್ಟಿಗೆ, ಒಂದೊಂದು ಕೈಗಾರಿಕೆಗೆ ಮೂಲ ವಸ್ತು ಯಾವುದು? ಮಣ್ಣು ಮತ್ತು ಮರಗಿಡಗಳು ಮಾತ್ರ. ಅದಾಗಿ ಅಷ್ಟಾಗಿ ಉಪಯೋಗಿ ಎಂದು ಕಾಣದ ಮಣ್ಣನ್ನು (ಎಂದರೆ ಖನಿಜ, ಲವಣಗಳನ್ನು) ಮರಗಿಡಗಳು (ಎಂದರೆ ಹಣ್ಣು, ತರಕಾರಿ, ಧಾನ್ಯ, ಅಂಟು, ಅರಗು ಇತ್ಯಾದಿ) ಮನುಷ್ಯೋಪಯೋಗಿಯಾಗಿ ಬದಲಾಯಿಸುವ ಕ್ರಿಯೆ ಕಾರ್ಖಾನೆಗಳಲ್ಲಿ ನಡೆಯುತ್ತವೆ. ಹಾಗಾದರೆ ಯೋಚಿಸಿ—ನಿಜವಾದ ಐಶ್ವರ್ಯ ಎಲ್ಲಿದೆ? ಕಾರ್ಖಾನೆಗಳಲ್ಲೇ? ಕಾಡುಗಳಲ್ಲೇ? ಯಾವುದು ಮೊದಲು?

ಪ್ರಕೃತಿ ಎಂದರೆ ಏನು? "ಅದು ಅದಾಗಿ ಇರುವಂಥಾದ್ದು ಪ್ರಕೃತಿ. ಅದನ್ನು ಅದಾಗಿ ಯಾಕೆ ಬಿಡಬೇಕು ಎಂಬ ಪ್ರಶ್ನೆ ಸಹಜವಾಗಿ ಬಂದೀತು. ವಿವಿಧ ರೀತಿಯ ಮರಗಿಡಗಳನ್ನುಳ್ಳ ಕಾಡು–ಅವರೊಳಗೆ ಅಸಂಖ್ಯ ಪ್ರಾಣಿಗಳು, ಪಕ್ಷಿಗಳು, ಉರಗಗಳು, ಮೀನುಗಳು, ಕೀಟಗಳು, ಸೂಕ್ಷ್ಮ ಜೀವಿಗಳು....ಹೀಗೆ ಅದೆಷ್ಟು ಜೀವ ವೈವಿಧ್ಯ. ಇವನ್ನೆಲ್ಲಾ ಹೊತ್ತ ನಿರ್ಜೀವ ಮಣ್ಣಿನ ರಚನೆಯಲ್ಲೂ ಅಷ್ಟೇ ವೈವಿಧ್ಯ. ಈ ಎಲ್ಲಾ ವೈವಿಧ್ಯಗಳನ್ನೂ ಉಳ್ಳ ಈ ನಮ್ಮ ಭೂಮಿ ನಮ್ಮ ಪ್ರಕೃತಿ. ಇದು ಇಂದು ನಿನ್ನೆಯದಲ್ಲ. ಹಾಗೂ ಇದು ಒಮ್ಮೆಗೇ ಸೃಷ್ಟಿಯಾಗಲೂ ಇಲ್ಲ. ಮೊದಲು ಸೂಕ್ಷ್ಮ ಸಸ್ಯಗಳು, ಆಮೇಲೆ ದೊಡ್ಡ ಸಸ್ಯಗಳು. ಈ ಸಸ್ಯ ಸಮೃದ್ಧಿಸಿದ ಮೇಲೆ ಸೂಕ್ಷ್ಮ ಜೀವಿಗಳು, ಮೀನು, ಕಪ್ಪೆ, ಹಾವು, ಪಕ್ಷಿ, ಪ್ರಾಣಿಗಳು ಒಂದೊಂದಾಗಿ ವಿಕಾಸಗೊಂಡವು. ಒಂದೊಂದು ವಿಕಾಸದ ಹಿಂದೆ ಪ್ರಕೃತಿ ಅಷ್ಟಷ್ಟು ಪ್ರಯತ್ನ ಪಟ್ಟಿತ್ತು. ಪ್ರಬಲಗೊಂಡಿತ್ತು. ಪೂರ್ವಯೋಜಿತವೋ ಎಂಬಂತೆ ಹಂತಹಂತವಾಗಿ ಬೆಳೆದ ನಮ್ಮ ಪ್ರಕೃತಿಯ ಕೊನೆಯ ಕೊಂಡಿಯಾಗಿ ಮಾನವ ಮೈತಳೆದ. ಸುಮಾರು ೫೦ ಸಾವಿರ ವರ್ಷಗಳ ಹಿಂದೆ ಮಾನವನೆಂಬ ನವೋತ್ಪನ್ನ ಸೃಷ್ಟಿಯಾಗಬೇಕಾದರೆ ಅದರ ಹಿನ್ನೆಲೆಯಾಗಿ ಅಷ್ಟೊಂದು ತಯಾರಿ ಬೇಕಾಗಿತ್ತು ಅಥವಾ ಅಂಥಾ ತಯಾರಿ ಇದ್ದಾಗ ಮಾತ್ರ ಮಾನವ ಬಾಳಬಲ್ಲ; ಬೆಳೆಯಬಲ್ಲ.

ಆದ್ದರಿಂದ ಮಾನವ ಸೃಷ್ಟಿಗೆ ಹಿನ್ನೆಲೆಯಾಗಿದ್ದ ಪ್ರಕೃತಿ ಇದ್ದಾಗಲೇ, ಅಂಥಾ ಪ್ರಕೃತಿಯ ಮೂಲವಾಗಿರುವ ಮರಗಿಡಗಳು ಇದ್ದಾಗಲೇ ಮಾನವ ಇನ್ನೂ ಸೃಷ್ಟಿಯೊಳಗೆ ಇರುವುದು ಸಾಧ್ಯ. ಆದ್ದರಿಂದಲೇ ಅಂಥಾ ಪ್ರಕೃತಿಯನ್ನು ಉಳಿಸಿಕೊಳ್ಳುವುದು ಅಗತ್ಯ. ಮರಗಿಡಗಳ ಜೊತೆಜೊತೆಯಾಗಿ ನಮ್ಮ ಜೀವನ ನಡೆದರೆ ಮಾತ್ರ ನಿಜವಾದ ನಾಗರಿಕ ಅಭಿವೃದ್ಧಿ ಸಾಧ್ಯ.

ಯಾವುದೋ ಅಗತ್ಯಕ್ಕೆ ನಾವು ಅಟ್ಟ ಹತ್ತಬೇಕು. ಇಚ್ಛಾಶಕ್ತಿಯಿಂದಲೇ ಹತ್ತುವುದು ಸಾಧ್ಯವಿಲ್ಲ. ಅದು ಕ್ರಿಯಾಶಕ್ತಿಯಾಗಬೇಕಾದರೆ ಸಾಧನ ಬೇಕು. ಏಣಿಯನ್ನೇ ತಳ್ಳಿದರೆ ಹೇಗೆ? ಅಟ್ಟದಲ್ಲೇ ಕುಳಿತು ಬದುಕುವುದು ಸಾಧ್ಯವೇ? ಹಾಗಾಗಿದೆ ಮರಗಿಡಗಳ ಕುರಿತಂತೆ ನಮ್ಮ ಕಥೆ. ನಮ್ಮ ನಾಗರಿಕ, ಕೈಗಾರಿಕ ಸಾಧನೆಗಳ ಈ ಏರುವಿಕೆಗೆ ಕಾರಣವಾದ ಮರಗಿಡಗಳನ್ನು ನಾವಿಂದು ಮರೆತಿದ್ದೇವೆ. ಹತ್ತುವಾಗ ಕಟ್ಟಿಕೊಂಡ ಬುತ್ತಿ ಮುಗಿದ ನಂತರ

ಮುಂದೇನು? ಇಳಿಯುವ ಏಣಿಯನ್ನು ಭದ್ರವಾಗಿ ಇಟ್ಟುಕೊಳ್ಳುವ ಜಾಣತನವೇ ವೃಕ್ಷ ಪ್ರೇಮದಲ್ಲಿ ಇರುವುದು.

ಆಹಾರಕ್ಕೆ ಸಸ್ಯಗಳು ಬೇಕು ಎಂಬುದು ನಮಗೂ ಗೊತ್ತು. ಆದ್ದರಿಂದಲೇ ನಾವು ಕಾಡು ನಾಶ ಮಾಡಿ ಅಲ್ಲಿ ನಮ್ಮ ಆಹಾರಕ್ಕಾಗುವ ಸಸ್ಯಗಳನ್ನು ಮಾತ್ರ ಬೆಳೆಸುತ್ತೇವೆ. ನಿರುಪಯುಕ್ತ ಸಸ್ಯಗಳು, ಕಳೆಗಳು ಯಾಕೆ? ಎಂದು ವಾದಿಸುವವರಿದ್ದಾರೆ. ಈ ವಾದಕ್ಕೆ ಒಂದು ಮಗ್ಗಲಿನ ಉತ್ತರವನ್ನು ಈ ಮೊದಲೇ ಕೊಟ್ಟಾಗಿದೆ– ಅದು ಅದಾಗಿ ಇರುವ ಪ್ರಕೃತಿಯ ಲಕ್ಷಣವನ್ನು ವಿವರಿಸಿದ್ದಾಗಿದೆ. ಇರಲಿ, ಇನ್ನೊಂದು ಕೋನವನ್ನು ಅಳೆಯಲು ಪ್ರಯತ್ನಿಸುತ್ತೇನೆ. ನಮ್ಮ ಆಹಾರ ತಯಾರಿಸುವ ಸಸ್ಯಗಳಿಗೂ ಆಹಾರ ಬೇಕಲ್ಲಾ? ಹೌದು ಇದು ನಮ್ಮ ಕೃಷಿ ವಿಜ್ಞಾನಕ್ಕೆ ಗೊತ್ತು. ಹಾಗಾಗಿ ಆಧುನಿಕವಾದ ರಾಸಾಯನಿಕ ಗೊಬ್ಬರಗಳನ್ನು ತಯಾರಿಸಿದ್ದಾಯಿತು. ಪ್ರಕೃತಿ ಭಾರೀ ನಿಧಾನ ಕ್ರಿಯೆ. ನಮ್ಮ ಅವಸರಕ್ಕೆ, ಹಣದಾಹಕ್ಕೆ ಹೊಂದುವುದಿಲ್ಲ. ಹಾಗಾಗಿ ಭಾರೀ ಇಳುವರಿಗಾಗಿ ಈ ಹೊಸ ಗೊಬ್ಬರಗಳನ್ನು ಪ್ರಯೋಗಿಸಿದ್ದಾಯಿತು.

ಯೋಚನೆ ಮಾಡಿ! ಈ ರಾಸಾಯನಿಕ ಗೊಬ್ಬರಗಳ ಮೂಲ ಯಾವುದು? ಮತ್ತೆ ಕಾಡುಗಳೆಂಬುದು ನಮಗೆ ಪಾಠವಾಗಬೇಡವೇ? ಅನಂತ ಭೂತಕಾಲದ ಮರಗಿಡಗಳು ಭೂಮಿ ಸೇರಿ ಆದ ಪಳಿಯುಳಿಕೆಗಳು ಸೃಷ್ಟಿಸಿದ ಪೆಟ್ರೋಲಿಯಂನ ಉತ್ಪನ್ನವೇ ನಮ್ಮ ರಸಗೊಬ್ಬರಗಳು ಕೂಡ. ಈಗಿನ ಅಪೋಶನ ಪ್ರಕ್ರಿಯೆಯೊಳಗೆ ಇವು ಶಾಶ್ವತವಲ್ಲ. ತಾನು ಶಾಶ್ವತವಲ್ಲದಿದ್ದರೂ, ನಮ್ಮ ಮೇಲೆ, ನಮ್ಮ ಕೃಷಿಯ ಮೇಲೆ ಇದು ಶಾಶ್ವತ ದುಷ್ಪರಿಣಾಮಗಳನ್ನು ಮಾಡುತ್ತಿರುವುದು ದುರಂತ. ರಾಸಾಯನಿಕ ಗೊಬ್ಬರದ ಅಬ್ಬರದಿಂದಾಗಿ ಭೂಮಿ ಬರಡಾಗುತ್ತಿರುವುದು ಕೀಟರೋಗ ಬಾಧೆ ಹೆಚ್ಚುತ್ತಿರುವುದು. ಕೀಟನಾಶಕಗಳ ವಿಷವರ್ತುಲಕ್ಕೆ ಸಿಕ್ಕು ಜೀವಜಾಲ ತತ್ತರಿಸುತ್ತಿರುವುದು ಆಹಾರದ ಮೌಲ್ಯವೇ ಕುಸಿಯುತ್ತಿರುವುದು ಇನ್ನೊಂದು ಕಥೆ.

ಹಸಿದ ಹುಲಿ ನೇರವಾಗಿ ಹಸುವನ್ನು ತಿನ್ನಬಲ್ಲದು. ಅದು ಅದರ ಪ್ರಕೃತಿ. ಹೆಬ್ಬಾವು ಇನ್ನೊಂದು ಹಾವನ್ನೇ ನುಂಗಬಲ್ಲುದು. ಅದು ಅದರ ಪ್ರಕೃತಿ. ಹಾಗೆಂದು ನಾವು ಹಾಗೆ ಆಹಾರ ಸೇವಿಸಲು ಸಾಧ್ಯವೇ? ಶೇಕಡಾ ೦.೫ ಸತ್ವಾಂಶಗಳುಳ್ಳ ಸಸ್ಯ ಹಾಗೂ ಪ್ರಾಣಿ ತ್ಯಾಜ್ಯಗಳನ್ನು (ಸಾವಯವ ಗೊಬ್ಬರಗಳನ್ನು) ಮತ್ತೆ ಆಹಾರವಾಗಿ ಸೇವಿಸುವುದು ನಮ್ಮ ಎಲ್ಲಾ ಸಸ್ಯಗಳ ಪ್ರಕೃತಿ. ಇಂಥಾ ಪ್ರಾಕೃತಿಕ ಆಹಾರಗಳನ್ನು ತಪ್ಪಿಸಿ ಅಧಿಕ ಸತ್ವಾಂಶವುಳ್ಳ ಕೃತಕ ಆಹಾರಗಳನ್ನು ಕೊಟ್ಟದ್ದರ ದೆಸೆಯಿಂದ ನಮ್ಮ ಕೃಷಿ ಬೆಳೆಗಳೆಲ್ಲಾ ಕೃಶವಾಗಿವೆ. ಸ್ವಾಭಾವಿಕ ರೋಗ ನಿರೋಧಕ ಶಕ್ತಿ ಕಳಕೊಂಡಿವೆ.

ಸಾವಯವ ಗೊಬ್ಬರ ಸಿಕ್ಕಬೇಕಾದರೆ ಮತ್ತೆ ಮರಗಿಡಗಳೇ ಬೇಕು. ಇವು ಭೂಮಿಯ ಆಳದಿಂದ ಸತ್ವಾಂಶಗಳನ್ನು ತಮ್ಮ ಬೇರುಗಳ ಮೂಲಕ ಎತ್ತಬೇಕು. ಭೂಮಿಯಿಂದ ಸ್ವೀಕರಿಸಿದ್ದಕ್ಕಿಂತ ಹೆಚ್ಚಾಗಿ ವಾತಾವರಣದಿಂದ, ಸೂರ್ಯಶಾಖ

ದಿಂದ ಶಕ್ತಿಯನ್ನು ಪಡೆದು ತಮ್ಮ ಹಸುರಿನಲ್ಲಿ ಆಹಾರ ತಯಾರಿಸಬೇಕು. ನಮಗೆಲ್ಲರಿಗೂ ಆಹಾರ ಹಂಚಬೇಕು. ಸೂರ್ಯಶಕ್ತಿಯನ್ನೂ, ಗಾಳಿಯಶಕ್ತಿಯನ್ನೂ ಪ್ರಾಣಿಗಳು ಎಂದೂ ಆಹಾರವಾಗಿ ಬದಲಾಯಿಸಲಾರವು. ಇಂಥಾ ಅಸಾಧ್ಯ ಕ್ರಿಯೆಯನ್ನು ನಿಮಿಷ ನಿಮಿಷವೂ ಮಾಡುತ್ತಾ ಭೂಮಿಯ ಒಟ್ಟಾರೆ ಆಹಾರ ಸಂಗ್ರಹವನ್ನೂ, ಭೂಮಿಯ ಸತ್ವವನ್ನೂ ಹೆಚ್ಚಿಸುವ, ಶಾಶ್ವತವಾದ ಮೆಲ್ಮಣ್ಣನ್ನು ಸೃಷ್ಟಿಸುವ, ಪ್ರಕೃತಿಯ ಅದ್ಭುತ ಕಾರ್ಖಾನೆಗಳನ್ನು ಕಳಪೆ ದೃಷ್ಟಿಯಿಂದ ನೋಡುವ, ಹಸುರಿಗಿಂತ ಕೆಂಪು ಚಂದವೆನ್ನುವ ನಮ್ಮ ಕಂಗಣ್ಣಿಗೆ ಏನನ್ನೋಣ?

ನಮ್ಮ ಬದುಕಿಗೆ ಆಹಾರ ಮುಖ್ಯ. ಆದರೆ ಶುದ್ಧ ಗಾಳಿ, ಹಾಗೂ ನೀರು. ಅದಕ್ಕಿಂತ ಮುಖ್ಯ. ಇಂಥಾ ಗಾಳಿ, ನೀರನ್ನು ಹಾಳುಮಾಡುವುದನ್ನು ಬಿಟ್ಟು ಬೇರೇನನ್ನೂ ಮಾಡದ ಹೆಚ್ಚಿನ ಕೈಗಾರಿಕೆಗಳು ನಮಗೆ ಪ್ರಾಮುಖ್ಯವಾಗಿರುವುದು ಬಹಳ ವಿಚಿತ್ರವಾಗಿದೆ. ಶುದ್ಧ ಗಾಳಿಯನ್ನು ನಿರ್ಮಾಣ ಮಾಡುವ ನಮ್ಮ ಯಾವತ್ತೂ ಅಂತರ್ಜಲವನ್ನು ಸೃಷ್ಟಿಸುವ, ಮಳೆ ಬರಿಸುವ, ಒಟ್ಟಾರೆ ಎಲ್ಲವನ್ನೂ ಸುಸೂತ್ರವಾಗಿಸುವ ಸುಂದರ ಜವಾಬ್ದಾರಿಯನ್ನು ಹೊತ್ತಿರುವ ಮರಗಿಡಗಳ ಬಗ್ಗೆ ನಾವೆಲ್ಲರೂ ಜವಾಬ್ದಾರಿಯಿಂದ ವರ್ತಿಸುವಂತಾಗಬೇಕು.

ನಮಗೆ ಕಾರು, ವಿಮಾನ, ಹಡಗು, ಟಿ.ವಿ, ಫೋನ್, ಫಾಸ್ಟ್‌ಫುಡ್ ಎಲ್ಲವೂ ಬೇಕು. ಅದಕ್ಕಾಗಿ ವಿದ್ಯುತ್ ಬೇಕು, ನೀರಾವರಿ ಬೇಕು. ಆದರೆ ಇಂಥಾ ಎಲ್ಲವನ್ನೂ ಸೃಷ್ಟಿಸುವ ಎಲ್ಲಾ ಶಕ್ತಿಗಳೂ ಮರಗಳಲ್ಲೇ ಇವೆ. ವಾಸ್ತವವಾಗಿ ಮರಗಳು ಶಾಶ್ವತವಾದ ಸೌರ ಬ್ಯಾಟರಿಗಳಾಗಿವೆ. ಇಂಥಾ ಮರಗಳಿರದೆ ನಾವು ಮುಂದಿನ ಜನಾಂಗವನ್ನು ಕಾಣುವುದು ಸಾಧ್ಯವಿಲ್ಲ.

ಪ್ರಕೃತಿಯನವರತ ಮನುಜನ
ತಿದ್ದುತಿರುವಂತೆ
ವಿಕೃತಿಗೊಳಿಸುವನವನು ಮಾಳೆಯಂಗಗಳ
ಭೂಕೃಷಿಕ ರಸತಂತ್ರ ಶಿಲ್ಪಿ ವಾಹನ
ಯಂತ್ರ
ವ್ಯಾಕೃತಿಸರೇನವಳ? ಮಂಕುತಿಮ್ಮ

ಯಾರು ಸತ್ಯಕ್ಕಾಗಿ ಹಿಂಸೆಗೆ ಒಳಗಾಗುತ್ತಾರೋ ಅವರು ಧನ್ಯರು. ಏಕೆಂದರೆ ಅವರದು ಈ ಸ್ವರ್ಗದ ರಾಜ್ಯ.

—ಏಸುಕ್ರಿಸ್ತ

ಧೂಮಪಾನಿಯ ಮಡದಿ

ನೀರದ ನಾಗರಾಜರಾವ್

ಗಾಳಿಯಲ್ಲಿ ಸಿಗರೇಟಿನ ಹೊಗೆಯು ಮೆಲ್ಲಗೆ ಹರಡುತ್ತಾ, ವಾಸನೆಯನ್ನು ಬೀರುತ್ತಾ ಇದ್ದುದು ನನ್ನ ಮೂಗಿಗೆ ಬಡಿಯಿತು. ಆಗ ನನಗೆ, ಕಡುಕತ್ತಲೆಯೊಳಗೆ ಒಬ್ಬ ಮನುಷ್ಯ ಒಂದುಭಾರೀ ಬಂದೂಕವನ್ನು ಹಿಡಿದು ಬಂದರೆ ಎಷ್ಟು ಭಯವಾಗುತ್ತದೆಯೋ, ಅಷ್ಟೇ ಭಯವಾಗಿ ದೇಹ ಮರಗಟ್ಟಿದಂತಾಯಿತು. ನನಗೆ ಸಹಜವಾಗಿ ಹಿಂದಿನದೆಲ್ಲಾ ಮತ್ತೆ ಪರದೆಮೇಲೆ ಬಂದು ಹೋದಂತಾಯಿತು. ಆ ಸಿಗರೇಟು ಸೇದುತಿದ್ದವನು ನನ್ನ ಕಡೆಗೇ ನಡೆದು ಬಂದನು. ಆಗ ನಾನು ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ನಿಲ್ಲಲೇ ಬೇಕಾಯಿತು.

"ನಿಮ್ಮ ಯಜಮಾನರು ಹೋಗಿಬಿಟ್ಟಿದ್ದು ಕೇಳಿ ಬಹಳ ದುಃಖವಾಯಿತು. 'ಸಾರಿ' ಎಂದು ಹೇಳುತ್ತಲೇ ಅವನು ತನ್ನ ಕೈಯಲ್ಲಿದ್ದ ಸಿಗರೇಟನ್ನು ಒಮ್ಮೆ ಸೇದಿಕೊಂಡು ತನ್ನ ಪುಪ್ಪುಸದೊಳಕ್ಕೆ ನೇರವಾಗಿ ಹೀರಿ ಎಳೆದುಕೊಂಡು ಒಂದು ಅರೆಕ್ಷಣ ಬಿಟ್ಟು ಉಫ್ ಎಂದು ನನ್ನ ತಲೆಯ ಮೇಲೆಯೇ ಹೊಗೆ ಹಾರಾಡಿಕೊಂಡು ಹೋಗುವಂತೆ ಊದಿದ.

ನನ್ನ ಗಂಡನನ್ನು ತಪಾಸಣೆಗಾಗಿ ಆಸ್ಪತ್ರೆಗೆ ಕರೆದೊಯ್ದಾಗ ಅವರಿಗೆ ಪುಪ್ಪುಸದ ಕ್ಯಾನ್ಸರ್ (ಮೆಟಸ್ಟಸ್ಸೈಜಡ್) ಎಂದು ಕಂಡುಹಿಡಿಯಲಾಯಿತು. ಮೊದಮೊದಲು ವಿಪರೀತ ಸಿಗರೇಟು ಸೇದುತಿದ್ದ ಅವರು, ಈಗ ಐದು ವರ್ಷಗಳಿಂದ ಸಂಪೂರ್ಣವಾಗಿ ಬಿಟ್ಟುಬಿಟ್ಟಿದ್ದರು. ನಾನು ಹದಿಹರೆಯದವಳಾಗಿದ್ದಾಗ, ನನ್ನ ತಾತ ಇದೇ ವ್ಯಾಧಿಯಿಂದ ತೀರಿಕೊಂಡಿದ್ದರು. ಯಾವಾಗ ಇವರು ಐದು ವರ್ಷಗಳ ಕಾಲ ಸೀಗರೇಟು ಸೇದುವುದನ್ನು ಬಿಟ್ಟುಬಿಟ್ಟಿದ್ದರೋ, ಆಗ ನಾನು ಇವರಿಗೆ, ತಾತನಿಗೆ ಬಂದಂಥಹ ವ್ಯಾಧಿ ಬರುವುದಿಲ್ಲ ಎಂದು ಖಚಿತವಾಗಿ ನಂಬಿಬಿಟ್ಟಿದ್ದೆ. ನಮ್ಮ ತಾತ ಸಿಗರೇಟು ಸೇದುವುದು ನನಗೆ ಸುತರಾಂ ಇಷ್ಟವಿರಲಿಲ್ಲ. ಒಂದೇ ವರ್ಷದಲ್ಲಿ ನಮ್ಮ ತಾತ ೧೧೩ ಕೆ.ಜಿ. ತೂಕದಿಂದ ೬೨ ಕೆ.ಜಿ.ಗೆ ಇಳಿದು ಹೋಗಿದ್ದರು. ಚಿಕಾಗೋ ಆಸ್ಪತ್ರೆಯೊಂದರಲ್ಲಿ ನಾನು ಎರಡು ವರ್ಷ ಬೇಸಿಗೆ ರಜದಲ್ಲಿ, ಅಂದರೆ ನನ್ನ ಕಾಲೇಜ್ ಸೆಮಿಸ್ಟರ್‌ಗಳ ಮಧ್ಯದಲ್ಲಿ ಟ್ಯೂಮರ್

ಆಧಾರ : ಸುಸನ್ ಗಿಲ್‌ಬರ್ಟ್ ಮೆಕ್‌ಗೈರ್ ಅವರ "ಎ ಸ್ಮೋಕರ್ಸ್ ವೈಫ್" ಎಂಬ ಲೇಖನ

ರಿಜಿಸ್ಟ್ರಿ ಕ್ಲಾರ್ಕ್ ಆಗಿ ಕೆಲಸಮಾಡುತಿದ್ದೆ. ಕ್ಯಾನ್ಸರ್ ರೋಗಿಗಳ ಚಾರ್ಟ್ಸ್‌ಗಳನ್ನು ಓದಿ, ರೆಕಾರ್ಡ್‌ಮಾಡಿ, ಬೇರ್ಪಡಿಸಿ ಇಡು ತಿದ್ದೆ. ಅದರಲ್ಲಿ ಅಂದರೆ ಆ ಚಾರ್ಟ್ಸ್‌ಗಳಲ್ಲಿ "ಸಿಗರೇಟು ಸೇದುವ ಅಭ್ಯಾಸವಿದೆ" ಎಂಬ ಟಿಪ್ಪಣಿ ಬರೆದೇ ಇರುತಿದ್ದುದು ನನ್ನ ಗಮನಕ್ಕೆ ಬರತೊಡಗಿತ್ತು.

ಎರಡು ವರುಷಗಳ ಹಿಂದೆ ನಮ್ಮ ಯಜಮಾನರಿಗೆ ಎಲ್ಲಾ ತಪಾಸಣೆ ಮುಗಿದಾದ ಮೇಲೆ ಕೈಮ್ಯೊಥೆರಪಿ ಮತ್ತು ರೇಡಿಯೇಷನ್ ಥೆರಪಿಯನ್ನು ಕೊಟ್ಟಿದ್ದರು. ಅವರ ಬಲಗಡೆ ಪುಪ್ಪುಸವನ್ನೂ, ಜೊತೆಗೆ ಒಂಭತ್ತು ಕ್ಯಾನ್ಸರ್ ಗಂಟುಗಳನ್ನೂ ಸಹ ಶಸ್ತ್ರಚಿಕಿತ್ಸೆಮಾಡಿ ತೆಗೆದುಹಾಕಿ ಬಿಟ್ಟಿದ್ದರು. ಜಾಸ್ತಿಸಲ ಕೈಮ್ಯೊಥೆರಪಿ ಕೊಟ್ಟಷ್ಟೂ ತಲೆಗೂದಲು ಹಿಡಿಹಿಡಿಯಾಗಿ ಉದುರುತ್ತಿತ್ತು. ನ್ಯೂಮೋನಿಯಾ, ಶಸ್ತ್ರಚಿಕಿತ್ಸೆಯಿಂದ ಎದೆ ಗೂಡಿನಲ್ಲಿ ನೀರು ತುಂಬಿದ್ದನ್ನು ಆಗಾಗ ತೆಗೆಯುತ್ತಿದ್ದರು. ಜೊತೆಗೆ ಅವರ ದೇಹದ ತೂಕ ೨೨ ಕೆ. ಜಿ. ಕಡಿಮೆಯಾಗಿತ್ತು. ಇವೆಲ್ಲಾ ಮೇಲಿಂದ ಮೇಲೆ ಥೆರಪಿ ಕೊಡುವುದರಿಂದ ಉಂಟಾಗುತಿದ್ದ ಅಡ್ಡ ಪರಿಣಾಮಗಳಾಗಿದ್ದವು. ನನ್ನವರು ಸಹಿಸುತಿದ್ದ ಆ ನೋವುಗಳು, ಅದಕ್ಕೆ ಕೊಡುವ ರಾಮಬಾಣದ ಚಿಕಿತ್ಸೆಗಳನ್ನು ನೋಡಿ ನೋಡಿ ನಾನು ದುಃಖಿಸುತ್ತಿದ್ದೆ.

ಡಾಕ್ಟರ್‌ಗಳು ಈ ಮೊದಲೇ ಹೇಳಿದಷ್ಟು ತೊಂದರೆಗಳು ಮೊದಲಬಾರಿ ಕೈಮ್ಯೊಥೆರಪಿ ಕೊಟ್ಟಾಗ ಉಂಟಾಗಲೇ ಇಲ್ಲ. ಪ್ರತಿಸಲ ಚಿಕಿತ್ಸೆಯನ್ನು ಮತ್ತೆಮತ್ತೆ ಕೊಟ್ಟಾಗ ಅವರು ಬಹಳಷ್ಟು ನಿತ್ರಾಣರಾಗುತ್ತಲೇ ಹೋಗುತ್ತಿದ್ದರು. ಹೋಗಲಿ ಇಷ್ಟರ ಮಟ್ಟಿಗೆ ಇದ್ದಾರಲ್ಲ ಅಂತ ನಾವು ದೇವರಿಗೆ ಅಭಿನಂದನೆ ಸಲ್ಲಿಸುತ್ತಲೇ ಬಂದೆವು.

ಹೀಗೆ ವಾರಗಟ್ಟಲೇ ಕಳೆಯುತ್ತಿತ್ತು. ಅವರ ಶರೀರದ ರಕ್ತವೆಲ್ಲಾ ಅಶುದ್ಧವಾಗತೊಡಗಿತು. ಅವರು ಮತ್ತಷ್ಟು ಹೇಳಿಕೊಳ್ಳಲಾಗದಷ್ಟು ನಿಶ್ಶಕ್ತರಾಗತೊಡಗಿದರು. ಅವರ ನಾಲಿಗೆ ರುಚಿಕೆಟ್ಟು ಹೋಗಿ, ಜೀರ್ಣಶಕ್ತಿ ಕುಂದುತ್ತಾ ಹೋಯಿತು. ಮತ್ತಷ್ಟು ತೂಕ ಇಳಿಯುತ್ತಲೇ ಹೋಗುತ್ತಿತ್ತು. ಜೊತೆಗೆ ಕೆಮ್ಮಿದಾಗಲೆಲ್ಲಾ ರಕ್ತ ಬೀಳಲೂ ಶುರುವಾಯಿತು.

ಪೂರ್ಣ ಆರೋಗ್ಯದಿಂದ, ಗುಂಡುಕಲ್ಲಿನ ಹಾಗೆ ಇರುವ, ತಮ್ಮಲ್ಲೇ ಬಿಡುವಿಲ್ಲದಷ್ಟು ಕೆಲಸದಲ್ಲಿ ತೊಡಗಿಸಿಕೊಂಡಿರುವ ನಮ್ಮೆಲ್ಲ ಸ್ನೇಹಿತರುಗಳೂ, ಬಂಧುಗಳೂ ಬಂದು ಹೋಗಿ ಮಾಡುತಿದ್ದವರೂ, ನಾವೂ ಅವರುಗಳ ಮನೆಗೆ ಹೋಗಿ ಬರುತಿದ್ದುದೂ ಎಲ್ಲಾ ನಿಂತೇಹೋಯಿತು. ನಮ್ಮ ವೃತ್ತಿ ಜೀವನ, ನಮ್ಮ ಇರುವಿಕೆ ಎಲ್ಲಾ ತನಗೆ ತಾನೇ ಕಳಚಿ ಹೋಗಿ, ಹೇಳ ಹೆಸರಿಲ್ಲದವರಂತೆ ಆಗಿ ಹೋದೆವು.

"ಒಂದು ದಿನ ಬೆಳಿಗ್ಗೆ ಎದ್ದಾಗ ನಿಮ್ಮ ಕೂದಲೆಲ್ಲಾ ದಿಂಬಿನ ಮೇಲೆ ಉದುರಿ ಬಿದ್ದು ಹೋಗಿರುತ್ತೆ" ಎಂದು ನರ್ಸ್ ಒಬ್ಬಳು ನನ್ನವರಿಗೆ ಮುಂಜಾಗ್ರತೆಯಾಗಿಯೇ ಹೇಳಿದಳು. ಅದೇ ರೀತಿ ಕಪ್ಪು ಮಿಶ್ರಿತ ಬಿಳಿಬಣ್ಣದ ಕೂದಲು ಉದುರಿ ಹೋಗಿ ಬೋಳುತಲೆ ಆಗಿ ಹೋಯಿತು. ಅವರು ಟೋಪಿಯನ್ನಾಗಲೀ ಇಲ್ಲವೇ ವಿಗ್‌ನ್ನು ಆಗಲೀ ಹಾಕಿ ಕೊಳ್ಳಲು ಒಪ್ಪಲೇ ಇಲ್ಲ.

ಸ್ವಲ್ಪ ಹೊರಗಡೆ ತಿರುಗಾಡುವಷ್ಟು ಮಟ್ಟಿಗೆ ಆರೋಗ್ಯ ಸುಧಾರಿಸಿದ್ದಾಗ, ನಾವೊಮ್ಮೆ ಹೋಟಲಿಗೆ ಹೋದೆವು. "ನೋಡು ಎಲ್ಲರೂ ನನ್ನನ್ನು ಆಗಲೋ ಈಗಲೋ ಸತ್ತು ಹೋಗುವವ ಇವ ಎಂಬಂತೆ ಕ್ರೂರ ಕಣ್ಣಿನಿಂದ ನೋಡುತ್ತಾರೆ" ಎಂದು ನನಗೆ ಹೇಳಿದರು. ನಾನು "ಹಾಗೇನಿಲ್ಲ" ಅಂತ ಮಾತು ತಿರುಗಿಸಲು ಪ್ರಯತ್ನಿಸಿದೆ. ಆದರೆ, ಅವರು ಇನ್ನೂ ಮಾತು ಮುಂದುವರಿಸುತ್ತಲೇ, "ನಾನು ಯಾರಾದರೂ ಬಹಳ ಕಾಯಿಲೆಯಾದವರನ್ನು ಈ ರೀತಿ ದೃಷ್ಟಿಸಿ ನೋಡುತ್ತಿದ್ದೆ. ಆಗ ನಾನು "ಸಧ್ಯ, ನಾನು ಆರೋಗ್ಯವಾಗಿ ಚೆನ್ನಾಗಿದ್ದೀನಲ್ಲ" ಎಂದು ಒಳಗೇ ಜಂಭ ಪಟ್ಟು ಕೊಳ್ಳುತಿದ್ದೆ. ಅವರಿಗೇತಾನೇ ವ್ಯಾಧಿ ಬಂದಿರೋದು" ಎಂದು ಮನಸ್ಸಿನಲ್ಲಿ ಹಿಗ್ಗಿ ಅಂದುಕೊಳ್ಳುತಿದ್ದದೂ ಉಂಟು. ನನ್ನನ್ನು ನೋಡಿದ ಪ್ರತಿಯೊಬ್ಬರೂ ನೀವು ಸಿಗರೇಟು ಸೇದುತ್ತಾ ಇದ್ರ" ಎಂದು ಪ್ರಶ್ನೆಗಳ ಸುರಿಮಳೆಯನ್ನು ಸುರಿಸುತ್ತಿದ್ದುದೂ ಇದೆ. "ಹೌದು, ಹೌದು, ಹೌದು" ಎಂದು ನಾನು ಹೇಳುತ್ತಾ, ನನ್ನ ಜೀವನದಲ್ಲಿ ಅದೊಂದು ಘೋರ ತಪ್ಪನ್ನು ಮಾಡಿಬಿಟ್ಟಿದ್ದೇನೆ" ಎಂದು ಉತ್ತರಿಸುವುದೂ ಇತ್ತು.

"ಆದರೆ, ನೀವು ಆ ದುರಭ್ಯಾಸಾನ ಬಿಟ್ಟು ಬಿಟ್ಟಿದ್ದೀರಿ ಅಲ್ಲವೆ?" ಎಂದು ನಾನು ಅವರ ಮನಸ್ಸನ್ನು ಸಮಾಧಾನಿಸಲು ಹೇಳುತ್ತಿದ್ದುದೂ ಉಂಟು. ಹಾಗಾದರೂ ಮನಸ್ಸಿಗೆ ಕೊಂಚ ಶಾಂತಿ ಬರಲಿ ಎಂದು ಹಾಗೆ ಹೇಳುತ್ತಿದ್ದೆ.

ಪ್ರತಿ ಹತ್ತು ಸೆಕೆಂಡ್‌ಗಳಿಗೆ ಒಬ್ಬ ಮನುಷ್ಯ ಈ ರೀತಿ ಹೊಗೆಸೊಪ್ಪಿನ ಚಟದವ ಸಾಯುತ್ತಲೇ ಇರುತ್ತಾನೆ. ಎಂದು ಹೇಳಿದರು. ಆದರೆ, ಅದಕ್ಕೂ ಮೀರಿ ಕೆಲವೇ ಸೆಕೆಂಡ್‌ಗಳಿಗೊಮ್ಮೆ ಬಹಳ ಮಂದಿ ಸಾಯುವುದೂ ಉಂಟು ಎಂದು ಹೇಳಿದರು.

ಚಿಕ್ಕವಯಸ್ಸಿನಲ್ಲಿಯೇ ಸಿಗರೇಟು ಸೇದಿ, ಸೇದಿ ಸಾವನ್ನಪ್ಪಿದವರು ಎಷ್ಟು ಮಂದಿ ಇಲ್ಲ? ಅವರುಗಳಿಗೆ ಇನ್ನೂ ಮಕ್ಕಳು ಮರಿ ಸಹ ಆಗಿರದಂಥಹ ವಯಸ್ಸು. ಹೀಗಾಗಿ ಎಷ್ಟೋ ಮಕ್ಕಳು ಹುಟ್ಟಲೂ ಸಾಧ್ಯವಿಲ್ಲದೆಯೇ ಹೋಗಬಹುದು. ಸಿಗರೇಟಿನಿಂದ ಉಂಟಾದ ಕ್ಯಾನ್ಸರ್‌ನಿಂದ ಸಾವನ್ನಪ್ಪಿದ ಮನೆಗಳಲ್ಲಿ ಅವರುಗಳ ಮಕ್ಕಳು ಆರ್ಥಿಕ ತೊಂದರೆಯಿಂದ ಕಾಲೇಜು ಮೆಟ್ಟಲು ತುಳಿಯಲೂ ಸಾಧ್ಯವಿಲ್ಲದೆ ತಮ್ಮ ಭವಿಷ್ಯವನ್ನು ಹಾಳುಮಾಡಿಕೊಂಡಿರುವುದೂ ಉಂಟು. ಎಷ್ಟೊಂದು ಜನ ವಿಧವೆಯರಾಗಿ, ವಿಧುರರಾಗಿಯೂ ಉಳಿದುಕೊಂಡು ಒಂಟಿ ಜೀವನವನ್ನು ಅತಿ ಕಷ್ಟದಿಂದ ನಡೆಸಿಕೊಂಡು ಹೋಗುತ್ತಿಲ್ಲ? ಇಷ್ಟೆಲ್ಲಾ ಕಷ್ಟನಷ್ಟಗಳನ್ನು ನೋಡಿಯೂ ಸಹ, ಕೇಳಿಯೂ ಸಹ ಎಷ್ಟೋ ಯುವಕರು ಪ್ರಪಂಚದಲ್ಲಿ ಹೊಸದಾಗಿ ಸಿಗರೇಟು ಸೇದುವುದನ್ನು ಶುರುಮಾಡಿಕೊಳ್ಳುತ್ತಲೇ ಇದ್ದಾರೆ, ಯಾಕೆಂದರೆ ಹಾಲಿವುಡ್‌ನವರು, ತಾರೆಗಳನ್ನು "ತಂಪಾಗಿ"ರಿಸಲು, ನಿಶ್ಚಿಂತೆಯಾಗಿರಿಸಲು, ಸಿಗರೇಟನ್ನು ಸೇದುತ್ತಾ ಅರ್ಧಕಣ್ಣು ಮುಚ್ಚಿ ಸ್ವರ್ಗಸುಖ ಅನುಭವಿಸುತ್ತಿರುವಂತೆ ಚಿತ್ರಿಸಿ ತೋರಿಸುತ್ತಾರೆ. ಭೋಗಾಸಕ್ತರಾಗಿರುವಂಥಹ ತುಟಿಗಳು ಸಿಗರೇಟನ್ನು ಕಚ್ಚಿ ಹಿಡಿದಿರುವ ರೀತಿಯ ಚಿತ್ರ ನೋಡಿದೊಡನೇ, ಆಕರ್ಷಿತರಾಗಿ, ಈ ಚಟಕ್ಕೆ ದಾಸರಾಗಿಬಿಡುವ

ದುಂಟು, ಹಂಫ್ರೆಬೋಗರ್ಟ್ ಮತ್ತು ಗೇರಿ ಕೂಪರ್ ಇಬ್ಬರೂ ಸಿಗರೇಟಿನ ಚಟದಿಂದ ಉಂಟಾದ ಕ್ಯಾನ್ಸರ್‌ನಿಂದ ಹೇಗೆ ಜೀವನ ದಾರುಣಮಾಡಿಕೊಂಡಿದ್ದರು ಎಂಬುದನ್ನು ತಿಳಿದ ಮೇಲೂ ನಾವುಗಳು "ಸಿಗರೇಟು ಸೇದುವುದು ಅಪಾಯಕರ" ಎಂಬಂಶವನ್ನು ಗಣನೆಗೆ ತಂದುಕೊಳ್ಳಲೇ ಇಲ್ಲ.

ಹೀಗೆ ಎಂಟುತಿಂಗಳು ಚಿಕಿತ್ಸೆ ಮುಗಿದ ಮೇಲೆ ನನ್ನವರಿಗೆ, ಮತ್ತಷ್ಟು ಹಲವಾರು ಬಗೆಯ ವೈದ್ಯ ಪರೀಕ್ಷೆಗಳನ್ನು ಮಾಡಬೇಕೆಂದು ಹೇಳಿದರು, ನಾವು ವೈದ್ಯ ಪರೀಕ್ಷೆಗಾಗಿ ಆಸ್ಪತ್ರೆ ಒಳಗಡೆ ಹೋಗುತಿದ್ದಾಗ, ಬಾಗಿಲಿನಲ್ಲಿ ನೂರು ಜನ ಆಸ್ಪತ್ರೆ ಸಿಬ್ಬಂದಿಯವರು ಸೀಗರೇಟು ಸೇದುತ್ತಾ, ಜೋರಾಗಿನಕ್ಕು ನಲಿಯುತಿದ್ದರು. ಅವರ ಈ ಚಟ ಮುಂದೆ ಅವರುಗಳಿಗೆ ಬಹಳ ಕೆಡಕು ಉಂಟುಮಾಡುವುದೆಂದು ತಿಳಿದಿದೆಯೋ ಇಲ್ಲವೊ ಕಾಣೆ. ತಂಬಾಕು ಕಾರ್ಖಾನೆಯುವರು ಸಿಗರೇಟನ್ನು ಉತ್ಪನ್ನಮಾಡಿ, ಸಾವಿರಾರು ಜನರನ್ನು ಬಲಿತೆಗೆದುಕೊಳ್ಳುತ್ತಿದ್ದಾರೆ. ಚಳಿಯಿರಲಿ, ಮಳೆಯಿರಲಿ, ಇಲ್ಲವೇ ಹಾರಿಹೋಗುವಂಥಹ ಗಾಳಿಯಿರಲಿ ಅಚಲರಾಗಿ ನಿಂತು ಸಿಗರೇಟು ಸೇದುತ್ತಲೇ ಇರುತ್ತಾರೆ.

ಅವರುಗಳು ಈ ರೀತಿ ಕ್ಯಾನ್ಸರ್ ಬಂದು ಸತ್ತುಹೋದಲ್ಲಿ ಕಷ್ಟ-ನಷ್ಟ ಮನೆಯಲ್ಲಿ ಬದುಕಿರುವವರಿಗೆತಾನೆ? ಸಿಗರೇಟು ಸೇದಿ ಧೀರ್ಘವಾಗಿ ಪುಪ್ಪುಸದೊಳಕ್ಕೆ ಎಳೆದುಕೊಳ್ಳುವವರೆಲ್ಲಾ, ಮುದಿತನ ಬರುವ ಮೊದಲೇ ಸತ್ತುಹೋಗುತ್ತಾರೆಯೆ? ಎಂದು ಆಶ್ಚರ್ಯ ಪಡುವವರು ಇದ್ದಲ್ಲಿ, ನನ್ನ ಯಜಮಾನರ ಜೊತೆ ಕೊನೆಯು ಒಂದೂವರೆ ವರ್ಷ ಕಳೆದಿದ್ದರೆ ತಿಳಿಯುತಿತ್ತು.



ಯಾರು ಶಾಂತಿದೂತರೋ ಅವರು ಧನ್ಯರು. ಏಕೆಂದರೆ ಅವರು ದೇವರ ಮಕ್ಕಳೆಂದು ಕರೆಯಲ್ಪಡುತ್ತಾರೆ.

—ಏಸುಕ್ರಿಸ್ತ

ವ್ಯಾಯಾಮ

ಡಾ|| ಕೆ. ವಿ. ರಾಘವೇಂದ್ರರಾವ್

ಮನುಷ್ಯನಿಗೆ ಜೀವಿಸಲು ಅಗತ್ಯವಾದ ವಸ್ತುಗಳಲ್ಲಿ ಆಹಾರ, ನಿದ್ರೆ, ಶುದ್ಧವಾದ ನೀರು, ವಸತಿ, ಗಾಳಿ ಅತಿ ಮುಖ್ಯವಾದವುಗಳು. ಒಬ್ಬ ವ್ಯಕ್ತಿಯು ಆರೋಗ್ಯಕರವಾದ ಜೀವನವನ್ನು ನಡೆಸಬೇಕಾದರೆ ಪೌಷ್ಠಿಕ ಆಹಾರವು ಎಷ್ಟು ಮುಖ್ಯವೋ, ವ್ಯಾಯಾಮವೂ ಅಷ್ಟೇ ಮುಖ್ಯ. ಚಟುವಟಿಕೆಯೇ ಜೀವನ, ವ್ಯವಸ್ಥಿತ ಚಟುವಟಿಕೆಯೇ ವ್ಯಾಯಾಮ. ವ್ಯಾಯಾಮವಿಲ್ಲದ ಶರೀರ ರೋಗದ ಆಗರ. ನಾವೆಲ್ಲರೂ ಆಹಾರದ ಬಗ್ಗೆ ಹೆಚ್ಚು ಆಸಕ್ತಿ ವಹಿಸುತ್ತೇವೆ. ಆದರೆ ಶಾರೀರಕ ವ್ಯಾಯಾಮದ ಬಗ್ಗೆ ಅಷ್ಟು ಗಮನ ಕೊಡುವುದಿಲ್ಲ. ವ್ಯಾಯಾಮದಿಂದ ಮನಸ್ಸು ಉಲ್ಲಾಸಭರಿತವಾಗುತ್ತದೆ. ಮನಸ್ಸಿನ ಉಲ್ಲಾಸದಿಂದ ದೇಹವು ಲವಲವಿಕೆಯನ್ನು ಹೊಂದುತ್ತದೆ. ಲವಲವಿಕೆಯು ನಾವು ಸಮರ್ಪಕವಾಗಿ ಕೆಲಸಮಾಡಲು ಸಹಾಯ ಮಾಡುತ್ತದೆ.

ವ್ಯಾಯಾಮಕ್ಕೆ ವಯೋಮಿತಿಯಿಲ್ಲ. ಚಿಕ್ಕ ವಯಸ್ಸಿನ ಮಕ್ಕಳಿಂದ ಹಿಡಿದು, ಯುವಕರು, ವಯಸ್ಕರು, ವೃದ್ಧರು ವ್ಯಾಯಾಮದಲ್ಲಿ ಅವರ ವಯಸ್ಸಿಗನುಗುಣವಾಗಿ ತೊಡಗಬಹುದು. ಶಾಲಾ ಕಾಲೇಜಿನ ಮಕ್ಕಳು, ಯುವಕರು, ಕೊಕ್ಕೊ, ಕಬಡ್ಡಿ, ವಾಲೀಬಾಲ್, ಕಾಲ್ಚೆಂಡು ಮುಂತಾದ ಆಟಗಳನ್ನು ಆಡುವುದು ಒಳ್ಳೆಯದು. ಈ ಆಟಗಳಲ್ಲಿ ತೊಡಗಿದಾಗ ಎಳೆಯ ವಯಸ್ಸಿನಲ್ಲಿ ಅಗತ್ಯವಾಗಿ ಬೆಳೆಯಬೇಕಾದ ಮಾಂಸಖಂಡಗಳು—ಸ್ನಾಯುಗಳು ಬೆಳೆಯುವುದಕ್ಕೆ ಸಹಾಯವಾಗುವುದು. ಮಾಂಸಖಂಡಗಳ ಕುಗ್ಗುವಿಕೆ—ಹಿಗ್ಗುವಿಕೆಯಿಂದ ರಕ್ತ ಪರಿಚಲನೆಯ ವೇಗ ಹೆಚ್ಚುತ್ತದೆ. ಪುಪ್ಪುಸಗಳೂ ಕೂಡ ಹೆಚ್ಚು ಹಿಗ್ಗಿ ಗಾಳಿಯನ್ನು ತುಂಬಿಕೊಳ್ಳುತ್ತವೆ. ಈ ಪುಪ್ಪುಸಗಳಿಂದ ಹೀರಿಕೊಂಡ ಆಮ್ಲಜನಕ ಶರೀರದ ಎಲ್ಲಾ ಜೀವಕಣಗಳಿಗೂ ಬೇಗ ತಲುಪುತ್ತದೆ. ಇದರಿಂದ ದೇಹವು ಆರೋಗ್ಯಕರವಾಗಿರುತ್ತದೆ. ಮನಸ್ಸು ಉಲ್ಲಸಿತವಾಗಿರುತ್ತದೆ.

ಇಂದಿನ ನಗರೀಕರಣ ಮತ್ತು ಕೈಗಾರಿಕೀಕರಣದಿಂದ ಬದಲಾದ ಜೀವನ ಕ್ರಮದಿಂದ ಶಾಲಾ ಕಾಲೇಜಿಗೆ ಹೋಗುವವರಿಗೆ, ಕಚೇರಿಗಳಿಗೆ ಕೆಲಸಮಾಡಲು ಹೋಗುವವರಿಗೆ ಶರೀರಕ್ಕೆ ಅಗತ್ಯವಾದ ವ್ಯಾಯಾಮದ ಕೊರತೆ ಉಂಟಾಗಿದೆ. ಪೂರ್ವದಲ್ಲಿ ಈಗಿನಂತೆ ವಾಹನ ಸೌಕರ್ಯವಿಲ್ಲವಿದ್ದರಿಂದ ಅವರು ಎಲ್ಲಿಗೆ ಹೋಗಬೇಕಾದರೂ ನಡೆದೇ ಹೋಗಬೇಕಿತ್ತು. ಇದೇ ವ್ಯಾಯಾಮ ಸಾಕಷ್ಟಾಗಿ ಆಗುತ್ತಿತ್ತು.

ಈಗ ಪುಟ್ಟ ಮಕ್ಕಳಿಂದ ಹಿಡಿದು ಯುವಕ/ಯುವತಿಯರೂ ಸಹ ಬಹಳವಾಗಿ

ಪುಸ್ತಕಗಳಿಗೆ ಹೆಚ್ಚಿನ ಸಮಯವನ್ನು ಮೀಸಲಿಟ್ಟು ಕ್ರೀಡೆ ಮತ್ತು ವ್ಯಾಯಾಮದ ಕಡೆ ಗಮನವೇ ಹರಿಸದಂತಾಗಿದೆ.

ಹಿರಿಯರು ಮಕ್ಕಳನ್ನು ಕ್ರೀಡೆಗಳಲ್ಲಿ ತೊಡಗಿಸಿಕೊಳ್ಳುವಂತೆ ಪ್ರೋತ್ಸಾಹಿಸಬೇಕು. ಕ್ರೀಡೆಗಳಲ್ಲಿ ತೊಡಗಿದರೆ ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಯ ಜೊತೆಗೆ ಪರಸ್ಪರರಲ್ಲಿ ಸ್ನೇಹ, ಸೌಹಾರ್ದತೆಯನ್ನು ಬಲಪಡಿಸುವಲ್ಲಿ ನೆರವಾಗುತ್ತದೆ. ಈ ದಿಸೆಯಲ್ಲಿ ತಂದೆ ತಾಯಿಯರ ಪಾತ್ರ ಮತ್ತು ಶಿಕ್ಷಕರ ಪಾತ್ರ ಮಹತ್ತರವಾದುದು.

ಸಾಮಾನ್ಯವಾಗಿ ಜನ ಚಿಕ್ಕ ವಯಸ್ಸಿನಲ್ಲಿ ಆಟಪಾಠಗಳಲ್ಲಿ ಚುರುಕಾಗಿದ್ದು ಕ್ರಮೇಣ ಅದನ್ನು ಪರಿಸ್ಥಿತಿಯ ಒತ್ತಡದಿಂದಲೋ ಅಥವಾ ಆಲಸ್ಯದಿಂದಲೋ ಕೈಬಿಡುವುದುಂಟು. ಇದರಿಂದ ಕಾಲಕ್ರಮೇಣ ಮೈಯಲ್ಲಿ ಬೊಜ್ಜು ಬೆಳೆದು ಮಧ್ಯವಯಸ್ಸಿನಲ್ಲಿ ರಕ್ತದ ಒತ್ತಡ, ಮಧುಮೇಹ, ಮಲಬದ್ಧತೆ, ಹೃದ್ರೋಗ — ಇತ್ಯಾದಿ ಕಾಯಿಲೆಗಳಿಗೆ ಆಮಂತ್ರಣ ನೀಡುತ್ತಾರೆ.

ಪ್ರತಿನಿತ್ಯ ಸೂರ್ಯೋದಯಕ್ಕೆ ಮುಂಚೆ ಎದ್ದು ತಂಪಾದ ಶುದ್ಧವಾದ ಗಾಳಿಯನ್ನು ಸೇವಿಸುತ್ತ ಸಾಕಷ್ಟು ವೇಗವಾಗಿ ನಡೆಯುವುದಾಗಲೀ, ಇಲ್ಲವೇ ಮನೆಯಲ್ಲಿಯೇ ಸೂಕ್ತವಾದ ಕ್ರಮಬದ್ಧವಾದ ವ್ಯಾಯಾಮ ಪದ್ಧತಿಯನ್ನು ಅನುಸರಿಸುವುದು ಲೇಸು.

ಭಾರತದ ಪ್ರಾಚೀನ ವ್ಯಾಯಾಮ ಪದ್ಧತಿಯಾದ ಯೋಗಾಸನವು ಸಾವಿರಾರು ವರ್ಷಗಳಿಂದ ಆಚರಣೆಯಲ್ಲಿದೆ. ಪಾಶ್ಚಾತ್ಯ ದೇಶಗಳ ಜನಗಳೂ ಸಹ ಇತ್ತೀಚೆಗೆ ಇದರ ಉಪಯೋಗವನ್ನು ಮನಗಾಣುತ್ತಿದ್ದಾರೆ. ಅಲ್ಲಿಯ ಅಂಗಸಾಧನೆಯ ಕ್ರಮಕ್ಕೆ ಕೆಲವು ಯೋಗಾಸನ ಕ್ರಮಗಳನ್ನು ಅಳವಡಿಸಿಕೊಂಡಿರುವುದು ಎಲ್ಲರಿಗೂ ತಿಳಿದ ವಿಷಯ.

ಮನುಷ್ಯನ ಅಸ್ಥಿ ಮಾಂಸಗಳನ್ನು ಪುಷ್ಟಿಗೊಳಿಸುವುದರ ಜೊತೆಗೆ ಆಧ್ಯಾತ್ಮಿಕ ಸಾಧನೆಯ ಉದ್ದೇಶವನ್ನೂ ಸಹ ಯೋಗಾಸನವು ಹೊಂದಿದೆ. ಜನಸಾಮಾನ್ಯರೂ ತಮ್ಮ ಮಾನಸಿಕ ಮತ್ತು ಶಾರೀರಿಕ ಸ್ಥೈರ್ಯ ರಕ್ಷಣೆಗಾಗಿ ಯೋಗಾಭ್ಯಾಸವನ್ನು ಅವಲಂಬಿಸಬಹುದು.

ಒಟ್ಟಿನಲ್ಲಿ ಹೇಳುವುದಾದರೆ ಪ್ರತಿಯೊಬ್ಬರೂ ವ್ಯಾಯಾಮದ ಮಹತ್ವವನ್ನು ಅರಿಯಬೇಕು. ಬರೀ ಅರಿತರೆ ಮಾತ್ರ ಸಾಲದು, ಅನುಸರಿಸಬೇಕು. ಯಾವುದೇ ದೇಶದ ಪ್ರಗತಿಯು ಅದರ ಪ್ರಜೆಗಳ ಆರೋಗ್ಯವನ್ನೇ ಅವಲಂಬಿಸಿದೆ. ಪ್ರತಿಯೊಬ್ಬರೂ ಆರೋಗ್ಯಕರ ವಾತಾವರಣವನ್ನು ಸೃಷ್ಟಿಸಿ, ನೆಮ್ಮದಿ, ಸುಖಶಾಂತಿಯ ಜೀವನವನ್ನು ಸಾಗಿಸಲು ನೆರವಾಗೋಣ.

ಈ ದಿಸೆಯಲ್ಲಿ ಆಯುರ್ವೇದದಲ್ಲಿ ತಿಳಿಸಿರುವಂತೆ—

ಸಮದೋಷ ಸಮಾಗ್ನಿಶ್ಚ ಸಮಧಾತು
ಮಲಕ್ರಿಯಾ
ಪ್ರಸನ್ನಾತ್ಮೇಂದ್ರಿಯ ಮನಃ ಸ್ವಸ್ಥ ಇತಿ
ಅಭಿಧೀಯತೆ

ಒಳ್ಳೆಯ ವ್ಯಾಯಾಮಮಾಡುವುದರಿಂದ ತ್ರಿದೋಷಗಳು, ಪಚನಶಕ್ತಿಯು, ಸಪ್ತಧಾತುಗಳೂ ಸಮನಾಗಿದ್ದು, ಮಲಪ್ರವೃತ್ತಿ ಕಾರ್ಯಗಳು ಸರಿಯಾಗಿ ನಡೆಯುವುದರಿಂದ ಮನಸ್ಸು ಪ್ರಸನ್ನವಾಗಿರುವುದೇ ಸ್ವಸ್ಥನ ಲಕ್ಷಣ. ಇದೇ ಆರೋಗ್ಯದ ಗುಟ್ಟು.

ಸಿಟ್ಟು : ಒಂದಿಷ್ಟು ಮಾಹಿತಿಗಳು

ಶಂಕ ಐತಾಳ

ಸಾಮಾನ್ಯ ಸನ್ನಿವೇಶವೊಂದನ್ನು ಕಲ್ಪಿಸಿಕೊಳ್ಳೋಣ: ಅನಿತಾ ಜೈನ್ ಮತ್ತು ರೋಹನ್ ಪಟೇಲ್ ಇಬ್ಬರಿಗೂ ವಿಪರೀತ ಸಿಟ್ಟು ಬಂದಿದೆ. ಅವರ ಇಬ್ಬರು ಸಹೋದ್ಯೋಗಿಗಳನ್ನು ನೌಕರಿಯಿಂದ ತೆಗೆದುಹಾಕಲು ಬಾಸ್ ತೀರ್ಮಾನಿಸಿದ್ದೇ ಇದಕ್ಕೆ ಕಾರಣ. ಅನಿತಾ ಎಷ್ಟು ಕೋಪಗೊಂಡಿದ್ದಳೆಂದರೆ, ಅವಳು ಬಾಸ್ ಕಛೇರಿಗೆ ಬಿರುಗಾಳಿಯಂತೆ ಧಾವಿಸಿ ಜೋರಾಗಿ ಕೂಗಾಡತೊಡಗಿದಳು. ಆ ಸಂಜೆ ಅವಳು ತನ್ನ ಗಂಡನಿಗೆ ಈ ವಿಷಯ ತಿಳಿಸಿದಾಗ ಅವನೆಂದ: "ಸಿಟ್ಟು ಬಂದಾಗ ಮನಸ್ಸಿನ ಸ್ತಿಮಿತ ಕಳೆದುಕೊಂಡು ಎಲ್ಲೆಂದರಲ್ಲಿ ಕಿರುಚಾಡುವುದನ್ನು ಮುಂದುವರಿಸಿದ್ದೇ ಆದಲ್ಲಿ, ಒಂದಲ್ಲ ಒಂದು ದಿನ, ನೀನು ಖಂಡಿತ ಹೃದಯಾಘಾತಕ್ಕೆ ಒಳಗಾಗುತ್ತೀಯೆ."

ಪಟೇಲ್ ಕೂಡ ಅನಿತಾಳಷ್ಟೇ ಅಸ್ತವ್ಯಸ್ತಗೊಂಡಿದ್ದ. ಆದರೆ ಬಾಸ್ ಎದುರು ಕೂಗುವುದರಿಂದ, ತನ್ನ ನೌಕರಿಗೂ ಅಪಾಯವುಂಟಾಗಬಹುದೆಂಬ ಭಯದಿಂದ, ಅವನು ಕಛೇರಿಯಲ್ಲಿ ಆ ದಿನವಿಡೀ ಬಾಯಿ ಮುಚ್ಚಿಕೊಂಡೇ ಇದ್ದ. ಮನೆಗೆ ಹೋಗುವಾಗ ಅವನೇನೂ ಉದ್ವೇಗಮುಕ್ತನಾಗಿರಲಿಲ್ಲ. ಎಂದಿನಂತೆ ಹೆಂಡತಿಯೊಂದಿಗೆ ಹರಟೆ ಹೊಡೆಯತೊಡಗದೆ, ಒಂದು ಸಿಗರೇಟ್ ಹಚ್ಚಿ, ಟಿವಿ ನೋಡುತ್ತ ಸುಮ್ಮನೆ ಕುಳಿತಿದ್ದ. ಆಗ ಅವನಾಕೆ ಎಂದಳು: "ನಿಮ್ಮ ಈ ಕೋಪಕ್ಕೆ ಕಾರಣವಾದರೂ ಏನು? ಹೇಳಬಾರದೆ? ನೀವು ಸಿಟ್ಟನ್ನು ಹೀಗೆ ಅಡಗಿಸಿಡುವುದನ್ನು ಮುಂದುವರಿಸಿದ್ದೇ ಆದಲ್ಲಿ, ಒಂದಲ್ಲ ಒಂದು ದಿನ, ಖಂಡಿತ ಹೃದಯಾಘಾತಕ್ಕೆ ಒಳಗಾಗುತ್ತೀರಿ."

ಯಾರ ಮಾತು ನಿಜ? ಸಿಟ್ಟನ್ನು ಹೊರಗೆಡಹುದು ನಿಮ್ಮ ಆರೋಗ್ಯಕ್ಕೆ ಒಳ್ಳೆಯದೆ? ಅಥವಾ ಅದನ್ನು ಮುಚ್ಚಿಡುವುದು ಒಳ್ಳೆಯದೆ? ಇವೆರಡು ಸ್ವಭಾವಗಳಲ್ಲಿ ಯಾವುದು ನಿಮ್ಮ ಉದ್ಯೋಗದಲ್ಲಿ ಅಥವಾ ದಾಂಪತ್ಯದಲ್ಲಿ ಒಳ್ಳೆಯದು ಅಥವಾ ಒಳ್ಳೆಯದಲ್ಲ? ಈ ಪ್ರಶ್ನೆಗಳಿಗೆ ಉತ್ತರ ನೀಡಲು ಕೆಲವು ಸಂಶೋಧನೆಗಳು ಪ್ರಯತ್ನಿಸಿವೆ ಹಾಗೂ ಪ್ರಯತ್ನಿಸುತ್ತಿವೆ.

"ಬದುಕಿ ಉಳಿಯಬೇಕಾದರೆ, ಕೋಪವನ್ನು ವ್ಯಕ್ತಪಡಿಸುವ ಧೈರ್ಯ ಅತ್ಯಂತ

೧೯೯೩ರ ಅಕ್ಟೋಬರ್ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ ಅಲಿಸನ್ ಬಾಸ್ ಅವರ "ಟೇಕ್ ಯೂಸ್ ಆಫ್ ಯುವರ್ ಆ್ಯಂಗರ್" ಎಂಬ ಲೇಖನ.

ಅವಶ್ಯಕ ಎಂದು ಒಂದು ಕಾಲದಲ್ಲಿ ಭಾವಿಸಲಾಗಿತ್ತು. ನಮ್ಮನ್ನು ಹೋರಾಟಕ್ಕೆ ಸಜ್ಜುಗೊಳಿಸುವ ಹಾಗೂ ಅದರಲ್ಲಿ ಗೆಲ್ಲುವಂತೆ ಮಾಡುವ ಸಾಮರ್ಥ್ಯ ಸಿಟ್ಟಿಗಿದೆ" ಎನ್ನುತ್ತಾರೆ ಮನೋವಿಜ್ಞಾನಿ ಆರನ್ ಸೀಗ್ಮನ್. ಹೌದು; ಸಿಟ್ಟು ಜನರನ್ನು ಕಾರ್ಯಚಟುವಟಿಕೆಗಳಿಗೆ ಪ್ರಚೋದಿಸುತ್ತದೆ; ಕ್ರಿಯೆಯಲ್ಲಿ ತೊಡಗಿಸುತ್ತದೆ. ಕೋಪದ 'ಭಾವನೆ' 'ನಿಜವಾದ ಕೋಪ' ಎನಿಸುವುದು ಇಂಥ ಚಟುವಟಿಕೆಗಳನ್ನು ಪ್ರಾರಂಭಿಸಿದಾಗಲೇ.

ಸಿಟ್ಟನ್ನು ಅಡಗಿಸಿಟ್ಟುಕೊಳ್ಳುವುದು ಅಪಾಯಕರವೆಂದೂ, ಅದನ್ನು ವ್ಯಕ್ತಪಡಿಸುವುದು ಒಳ್ಳೆಯದೆಂದೂ ಎರಡು ದಶಕಗಳ ಹಿಂದೆ ಭಾವಿಸಲಾಗಿತ್ತು. ಸಿಟ್ಟು ಬಂದಾಗ ಕಿರುಚುವುದರಿಂದ, ಕೂಗಾಡುವುದರಿಂದ ಮನಸ್ಸು ಶಾಂತವಾಗುತ್ತದೆ ಎಂಬ ಭಾವನೆ ಜನಸಾಮಾನ್ಯರಲ್ಲಿತ್ತು. ಅನಂತರ ಸಂಶೋಧಕರು ಮನಃಪ್ರವೃತ್ತಿಗಳು ಮತ್ತು ಹೃದ್ರೋಗಗಳ ನಡುವಣ ಸಂಬಂಧಗಳನ್ನು ಪತ್ತೆ ಹಚ್ಚತೊಡಗಿದರು.

೩೪೦೦ ಜನರನ್ನು ಬಳಸಿಕೊಂಡು ೧೯೬೦ರಲ್ಲಿ ನಡೆಸಲಾದ ಒಂದು ಅಧ್ಯಯನದಲ್ಲಿ, ಸ್ಯಾನ್‌ಫ್ರಾನ್ಸಿಸ್ಕೋದ ಹೃದ್ರೋಗ ತಜ್ಞರು 'ಎ' ಹಾಗೂ 'ಬಿ' ಎಂಬ ಎರಡು ಮಾದರಿಯ ಜನರನ್ನು ಗುರುತಿಸಿದರು. 'ಎ' ಮಾದರಿಯ ಜನರು ಸಿಟ್ಟು ಬಂದಾಗ ಬೇಗ ಸಹನೆ ಕಳೆದುಕೊಂಡು ಆಕ್ರಮಣ ಪ್ರವೃತ್ತಿಯನ್ನು ಪ್ರದರ್ಶಿಸುವವರೂ 'ಬಿ' ಮಾದರಿಯ ಜನರು ಸಿಟ್ಟನ್ನು ಮೌನವಾಗಿ ನುಂಗಿಕೊಂಡು ಅಂತರ್ಯದಲ್ಲಿಯೇ ಚಡಪಡಿಸುವವರೂ ಆಗಿರುತ್ತಾರೆ. ಮಾದರಿ 'ಎ' ವರ್ತನೆಯ ಜನರು ಹೃದ್ರೋಗಗಳಿಗೆ ಬಲಿಯಾಗುವ ಸಂಭವವು ಮಾದರಿ 'ಬಿ' ವರ್ತನೆಯ ಜನರಿಗಿಂತ ಅಧಿಕ ಎಂದು ಅವರು ವರದಿ ಮಾಡಿದರು. ತೀವ್ರ ರಭಸದ ಹಾಗೂ ಸ್ಪರ್ಧಾತ್ಮಕವಾದ ಜೀವನದಲ್ಲಿ ಹೃದಯಾಘಾತಗಳು ಹೆಚ್ಚು ಸಂಭವಿಸುತ್ತವೆ ಎಂಬುದು ಈ ಅಧ್ಯಯನದ ಒಟ್ಟು ಸಾರಾಂಶವಾಗಿತ್ತು.

ಆದರೆ ೮೦ರ ದಶಕದ ಪ್ರಾರಂಭದ ವರ್ಷಗಳಲ್ಲಿ ಕ್ರಮಾನುಗತವಾಗಿ ನಡೆದ ಅನೇಕ ಅಧ್ಯಯನಗಳು, 'ಎ' ಮಾದರಿಯ ಜನರು ಹೃದ್ರೋಗಗಳಿಗೆ ಬಲಿಯಾಗುವ ಸಂಭವ ಇತರರಿಗಿಂತ ಹೆಚ್ಚೇನೂ ಇಲ್ಲ ಎಂದು ತೋರಿಸಿಕೊಟ್ಟವು. ಈ ಎಲ್ಲ ಅಧ್ಯಯನಗಳ ಒಟ್ಟಾರೆ ಫಲಿತಾಂಶವಾಗಿ 'ಹಗೆತನದ ಸಿದ್ಧಾಂತ' ಹುಟ್ಟಿಕೊಂಡಿತು. ಇದನ್ನು ಪ್ರಪ್ರಥಮವಾಗಿ ಮಂಡಿಸಿದವರು ಡ್ಯೂಕ್ ವಿಶ್ವವಿದ್ಯಾನಿಲಯದ ವರ್ತನ ಸಂಶೋಧನ ವಿಭಾಗದ ನಿರ್ದೇಶಕರಾದ ಡಾ|| ರೆಡ್‌ಫೋರ್ಡ್ ವಿಲಿಯಮ್ಸ್. 'ಎ' ಮಾದರಿಯ ಜನರ ಗುಣಸ್ವಭಾವಗಳಲ್ಲಿ ಹೆಚ್ಚಿನವು ಹೃದ್ರೋಗಕ್ಕೆ ಕಾರಣವಾಗುವುದಿಲ್ಲವೆಂದೂ ಹೃದ್ರೋಗಗಳು ಬೆಳೆಯಲು ಕಾರಣವಾಗುವ ಗುಣ ಒಂದೇ ಒಂದೆಂದೂ ಅದೇ 'ಹಗೆತನದ ಭಾವನೆ' ಎಂದೂ ಅವರು ಪ್ರತಿಪಾದಿಸಿದರು.

ಈ ಹಗೆತನದ ಅಥವಾ ದ್ವೇಷಭಾವನೆಯ ವಿವಿಧ ಹಂತಗಳಿಗೆ ಸಂಬಂಧಿಸಿದಂತೆ, ವಿವಿಧ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಅನೇಕ ಮಂದಿಗೆ ಪ್ರಶ್ನಾವಳಿ ನೀಡಿ (ಬಾಕ್ಸ್ ನೋಡಿ) ಉತ್ತರ ಪಡೆಯುವುದರ ಮೂಲಕ ಡಾ|| ವಿಲಿಯಮ್ಸ್

ಅವರು, ಹಗೆತನದ ಮನಃಪ್ರವೃತ್ತಿಯಿರುವ ಇನ್ನೊಂದು ಮಾದರಿಯ ಜನರನ್ನು ಗುರುತಿಸಿ, ಅವರನ್ನು 'ಎಚ್' ಮಾದರಿಯವರೆಂದು ಹೆಸರಿಸಿದರು. ಈ ಮಾದರಿಯ ಜನರು ಸಿನಿಕರೂ ಯಾರಲ್ಲಿಯೂ ಭರವಸೆಯಿಡದವರೂ ಸಿಡುಕರೂ ಕೋಪವಶರಾದಾಗ ಬುದ್ಧಿಯ ಸ್ತಿಮಿತ ಕಳೆದುಕೊಂಡು ಹುಚ್ಚರಂತೆ ವರ್ತಿಸುವವರೂ ಆಗಿರುತ್ತಾರೆ. "ಸ್ವತಃ ನಾನೇ ಈ 'ಎಚ್' ಮಾದರಿಯವನಾಗಿದ್ದೇನೆ" ಎನ್ನುತ್ತಾರೆ ವಿಲಿಯಮ್ಸ್. "ನಾವೆಂಥ ಜನರೆಂದರೆ ನಿಬಿಡ ವಾಹನಗಳ ಸಂದಣಿಯಲ್ಲಿ ನಿಶ್ಚಲವಾಗಿ ನಿಂತಾಗಲೂ ನಮ್ಮ ವಾಹನಗಳ ಹಾರ್ನ್ ಅನ್ನು ಸದ್ದು ಮಾಡುತ್ತಲೇ ಇರುತ್ತೇವೆ."

ಇನ್ನೊಂದು ಅಧ್ಯಯನದಲ್ಲಿ ೨೫೫ ಪುರುಷ ವೈದ್ಯಕೀಯ ವಿದ್ಯಾರ್ಥಿಗಳಿಗೆ ಒಂದು ಪ್ರಮಾಣನಿಷ್ಕರ್ಷಿತ ವ್ಯಕ್ತಿತ್ವ ಪರೀಕ್ಷೆಯನ್ನು ಕೊಟ್ಟು ೨೫ ವರ್ಷಗಳ ಅನಂತರ ಕೆಲವು ಫಲಿತಗಳನ್ನು ಕಂಡು ಹಿಡಿಯಲಾಯಿತು. ಹಗೆತನದ ಶ್ರೇಣಿಯಲ್ಲಿ ಮೇಲ್ಮಟ್ಟದಲ್ಲಿದ್ದವರು, ಕೆಳಮಟ್ಟದಲ್ಲಿರುವ ಇತರರಿಗಿಂತ, ಹೃದಯ ರೋಗಗಳಿಗೆ ಈಡಾಗುವ ಸಾಧ್ಯತೆ ಅಥವಾ ಸಂಭಾವ್ಯತೆ, ನಾಲ್ಕೈದರಷ್ಟು ಅಧಿಕವೆಂದು ಕಂಡು ಬಂತು.

ವಿಲಿಯಮ್ಸ್ ಅವರ ಈ ಸಿದ್ಧಾಂತ ಜನಸಾಮಾನ್ಯರಿಗೆ ಅರ್ಥವಾಗುವಂತಿದೆ. ಇದರಲ್ಲಿ ಕೆಲಮಟ್ಟಿನ ಹುರುಳೂ ಇದೆ. ಆದರೆ ಈ ಸಿದ್ಧಾಂತ ಕೇವಲ ಊಹಾ

ನೀವು 'ಎಚ್' ಮಾದರಿಯವರೇ?

ವ್ಯಕ್ತಿಗಳಲ್ಲಿ ಬೇರೂರಿದ ಹಗೆತನದ ಭಾವನೆಯನ್ನು ನಿಷ್ಕೃಷ್ಟವಾಗಿ ಅಳೆಯುವುದು, ರಕ್ತದೊತ್ತಡವನ್ನು ಅಳೆಯುವಷ್ಟು ಸರಳವೇನೂ ಅಲ್ಲ. ಆದರೆ, ಈ ಕೆಳಗಿನ ಪ್ರಶ್ನೆಗಳಿಗೆ ನೀವು ನೀಡುವ ಉತ್ತರಗಳು, ನೀವು ಹೃದಯಾಘಾತಕ್ಕೆ ಒಳಗಾಗುವ ಅಪಾಯವಿದೆಯೆ ಎಂದು ಸೂಚಿಸಬಲ್ಲವು.

೧. ಲಿಫ್ಟ್‌ಗಾಗಿ ತುಂಬ ಕಾಲ ಕಾಯಬೇಕಾಗಿ ಬಂದಾಗ ನೀವು ಸಿಡಿಮಿಡಿಗೊಳ್ಳುತ್ತೀರಾ?
೨. ಯಾರನ್ನಾದರೂ ಹೊಡೆಯುವಷ್ಟು ಅಥವಾ ತಳ್ಳುವಷ್ಟು ತೀವ್ರ ಸಿಟ್ಟು ನಿಮಗೆ ಎಂದಾದರೂ ಬರುತ್ತದೆಯೆ?
೩. ಮನಸ್ಸಿಗೆ ಕಿರಿಕಿರಿಯನ್ನುಂಟು ಮಾಡಿದಂತಹ ಹಿಂದಿನ ಯಾವುದಾದರೂ ಘಟನೆಗಳನ್ನು ಮತ್ತೆ ನೆನಪಿಗೆ ತಂದುಕೊಂಡು ನೀವು ಮನಸ್ಸಿನ ಸ್ಥಿಮಿತ ಕಳೆದುಕೊಳ್ಳುತ್ತೀರಾ?
೪. ಕ್ಷೌರಿಕ ನಿಮ್ಮ ಕೂದಲನ್ನು ಹೆಚ್ಚು ಕತ್ತರಿಸಿದ ಎನ್ನಿ; ಆ ಕಾರಣವಾಗಿ ನೀವು ದಿನಗಟ್ಟಲೆ ಚಡಪಡಿಸುತ್ತ ಇರುತ್ತೀರಾ?

೫. ಅಂಗಡಿ ಮಾಲೀಕ ನಿಮಗೆ ಕೊಡಬೇಕಾದಷ್ಟು ಚಿಲ್ಲರೆಯನ್ನು ಕೊಡದೆ ಇದ್ದಾಗ, ನಿಮ್ಮನ್ನು ಮೋಸಗೊಳಿಸಲೆಂಬ ಉದ್ದೇಶದಿಂದಲೇ ಅವನು ಹೀಗೆ ಮಾಡಿದನೆಂದು ನೀವು ಭಾವಿಸುತ್ತೀರಾ ?

೬. ಆಗಾಗ ನಡೆಯುವ ಚಿಕ್ಕಪುಟ್ಟ ಕಹಿ ಘಟನೆಗಳಿಂದ ನೀವು ನೆಮ್ಮದಿ ಕಳೆದುಕೊಳ್ಳುತೀರಾ ?

೭. ವಾಹನಗಳ ದಟ್ಟಣೆಯುಳ್ಳ ಮಾರ್ಗದಲ್ಲಿ ಯಾರಾದರೂ ನಿಮ್ಮನ್ನು ಹಿಂದೆ ಹಾಕಿ ಮುಂದೆ ಸಾಗಿದಾಗ, ಅಸಹನೆಯಿಂದ ನೀವು ನಿಮ್ಮ ವಾಹನದ ದೀಪ ಹಾಕಿ ಹಾರ್ನಿನ ಧ್ವನಿ ಮಾಡುತ್ತೀರಾ ?

೮. ನಿಮ್ಮ ನಿರೀಕ್ಷೆಗೆ ಅನುಗುಣವಾದ ವರ್ತನೆ ಹೊಂದಿಲ್ಲವೆಂಬ ಕಾರಣದಿಂದ, ಆಪ್ತ ಸ್ನೇಹಿತರಿಂದ ದೂರವಾಗುತ್ತೀರಾ ?

೯. ಇತರರ ಅಸಾಮರ್ಥ್ಯದಿಂದ ನಿಮಗೆ ಇರಿಸುಮುರಿಸು ಉಂಟಾಗುತ್ತದೆಯೆ ?

೧೦. ನಿಮ್ಮ ಮಡದಿ ಅಡುಗೆ ಮಾಡುವಾಗ ಯಾವುದಾದರೂ ಆಹಾರಪದಾರ್ಥ ಸೀದುಹೋಗಿದೆಯೆ ಎಂದು ಪರೀಕ್ಷಿಸುತ್ತೀರಾ ?

೧೧. ಸಭೆಯಲ್ಲಿ ಭಾಷಣ ಮಾಡುವವರಲ್ಲಿ ಯಾರಾದರೂ ಸಕಾಲಕ್ಕೆ ಬಾರದಿದ್ದಾಗ, ನೀವು ಕೋಪದಿಂದ ಕೂಡಿದ ಭಾಷಣ ಮಾಡಲು ಮುಂದಾಗುತೀರಾ ?

ಮೂರು ಅಥವಾ ಅದಕ್ಕಿಂತ ಕಡಿಮೆ 'ಹೌದು' ಉತ್ತರಗಳು : ನೀವು ಶಾಂತ ಸ್ವಭಾವದವರು. ನಾಲ್ಕರಿಂದ ಎಂಟರವರೆಗೆ : ನೀವು ಸಾಮಾನ್ಯರಲ್ಲಿ ಒಬ್ಬರು. ಒಂಭತ್ತು ಅಥವಾ ಹೆಚ್ಚು : ನಿಮ್ಮ ಹಗೆತನದ ಭಾವನೆ ಅತ್ಯುನ್ನತ ಮಟ್ಟದಲ್ಲಿದೆ.

—ಡಾ|| ರೆಡ್‌ಫೋರ್ಡ್ ವಿಲಿಯಮ್ಸ್ ಮತ್ತು
ವರ್ಜೀನಿಯಾ ವಿಲಿಯಮ್ಸ್
'ಆ್ಯಂಗರ್ ಕಿಲ್ಸ್' (ಟೈಮ್ಸ್ ಪ್ರಕಟಣೆ)

ಹೋದದ್ದು ಎಂದು ಇತರ ಕೆಲವು ಸಂಶೋಧಕರು ಎಚ್ಚರಿಕೆ ನೀಡುತ್ತಾರೆ. ಮಾದರಿ 'ಎಚ್' ವರ್ತನೆ ಹಾಗೂ ಆರೋಗ್ಯ ಸಮಸ್ಯೆಗಳ ನಡುವೆ ಯಾವ ಸಂಬಂಧವೂ ಇಲ್ಲವೆಂಬುದು ಅನಂತರದ ಅನೇಕ ಅಧ್ಯಯನಗಳಿಂದ ಖಚಿತವಾಗಿ ತಿಳಿದು ಬಂದಿದೆ ಮತ್ತು ಸಿಟ್ಟನ್ನು ನುಂಗಿಕೊಳ್ಳುವುದರಿಂದಲೇ ಆರೋಗ್ಯಕ್ಕೆ ಹಾನಿ ಎಂದು ಅನೇಕ ತಜ್ಞರೂ ಈಗಲೂ ಅಭಿಪ್ರಾಯಪಡುತ್ತಾರೆ. ಇತ್ತೀಚೆಗೆ ಮಾಂಟ್ರೀಲಿನ

ಮ್ಯಾಕ್‌ಗಿಲ್ ವಿಶ್ವವಿದ್ಯಾನಿಲಯದ ಸಂಶೋಧಕರು ಇನ್ನೊಂದು ಅಧ್ಯಯನ ನಡೆಸಿದ್ದು, ಅದರ ಪ್ರಕಾರ, ತಮ್ಮ ನಕಾರಾತ್ಮಕ ಭಾವನೆಗಳನ್ನು ನಿಗ್ರಹಿಸಿಕೊಳ್ಳಲು ಪ್ರಯತ್ನಿಸುವಂಥ, ಮತ್ತು ಸಾಮಾಜಿಕ ಒಪ್ಪಿಗೆ ಪಡೆಯಲು ಸಾಧ್ಯವಾಗುವ ರೀತಿಯಲ್ಲಿ ವರ್ತಿಸಲು ಸದಾ ಹೆಣಗುವಂಥ, ಹಗೆತನದ ಭಾವನೆಯಿರುವ ವ್ಯಕ್ತಿಗಳೇ ಹೃದ್ರೋಗ ಚಿಹ್ನೆಗಳನ್ನು ಹೆಚ್ಚು ಹೆಚ್ಚು ಬೆಳೆಸಿಕೊಳ್ಳುತ್ತಾರೆ.

ಅಪಮಾನಕರವೂ ಅಸಮರ್ಥನೀಯವೂ ಆದ ಟೀಕೆ-ನಿಂದನೆಗಳಿಂದ ಭುಗಿಲೆದ್ದ ಕೋಪವನ್ನು ಬಲವಂತವಾಗಿ ನಿಗ್ರಹಿಸಿಕೊಳ್ಳುವುದು ಅನಾರೋಗ್ಯಕರವೆಂದು ಸಾಂಕ್ರಾಮಿಕ ರೋಗ ಶಾಸ್ತ್ರಜ್ಞ ಮಾರಾ ಜೂಲಿಯಸ್ ಅವರು ಮಿಚಿಗನ್ ವಿಶ್ವವಿದ್ಯಾನಿಲಯದಲ್ಲಿ ಈಚೆಗೆ ನಡೆಸಿದ ಅಧ್ಯಯನವೊಂದರಿಂದ ತಿಳಿದುಬಂದಿದೆ. "ನಿಮ್ಮನ್ನು ಯಾರಾದರೂ ಮೂರ್ಖ ಎಂದು ಟೀಕಿಸಿದಾಗ ಸಿಟ್ಟಾಗದಿರುವುದೇ ಅನಾರೋಗ್ಯಕರ"—ಎನ್ನುತ್ತಾರೆ ಜೂಲಿಯಸ್.

ಅಭಿಪ್ರಾಯ ಭೇದಗಳೇನೇ ಇರಲಿ, ಒಂದು ವಿಷಯವನ್ನಂತೂ ತಜ್ಞರು ಒಪ್ಪುತ್ತಾರೆ: ಮಾನವನ ಮೂಲಭೂತ ಮನಃಪ್ರವೃತ್ತಿಗಳಲ್ಲೊಂದಾದ ಸಿಟ್ಟನ್ನು ಅರ್ಥಮಾಡಿಕೊಂಡು, ಅದರೊಡನೆ ವಿವೇಕದಿಂದ ನಿರ್ವಹಿಸುವುದೇ ಅತಿಮುಖ್ಯ. ಜೂಲಿಯಸ್‌ರ ಅಭಿಪ್ರಾಯದಂತೆ, ಸಿಟ್ಟಿಗೆ ಕಾರಣವಾಗುವಂತಹ ಸಮಸ್ಯೆಗಳ ಪರಿಹಾರದತ್ತ ದೃಷ್ಟಿ ಹರಿಸುವುದೇ ಅತ್ಯಂತ ಆರೋಗ್ಯಕರವಾಗಿರುವ ಮಾರ್ಗ.

೬೦ ಹಾಗೂ ೮೦ರ ದಶಕಗಳಲ್ಲಿ, ಸಾಮಾಜಿಕ ಸಾಂಕ್ರಾಮಿಕ ರೋಗತಜ್ಞ ಅರ್ನೆಸ್ಟ್ ಹರ್ಬರ್ಗ್ ಅವರು, ವಿವಿಧ ಕ್ಷೇತ್ರಗಳಲ್ಲಿ ದುಡಿಯುವ ಜನರ ರಕ್ತದೊತ್ತಡ ಅಳೆಯುವುದನ್ನೇ ಮುಖ್ಯ ಗುರಿಯಾಗಿಟ್ಟುಕೊಂಡ ಕೆಲವು ಅಧ್ಯಯನಗಳನ್ನು ನಡೆಸಿದರು. ಅಂಥ ಮುಖ್ಯ ಕಾರಣ ಯಾವುದೂ ಇಲ್ಲದೆಯೇ, ಕಛೇರಿಯ ಮೇಲಧಿಕಾರಿಗಳ ಕೋಪ–ಆಗ್ರಹಗಳಿಗೆ ತುತ್ತಾದಾಗ ಹೇಗೆ ಪ್ರತಿಕ್ರಿಯಿಸುತ್ತೀರಿ ಎಂದು ಇವೆರಡೂ ಅಧ್ಯಯನಗಳಲ್ಲಿ ಅವರನ್ನು ಪ್ರಶ್ನಿಸಲಾಯಿತು. ಕೆಲವು ಜನರು ಯಾವಾಗಲೂ ಕಡಮೆ ರಕ್ತದೊತ್ತಡ ಹೊಂದಿರುತ್ತಾರೆ; ಇವರು ಸಿಟ್ಟನ್ನು ತೋರಿಸುವುದೂ ಇಲ್ಲ, ನುಂಗಿಕೊಳ್ಳುವುದೂ ಇಲ್ಲ. ಬದಲಾಗಿ ಬಾಸ್ ಕಛೇರಿಗೆ ತೆರಳಿ ಸಮಸ್ಯೆಗಳ ಬಗ್ಗೆ ಚರ್ಚಿಸುತ್ತಾರೆ.

ಹೀಗೆ ನಿರುದ್ವೇಗಚಿತ್ತದೊಡನೆ ಸಮಸ್ಯೆಗಳ ಪರಿಹಾರ ಕುರಿತಂತೆ, ಸಂಬಂಧಪಟ್ಟವರೊಂದಿಗೆ ಚರ್ಚೆ ನಡೆಸುವುದು ಉತ್ತಮ ವಿಧಾನ ಎಂಬುದು ನಿರ್ವಹಣ ತಜ್ಞರ ಅಭಿಪ್ರಾಯ. "ಕಛೇರಿಯಲ್ಲಿ ಕೋಪವನ್ನು ವ್ಯಕ್ತಪಡಿಸುವುದರಿಂದ ಸಾಮಾನ್ಯವಾಗಿ ದುಷ್ಪರಿಣಾಮಗಳೇ ಉಂಟಾಗುತ್ತವೆ" ಎನ್ನುತ್ತಾರೆ ಬಾಸ್ಟನ್‌ನ ಮ್ಯಾನೇಜ್‌ಮೆಂಟ್ ಸಮಾಲೋಚನ ಸಂಸ್ಥೆಯೊಂದರ ಅಧ್ಯಕ್ಷರಾಗಿರುವ ಮನೋವಿಜ್ಞಾನಿ ಪ್ಯಾಟ್ರಿಸಿಯಾ ಅರ್ರೆಡೊಂಡೊ.

ಕೆಲವೊಮ್ಮೆ ಕೆಲಸಮಾಡುತ್ತಿರವ ಸಂಸ್ಥೆ ಅಥವಾ ಕಛೇರಿಯ ವಾತಾವರಣವೇ ಕೋಪ–ಉದ್ವೇಗ–ಅಸಹನೆಗಳಿಗೆ ಕಾರಣವಾಗುವುದುಂಟು. ಆದರೂ ನೌಕರರು ಭಾವಾವೇಶಕ್ಕೆ ಒಳಗಾಗಿ ವರ್ತಿಸುವುದು ಸಮಸ್ಯೆಗೆ ಪರಿಹಾರ

ವಾಗುವುದಿಲ್ಲ. ಮೇಲಧಿಕಾರಿಗಳ ಬೆನ್ನ ಹಿಂದೆ ಅವರನ್ನು ಟೀಕಿಸುವುದು ಅಥವಾ ಕೆಲಸದಲ್ಲಿ ಆಲಸ್ಯತಾಳುವುದು ಇಲ್ಲವೆ ಕೆಲಸ ಮಾಡದಿರುವುದು—ಇವೇ ಮೊದಲಾದ ಆಕ್ರಮಣಕಾರಿ ಎನಿಸದ ವರ್ತನೆಗಳಲ್ಲಿ ನೌಕರರ ಕೋಪ ತೋರ್ಪಡಬಹುದು. ಇಂಥ ಸ್ವಭಾವದ ವ್ಯಕ್ತಿಗಳಿಗೂ ಅನಾರೋಗ್ಯದ ಸಮಸ್ಯೆ ತಪ್ಪಿದ್ದಲ್ಲ. ಇವರು ಆಗಾಗ ತಲೆನೋವು, ಬೆನ್ನುನೋವು ಮುಂತಾದ ಬೇನೆಗಳಿಗೆ ಬಲಿಯಾಗುತ್ತಾರೆ ಅಥವಾ ಖಿನ್ನಮನಸ್ಕರಾಗಿ ಜೀವನೋತ್ಸಾಹವನ್ನು ಕಳೆದುಕೊಳ್ಳುತ್ತಾರೆ.

ಪ್ರತಿಯೊಂದೂ ಚಿಕ್ಕಪುಟ್ಟ ವಿಚಾರಗಳಿಗೆ ಅತಿಮಹತ್ವ ನೀಡಿ ಭಾವೋದ್ವೇಗಕ್ಕೆ ಒಳಗಾಗುವುದರ ಬದಲು, ಆಗಬೇಕಾದ ಕೆಲಸವನ್ನು ಪೂರ್ತಿಗೊಳಿಸುವುದರತ್ತ ಹೆಚ್ಚು ಲಕ್ಷ್ಯ ಹರಿಸುವುದು ಮುಖ್ಯ ಎನ್ನುತ್ತಾರೆ ಮನೋವಿಜ್ಞಾನಿ ಹ್ಯಾರಿಯಟ್ ಲರ್ನರ್. ಜೀವನದಲ್ಲಿ ಎದುರಾಗುವ ಚಿಕ್ಕಪುಟ್ಟ ಸಮಸ್ಯೆಗಳನ್ನೆಲ್ಲ ಎತ್ತಿ ಹೇಳದಂತೆ ಅವರು ಸೂಚಿಸುತ್ತಾರೆ. ಅಂತಹ ಸಮಸ್ಯೆಗಳಿಗೆ ಉಪಾಯದಿಂದ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಬೇಕು ಅಷ್ಟೆ.

ದಾಂಪತ್ಯದಲ್ಲಿ ಸಿಟ್ಟಿನ ಜೊತೆ ಏಗುವುದು ಹೇಗೆ? ಮೊದಲೇ ಹೇಳಿದಂತೆ, ಸಿಟ್ಟು ಮಾನವನ ಮೂಲಭೂತ ಮನಃಪ್ರವೃತ್ತಿಗಳಲ್ಲಿ ಒಂದಾಗಿರುವುದರಿಂದ, ಪತಿ ಅಥವಾ ಪತ್ನಿ ಆಗಾಗ ಕೋಪಗೊಳ್ಳುವುದು ಸಹಜ. ಅದನ್ನು ಅವರು ಹೇಗೆ ವ್ಯಕ್ತಪಡಿಸುತ್ತಾರೆ ಎಂಬುದನ್ನು ಅವಲಂಬಿಸಿಯೇ ದಾಂಪತ್ಯದ ಸೋಲು-ಗೆಲವುಗಳು ನಿರ್ಧಾರವಾಗುತ್ತವೆ. ವಾಸ್ತವವಾಗಿ ಹೇಳುವುದಾದರೆ, ಆಗಾಗ ಭಿನ್ನಾಭಿಪ್ರಾಯ ತಾಳಿ, ಪರಸ್ಪರ ಸಿಟ್ಟಾಗುವಂತಹ ಜಗಳಗಂಟಿ ದಂಪತಿಗಳ ವೈವಾಹಿಕ ಜೀವನವೇ ಹೆಚ್ಚು ದೃಢವಾಗಿ, ಹೆಚ್ಚು ಸ್ಥಿರವಾಗಿ ಇರುತ್ತದೆ.

ವಾಷಿಂಗ್‌ಟನ್ ವಿಶ್ವವಿದ್ಯಾನಿಲಯದಲ್ಲಿ ಮನೋವಿಜ್ಞಾನ ಪ್ರಾಧ್ಯಾಪಕರಾಗಿರುವ ಜಾನ್ ಗಾಟ್ಮನ್ ಅವರು, ಹತ್ತು ವರ್ಷಗಳ ದೀರ್ಘಾವಧಿ ನಡೆಸಿದ ಅಧ್ಯಯನವೊಂದರಲ್ಲಿ, ತೀರಾ ಲಘು ಮನೋಭಾವದ ಉತ್ಸಾಹಿ ದಂಪತಿಗಳು, ಪರಸ್ಪರರನ್ನು ದೂಷಿಸದೆ ಅಥವಾ ಅಪಮಾನಗೊಳಿಸದೆ ಇರುವಷ್ಟು ಕಾಲ, ತುಂಬ ಯಶಸ್ವಿ ದಾಂಪತ್ಯ ಸಂಬಂಧ ಹೊಂದಿರುತ್ತಾರೆ ಎಂದು ಕಂಡುಹಿಡಿದಿದ್ದಾರೆ. ಇಲ್ಲಿ ಲಘು ಮನೋಭಾವ ಎಂದರೆ, ಸಿಟ್ಟುಬಂದಾಗಲೂ ಬುದ್ಧಿಸ್ತಿಮಿತ ಕಳೆದುಕೊಳ್ಳದೆ ಇರುವುದು. ಇಂಥ ಯಶಸ್ವಿ ದಾಂಪತ್ಯದಲ್ಲಿ, ಆತಂಕ, ಕಾತರ, ಕೋಪಾಭಿವ್ಯಕ್ತಿ—ಇವೆಲ್ಲ ಇದ್ದರೂ ಪ್ರೀತಿ ಇರುತ್ತದೆ, ನಲಿವಿರುತ್ತದೆ; ಉತ್ಸಾಹ-ಲವಲವಿಕೆಗಳಿರುತ್ತವೆ. ಇವಕ್ಕಿಂತಲೂ ಹೆಚ್ಚಾಗಿ, ಪತಿಪತ್ನಿಯರ ನಡುವಣ ಕೊಂಡಿ ಬಿಗಯಾಗಿರುತ್ತದೆ.

ಮನೋವಿಜ್ಞಾನಿ ಹೊವಾರ್ಡ್ ಮಾರ್ಕ್‌ಮನ್ ಕೂಡ ಗಾಟ್ಮನ್ ಅವರ ಅಭಿಪ್ರಾಯವನ್ನು ಒಪ್ಪುತ್ತಾರೆ. ದಾಂಪತ್ಯ ಸುಭದ್ರವಾಗಿ ಉಳಿಯುವುದಕ್ಕೆ ಅಥವಾ ವಿಚ್ಛೇದನದ ಸಂದರ್ಭ ಒದಗಿಬರುವುದಕ್ಕೆ, ಪತಿ-ಪತ್ನಿಯರ ನಡುವಿರುವ ಪರಸ್ಪರ ತಿಳಿವಳಿಕೆಯ ಪ್ರಮಾಣವೇ ಕಾರಣ. ಒಬ್ಬರು ಇನ್ನೊಬ್ಬರನ್ನು ಅರ್ಥಮಾಡಿಕೊಳ್ಳುವುದು ಕಡಿಮೆಯಾದಂತೆ ದಾಂಪತ್ಯ ವಿರಸ ಹೆಚ್ಚಾಗುತ್ತದೆ. ದಯೆ-ಅನುಕಂಪ

ಗಳಿಂದ ಕೂಡಿದ ಇಪ್ಪತ್ತರಷ್ಟು ನೆರವಿನ ಕಾರ್ಯಗಳನ್ನೂ, ಅಪಮಾನಗೊಳಿಸುವಂತಹ ಒಂದೇ ಒಂದು ಕೆಲಸ ಮರೆತುಹೋಗುವಂತೆ ಮಾಡಬಲ್ಲದು ಎನ್ನುತ್ತಾರೆ 'ದಿ ಕ್ಯಾನ್ ವರ್ಕ್ ಇಟ್ ಔಟ್' ಎಂಬ ತಮ್ಮ ಗ್ರಂಥದಲ್ಲಿ ಹೊವಾರ್ಡ್ ಮಾರ್ಕ್ ಮೆನ್.

ಕಛೇರಿಯಲ್ಲಿಯೆ ಆಗಲಿ, ಮನೆಯಲ್ಲಿಯೆ ಆಗಲಿ, ತೀವ್ರ ತಲ್ಲಣ ಅಥವಾ ತೀವ್ರ ನಿರಾಶೆಯಂತೆಯೇ, ತೀವ್ರ ಕೋಪವೂ ಅನಾರೋಗ್ಯಕರವಾಗಿರುತ್ತದೆ, ನಿಮಗೆ ಸಿಟ್ಟು ಬಂದಾಗ, ಉಸಿರನ್ನು ಆಳವಾಗಿ ಎಳೆದುಕೊಂಡು, ನಿಮಗೆ ನೀವು ಈ ಕೆಳಗಿನ ಪ್ರಶ್ನೆಗಳನ್ನು ಕೇಳಿಕೊಳ್ಳಿ:

ಸನ್ನಿವೇಶ ಅಷ್ಟೊಂದು ಗಂಭೀರವಾದುದೇ?

ನಾನು ಸಿಟ್ಟಾಗುವುದು ಸಮರ್ಥನೀಯವೇ?

ಸಿಟ್ಟಾಗುವುದರಿಂದ ಸನ್ನಿವೇಶ ಸುಧಾರಿಸುವ ಸಂಭವವಿದೆಯೇ?

ಈ ಪ್ರಶ್ನೆಗಳಲ್ಲಿ ಯಾವುದೇ ಒಂದರ ಉತ್ತರ 'ಅಲ್ಲ' ಅಥವಾ 'ಇಲ್ಲ' ಎಂದಾದ ಪಕ್ಷದಲ್ಲಿ, ಸಿಟ್ಟನ್ನು ತಡೆದುಕೊಳ್ಳಲು ಪ್ರಯತ್ನಿಸಿ. ಇರುವ ಸ್ಥಳವನ್ನು ಬಿಟ್ಟು ವಾಕ್ ಹೋಗಿ, ಯಾವುದಾದರೂ ಸಂಗೀತ ಕೇಳಿ ಅಥವಾ ಕಣ್ಣುಗಳನ್ನು ಮುಚ್ಚಿಕೊಂಡು ಸ್ವಲ್ಪ ಕಾಲ ಸುಮ್ಮನೆ ಕುಳಿತುಕೊಳ್ಳಿ.

ಆದರೆ ನೆನಪಿರಲಿ. ಸಿಟ್ಟನ್ನು ಸರ್ವಥಾ ನಿರ್ಲಕ್ಷಿಸಬೇಡಿ. "ದೈಹಿಕ ಯಾತನೆ ಅಥವಾ ಕಷ್ಟ–ಸಂಕಟಗಳನ್ನು ಸಹಿಸಲು ಸಿಟ್ಟು ನಿಮ್ಮನ್ನು ಪ್ರೇರೇಪಿಸುವ ರೀತಿಯಲ್ಲಿಯೇ, ಸಿಟ್ಟಿನಿಂದ ಉಂಟಾದ ನೋವು, ನಿಮ್ಮ ಘನತೆ–ಪ್ರತಿಷ್ಠೆಗಳನ್ನು ಉಳಿಸಿ ಬೆಳೆಸಿಕೊಳ್ಳಲು ನೆರವಾಗುತ್ತದೆ" ಎನ್ನುತ್ತಾರೆ ಹ್ಯಾರಿಯಟ್ ಲರ್ನರ್. "ನಿಜವಾದ ಸವಾಲು ಅಡಗಿರುವುದು ಸಿಟ್ಟಾಗದೆ ಇರುವುದರಲ್ಲಿ ಅಥವಾ ಸಿಟ್ಟನ್ನು ನಿಗ್ರಹಿಸುವುದರಲ್ಲಿ ಅಲ್ಲ; ಬದಲಾಗಿ ರಚನಾತ್ಮಕ ಪರಿವರ್ತನೆಯ ಸಾಧನವಾಗಿ ಅದನ್ನು ಬಳಸಿಕೊಳ್ಳುವುದರಲ್ಲಿ."

ಅಸತ್ಯವಾಡುವ ಬಾಯಿಯನ್ನು ಮನುಷ್ಯನಿಗೆ ಎಂದೆಂದೂ ಕೊಡಬೇಡ ದೇವಾ.

ಜನನಕ್ಕಿಂತಲೂ ನನಗೆ ಮರಣವು ಮೆಚ್ಚುಗೆಯದಾಗಿರುವುದು. ಮರಣಕ್ಕಾಗಿ ನಾನು ಅಂಜುವುದಿಲ್ಲ. ನಗೆಗಿಂತಲೂ ದುಃಖವು ನನಗೆ ಮೆಚ್ಚುಗೆ ಪಡೆಯುವುದು, ನೋವಿಗಾಗಿ ನಾನು ಹಿಂಜರಿಯುವುದಿಲ್ಲ.

—ಏಸುಕ್ರಿಸ್ತ.

ಪುಸ್ತಕ ಪರಿಚಯ

ನೆನಪಿನ ಬುತ್ತಿ - ಒಂದು ಮೆಲುಕು :—ದೇಜಗೌ ಟ್ರಸ್ಟ್, ವಿಶ್ವಚೇತನ ಕಲಾನಿಲಯ, ಜಯಲಕ್ಷ್ಮೀಪುರ, ಮೈಸೂರು-೫೭೦೦೧೨. ೧೯೯೬, ಡೆಮಿ ಅಷ್ಟದಳ ೩೦೦ ಪುಟಗಳು; **ಬೆಲೆ :** ೫೦ ರೂ.

ಎಪ್ಪತ್ತಾರರ ಎತ್ತರದಲ್ಲಿ ನಿಂತ, ೧೯೯೪, ಪ್ರೊಫೆಸರ್ ದೇ. ಜವರೇಗೌಡರು(ದೇಜಗೌ) ನಡೆದು ಬಂದ ಹಾದಿಯನ್ನು ಸಿಂಹಾವಲೋಕಿಸಿದಾಗ ಕಂಡ, ಅಂದರೆ ನೆನಪಿಗೆ ಬಂದ, ಕೆಲವು ಘಟನೆಗಳನ್ನು "ನೆನಪಿನ ಬುತ್ತಿ"ಯಲ್ಲಿ ಪ್ರಕಟಿಸಿದ್ದಾರೆ. "ಅಗಲುಗಳು ನೆನಪಿಗೆ ಬಂದ ಕ್ರಮದಲ್ಲಿ ಬರೆದಿರುವುದರಿಂದ ಕಾಲಾನುಕ್ರಮಕ್ಕೆ ಅಡ್ಡಿಯಾಗಿದೆ. ಇವು ಒಂದೊಂದೂ ಸ್ವತಂತ್ರವಾದ್ದರಿಂದ ಆ ಅಡ್ಡಿಯೂ ನಿವಾರಣೆಯಾದಂತಿದೆ."

ಸ್ವಂತ ದೌರ್ಬಲ್ಯಗಳ (?) ಸಾರ್ವಜನಿಕ ಪ್ರಕಟಣೆ ತಮ್ಮ ಸಂಕಲ್ಪ ಎಂದು ಪೀಠಿಕೆಯಲ್ಲಿ ನಿವೇದಿಸಿದ್ದಾರೆ. ಈ ಉನ್ನತ ನೈತಿಕ ಪ್ರಜ್ಞೆ ಮತ್ತು ಇದರಿಂದ ಸಿದ್ಧಿಸುವ ಆತ್ಮಭರವಸೆ ಮತ್ತು ನಿರ್ಲಿಪ್ತತೆ "ನೆನಪಿನ ಬುತ್ತಿ"ಯ ಜೀವಸತ್ತ್ವ. ಈ ಪಾರದರ್ಶಕ ಸ್ವಚ್ಛ ನಿರೂಪಣೆಯನ್ನು ಓದಿ ಮುಗಿಸಿದಾಗ ನನ್ನ ಮನದಲ್ಲಿ ಮೂಡಿದ ಭಾವನೆಗಳಿವು: ಬಹುಶ್ರುತತೆ, ಸಂಕಲ್ಪಶುದ್ಧತೆ, ಕ್ರಿಯಾಶೀಲತೆ, ಪ್ರಾಮಾಣಿಕತೆ ಮತ್ತು ಛಲಾವಿಷ್ಟತೆ ಎಂಬ ಪಂಚಗುಣಸಂಪನ್ನ ಔದಾರ್ಯ ಶ್ರೀಮಂತ, ಕಾಲನ ನಿರಂತರ ಗತಿಶೀಲ ಮರಳ ಹೊನಲಿನಲ್ಲಿ ತನ್ನ ಸ್ಥಿರ ಛಾಪು ಒತ್ತುವುದು ಖರೆ. ಮರಳ ಹೊನಲಿನಲ್ಲಿ ಛಾಪು? ಬೇಸಗೆಯ ನಡುಹಗಲ ಧಗೆಯಲ್ಲಿ ಕಡಲ ಕಿನಾರೆ ಅಡ್ಡ ನಡೆದಾಡಿದವರಿಗೆ ತಿಳಿಯುತ್ತದೆ ಯಾವ ದೈತ್ಯ ದಾಪು ಮಾತ್ರ ಈ ಬಗೆಯ ಚಿರ ಛಾಪು ಪಡಿಮೂಡಿಸಬಲ್ಲದು ಎಂಬ ಸೂಕ್ಷ್ಮ. ಇಂಥ ಒಬ್ಬ ವ್ಯಕ್ತಿಯ ಸಮಸ್ತ ಕೃತಿಗಳೂ—ಸಾಕ್ಷಾತ್ ಜೀವನವೇ—ಈತನ ವ್ಯಕ್ತಿತ್ವದ ಅಭಿವ್ಯಕ್ತಿಗಳು. ಇವೇ ಆ ದೈತ್ಯದಾಪುಗಳು. ಈ ಕಾರಣದಿಂದ ಈತನ ಸಮಗ್ರ ಜೀವನ ವೃತ್ತಾಂತ ಇತರರಿಗೆ ಸಮಕಾಲೀನವಾಗಿಯೂ ಉತ್ತರೋತ್ತರವಾಗಿಯೂ ಕುತೂಹಲಪ್ರೇರಕವಾಗುತ್ತದೆ: ಈ ವಿಗ್ರಹದ ಶಿಲೆ ಯಾವುದು, ಕಡೆದ ಶಿಲ್ಪಿ ಯಾರು, ಹೊಡೆದ ಚಾಣವೆಲ್ಲಿ, ಪ್ರಕಟವಾಗುವ ಕಲೆ ಏನು ಮತ್ತು ಇದು ಇಂದು ಪ್ರಸ್ತುತ ಹೇಗೆ?

ಪ್ರತಿಯೊಬ್ಬ ಮಹಾಪುರುಷನೂ ಮೂಲತಃ ಮಾನವ ಶಿಶುವಾಗಿಯೇ ಮೈದಳೆದು, ತಂದೆ ತಾಯಿ ಮತ್ತು ಪರಿಸರದಿಂದ ಸತ್ತ್ವ ಹೀರಿ ಬೆಳೆದು, ಸ್ವಪ್ರ

ಧೆಯ ಮೂಸೆಯಲ್ಲಿ ಮಹಾತ್ಮತ್ವಕ್ಕೆ ಉತ್ತಾರಣೆಗೊಳ್ಳುವುದು ಸೃಷ್ಟಿನಿಯಮ. ಋಜು ಅಂತಸ್ಸತ್ತ್ವದ ಈ ಕ್ರಮಶಃ ಅನಾವರಣವನ್ನು, ಮತಾಂಧರ ಹೊರತಾಗಿ, ಎಲ್ಲರೂ ಕಾಣುತ್ತಾರೆ ಮತ್ತು ಯಥಾಮತಿ ಯಥಾಶಕ್ತಿ ಉಲ್ಲಾಸ ಮತ್ತು ಚಾಲನೆ ಗಳಿಸುತ್ತಾರೆ. ಎಂದೇ ಜನರಿಗೆ ನಿಃಸ್ವಾರ್ಥಸಾಧಕರ ಮಾತಾ-ಪಿತೃ-ಪರಿಸರ-ಸ್ವಪ್ರತಿಭೆ ಅನ್ಯೋನ್ಯತೆಯಲ್ಲಿ ಅಧಿಕಾಸಕ್ತಿ. ಸಾಕ್ರಟೀಸ್ (ಸತ್ಯ), ಬುದ್ಧ (ಕಾರುಣ್ಯ), ಬಸವಣ್ಣ (ನ್ಯಾಯಪರತೆ), ಐನ್‌ಸ್ಟೈನ್ (ಮಾನವೀಯತೆ), ಗಾಂಧಿ (ಅಂತಃಶಕ್ತಿ) ಮೊದಲಾದವರು ಸದಾ ಕಾಲ ಮೌಲ್ಯ ರೂಪಿಕೆಗಳಾಗಿ ನಮಗೆ ಮಾರ್ಗದರ್ಶಕರೂ ಸ್ಫೂರ್ತಿಸೆಲೆಗಳೂ ಆಗಿರುವುದು ಇವರಲ್ಲಿ ಮಾನವತ್ವ ಮಹಾತ್ಮತ್ವಕ್ಕೆ ಸೀಮೋಲ್ಲಂಘನೆ ಗೈದಿರುವುದರಿಂದ ಮತ್ತು ಇದು ನಮಗೆ ಎದ್ದು ಕಾಣುವುದರಿಂದ.

೧೯೧೮ನೆಯ ಇಸವಿ ಇತಿಹಾಸವನ್ನು ಸೃಷ್ಟಿಸಿದೆ: ಒಂದನೆಯ ಮಹಾಯುದ್ಧ ಆ ವರ್ಷ ಕೊನೆಗಂಡಿತು. ಅದೇ ಅಂದಾಜಿಗೆ ರಾಜರ ಮೈಸೂರು ಸಂಸ್ಥಾನದ ಹಳ್ಳಿಯೊಂದರಲ್ಲಿ ಬಡ ರೈತ ತಂದೆ ತಾಯಿಯರ ಮಗನಾಗಿ ಹುಟ್ಟಿದ ಶಿಶು ಮುಂದೊಂದು ದಿನ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯೋ ಆಗಬಹುದು, ಶಿಕ್ಷಣವೇತ್ತನಾಗಬಹುದು, ಕನ್ನಡಡಿಂಡಿಮ-ಲೇಖಕ-ಸಂಘಟಕ-ಸುದೂರದರ್ಶಕನಾಗಿ ಅರಳಿ ಪರಿಮಳಿಸಬಹುದೆಂದು ಅಂದು ಯಾರೂ ಊಹಿಸಿರಲಾರರು. ಜಾತಕ? ಹಳ್ಳಿಯ ಹಸುರಿನಲ್ಲಿ ಹುಟ್ಟಿಬೆಳೆದು ಅಲ್ಲಿಯೇ ಮಣ್ಣಾಗಿ ಹೋಗುವ, "ಪೆಸರಿಲ್ಲದ ಹೆಸರಿ"ರುವ ರೈತ ಕುರಿಗಾಹಿಗೆ ನಾಗರಿಕ ಮಂದಿಯ ಈ ಜಾತಕವೆಂದೂ ಹುಟ್ಟದು. ತನ್ನ ಜಾತಕವನ್ನು ತಾನೇ ಬರೆಯುವ ಆತ್ಮವಿಶ್ವಾಸಿ ಈತ.

ಪ್ರಸಕ್ತ ಪುಸ್ತಕ ಉಣಬಡಿಸುವುದು ಬುತ್ತಿ ಊಟ: "ಹಸಿವಾದರೆ ಊರೊಳಗೆ ಭಿಕ್ಷಾನ್ನಗಳುಂಟು!" ಸಮೀಚೀನ ಭೋಜನ ಬಯಸಿದರೆ ದೇಜಗೌ ಅವರ "ಹೋರಾಟದ ಬದುಕು" ಇದರ ಎರಡು ಸಂಪುಟಗಳು ಅದನ್ನು ಅಕೃತ್ರಿಮ ಪ್ರೇಮದಿಂದ ಮತ್ತು ನಿಷ್ಠುರ ಪ್ರಾಮಾಣಿಕತೆಯಿಂದ ಊಡುತ್ತವೆ. "ನೆನಪಿನ ಬುತ್ತಿ"ಯ ಆಧಾರ ಶ್ರುತಿ: ಹಸಿವಾದಾಗ ಬುತ್ತಿ ಬಿಚ್ಚಿ ತುತ್ತು ಎತ್ತಿ ಸವಿದು ಚಪ್ಪರಿಸುವ ಸೊಗಸು. ಮೊದಲ ತುತ್ತು "ನಾನು-ಶಿಕ್ಷಣ"ದಿಂದ ತೊಡಗಿ ಕೊನೆಯ ತುತ್ತು "ಅವಳು"ವರೆಗಿನ ಒಟ್ಟು ೨೪ ತುತ್ತುಗಳನ್ನು ಉಂಡು ಮುಗಿಸುವಾಗ ಓದುಗನಿಗೆ ಲಭಿಸುವ ಜೀವನದರ್ಶನವೇನು? ಒಬ್ಬ ನಿಷ್ಠುರ ಸತ್ಯನಿಷ್ಠ ಭಕ್ತನ ಜೊತೆ ವಿಶ್ವಸಂಚಾರಾನುಭವ, ಆತ್ಮೀಯ ಸಲ್ಲಾಪ. ಆದರೆ ಈ ಭಕ್ತ ನಮ್ಮ ಅನುಭವದ ಸಾಚೆಗೆ ಹೊಂದುವ ಸಾಂಪ್ರದಾಯಿಕನಲ್ಲ, ಪ್ರತಿಯೊಂದು ಘಟನೆಯಲ್ಲಿಯೂ ನಿರ್ದಾಕ್ಷಿಣ್ಯವಾಗಿಯೂ ಖಚಿತವಾಗಿಯೂ ಸ್ವಂತ ನಿಲವನ್ನು ವ್ಯಕ್ತಪಡಿಸುವ ಜ್ಞಾನ ಪರಿವ್ರಾಜಕ.

"ಇಯಾಸ್ (ಐಎಎಸ್) ಅಧಿಕಾರಿಗಳ ಕೈಗೆ ಸಿಕ್ಕಿದ ಯಾವ ಉತ್ತಮ ವ್ಯವಸ್ಥೆಯಾದರೂ ಕಟುಕನ ಕೈಗೆ ಸಿಕ್ಕಿದ ಕುರಿಯಂತಾಗುತ್ತದೆ" (ಪುಟ ೧೬). "ಭವಿಷ್ಯಜ್ಞರಿಗಾಗಲಿ ಜ್ಯೋತಿಷಿಗಳಿಗಾಗಲಿ ಹಸ್ತಸಾಮುದ್ರಿಕರಿಗಾಗಲಿ ಅಥವಾ ಬೇರೆ ಯಾರಿಗೇ ಆಗಲಿ ನಾನು ಕೈಕೊಟ್ಟದ್ದು ಅದೇ ಪ್ರಥಮ, ಅದೇ ಅಂತಿಮ"

(ಪುಟ ೨೦). "ನಮ್ಮ ಸದ್ಗುಣಗಳಿಂತೊ ಅಂತೆಯೇ ದುರ್ಗುಣ ದೌರ್ಬಲ್ಯಗಳಿಗೆ ಹಿರಿಯರೂ ಕಾರಣ" (ಪುಟ ೨೮). "ನನ್ನ ಪಾಲಿಗೆ ಅಶ್ರು ಧಾರೆ ಗಂಗಾಸ್ನಾನ" (ಪುಟ ೩೦). "ಸ್ವಪ್ರಶಂಸೆ ಗರ್ವಿಗಳ, ಆತ್ಮವಿಶ್ವಾಸವಿಲ್ಲದವರ, ನಿರಾಶಾಪೀಡಿತರ ವಿದ್ಯುದುದ್ಯಾನ" (ಪುಟ ೫೧). ಈ ಯಾದಿಯನ್ನು ವಿಸ್ತರಿಸಲು ಗ್ರಂಥದಲ್ಲಿ ಸಮೃದ್ಧ ಮೌಲ್ಯ ಪುಂಜಗಳು ದೊರೆಯುವುವಾದರೂ ಪ್ರಸಕ್ತ ಲೇಖನ ಅತಿ ಲಂಬಿತವಾದೀತೆಂದು ಬಗೆದು ಕೊನೆಯ ಒಂದು ವಾಕ್ಯವನ್ನು ಮಾತ್ರ ಇಲ್ಲಿ ಉದ್ಧರಿಸುತ್ತೇನೆ: "ಅವಳು ಅವಳಲ್ಲ; ಅವಳಿಗೆ ಹೆಸರೂ ಇಲ್ಲ; ಆದರೂ ಅವಳು ಕುಲಸ್ತ್ರೀಯರ ಪ್ರತಿನಿಧಿ, ಮಾದರಿ; ಗೃಹತಪಸ್ವಿನಿ. 'ಪ್ರಖ್ಯಾತಿಯು ಪಡೆಯುವೊಂದು ಗಂಡಸರಾಕುತ್ತ' ಅವಳಿಗಿಲ್ಲ" (ಪುಟ ೨೯೨).

ಕನ್ನಡದ ಹರಿಕಾರರಾಗಿ, ಯೋಧರಾಗಿ ಮತ್ತು ಅಧ್ವರ್ಯುವಾಗಿ ದೇಜಗೌ ತಳೆದಿರುವ ನಿಲವುಗಳು ಮತ್ತು ಮಾಡಿರುವ ಕಾರ್ಯ "ಏಕೀಕರಣ ಮತ್ತು ನಾನು," "ಬರಹ ನನ್ನ ಬದುಕಿನ ಅಣಿ ಭಾಗ" ('ಅಣಿ' ಪದದ ಮೊದಲ ಅರ್ಥ 'ಶ್ರೇಷ್ಠ') ಅಧ್ಯಾಯಗಳಲ್ಲಿ ಮೂಡಿವೆ: "ಜಾತಿಭೇದ ಮತಭೇದವನ್ನು ಮರೆತು ನಾಡಿನ ಸ್ತ್ರೀ ಪುರುಷರೆಲ್ಲರೂ ಏಕೀಭವಿಸಿ ಪ್ರಾಮಾಣಿಕತೆಯಿಂದ ದುಡಿಯುವುದಾದರೆ ಮಾತ್ರ ಕರ್ನಾಟಕ ಭರತಖಂಡದಲ್ಲಿ ಮಾತ್ರವಲ್ಲ, ಜಗತ್ತಿನಲ್ಲಿಯೇ ಸಂಪತ್ಸಮೃದ್ಧವಾದ ಪ್ರದೇಶವಾಗುತ್ತದೆ; ಅಗ ಮಾತ್ರ ಏಕೀಕರಣ ಸಾರ್ಥಕವಾಯಿತೆಂದು ಹೇಳುವಂತಾಗುತ್ತದೆ" (ಪುಟ ೧೫೩). ನೋವಿನ ಮಾತು. ಸದ್ಯ (೧೯೯೬) ಏನೂ ಈ ವೇದನೆ ಉಪಶಮನವಾಗುವ ಲಕ್ಷಣಗಳಿಲ್ಲ.

ಬದುಕು-ಬರಹ ಎರಡೂ ದೇಜಗೌ ಅವರನ್ನು ಪೂರಕ ಪೋಷಕವಾಗಿ ಎತ್ತರ ಎತ್ತರ ಕೊಂಡೊಯ್ದಿವೆ. "ನನ್ನದೊಂದು ಪುಸ್ತಕ ಪ್ರಕಟಗೊಂಡ ನಂತರ ಅದರ ಬಗ್ಗೆ ನಿರ್ಲಿಪ್ತ ಮನೋಭಾವ ತಾಳುತ್ತೇನೆ" (ಪುಟ ೧೬೩). ಸರಿಯಾದ ಮಾತು. ಇವರನ್ನು ಕುತ್ಸಿತವಾಗಿಯೋ ವ್ಯಂಗ್ಯವಾಗಿಯೋ ವಿನಾಕಾರಣವಾಗಿಯೋ ಟೀಕಿಸಿದವರನ್ನು ಕೂಡ ಇವರು ಇದೇ "ನಿರ್ಲಿಪ್ತ ಮನೋಭಾವ"ದಿಂದ ಉಪೇಕ್ಷಿಸಿದ್ದರೆ ಎಷ್ಟು ಸೊಗಸಾಗಿರುತ್ತಿತ್ತು! ಇವರಿಗಿಂತ ಹೆಚ್ಚು ಜನೋಪಕಾರ ಮಾಡಿದವರು ಕಡಿಮೆ. ಇನ್ನು ಇವರಿಗಿಂತ "Et tu Brute!" (ಪರಮಾಪ್ತರಿಂದ ಅನಿರೀಕ್ಷಿತ ವಿಶ್ವಾಸಘಾತ) ಸನ್ನಿವೇಶ ಎದುರಿಸಿದವರೂ ಬಹಳಿಲ್ಲ. ಆದರೆ ಗಂಧ ಸದಾ ಪರಿಮಳವನ್ನೇ ಬೀರೀತು.

ಇವರ ಪ್ರಾಮಾಣಿಕತೆ, ಅದರ ರಕ್ಷಣೆಗಾಗಿ ಎಂಥ ನೈಷ್ಠುರ್ಯವನ್ನೂ ಎದುರಿಸಬಲ್ಲ ಕೆಚ್ಚೆದೆ ಮತ್ತು ಗುಣಪಕ್ಷಪಾತ ಹಾಗೂ ಔದಾರ್ಯ "ನಾನು ಮತ್ತು ಹಲವರು" ಅಧ್ಯಾಯದಲ್ಲಿ (ಪುಟ ೪೨-೮೫) ಪ್ರಕಟವಾಗಿವೆ. ಅನೇಕ ಕನ್ನಡ-ಸೇವಕರ (?) ಶಕುನಿತ್ವದ ಓರೆತನ ಎತ್ತಿ ತೋರಿಸುವ ದೃಶ್ಯಗಳು ಇಲ್ಲಿವೆ. ಇಲ್ಲೆಲ್ಲ ಆ ವ್ಯಕ್ತಿಗಳ ಹೆಸರುಗಳನ್ನು ಅ, ಆ, ಇ, ಈ ಮುಂತಾಗಿ ಪ್ರತೀಕಿಸಿದ್ದರೆ ಅಂತರ್ಗತ ಜೀವನಮೌಲ್ಯ ಅಧಿಕಸ್ಫುಟವಾಗಿರುತ್ತಿತ್ತು—"ಶ್ರುತಗಾನಮಭಿರಾಮಮಶ್ರುತಗಾನಮಭಿರಾಮತರಂ" (ಡಿವಿಜಿ). ಪ್ರಾಯಶಃ ಮುಂದಿನ ಶತಮಾನದ ವಾಚಕನಿಗೆ, ಆತ ಈ ಘಟನೆ-ಕಾಲ-ವ್ಯಕ್ತಿ ದೂರನಾಗುವುದರಿಂದ, ಇಂಥ ಸೌಕರ್ಯ ಒದಗೀತು.

"ನಮ್ಮಲ್ಲಿ ಸಣ್ಣತನದ ದೊಡ್ಡವರೇ ಹೆಚ್ಚು. ತಮ್ಮ ತಪ್ಪನ್ನೊಪ್ಪಿಕೊಂಡು ಕ್ಷಮೆ ಕೇಳುವ ದೊಡ್ಡವರಿರಲಿ, ಸಣ್ಣವರು ಸಹ ಅಪರೂಪ" (ಪುಟ ೮೧). ಒಂದು ಪರಾ: ವ್ಯಕ್ತಿಯ ಸಾಧಾರಣ ರೀತಿ ರಿವಾಜುಗಳೇ ಇವು. ಕೃತಜ್ಞತೆ, ಪಶ್ಚಾತ್ತಾಪ, ನಿಸ್ಪೃಹತೆ ಮುಂತಾದ ಭಾವಸಂಸ್ಕಾರಗಳು ಸಾರ್ವತ್ರಿಕ ಅಥವಾ ಬಹುವ್ಯಾಪಕ ಗುಣಗಳಲ್ಲ. ಅಧಿಕಾರದ ಅಂತೆಯೇ ಸಾಹಿತ್ಯಸಾಧನೆಯ ಎಲ್ಲ ಮಜಲುಗಳನ್ನೂ ಏರಿರುವ, ನೋಡಿರುವ, ಸಾಧಿಸಿರುವ ಮತ್ತು ಸ್ವತಃ ಅವುಗಳಿಗೆ ಕಾರಣೀಭೂತರಾಗಿರುವ ದೇಜಗೌ ಇದನ್ನು ತಿಳಿಯದವರಲ್ಲ. ಸ್ವತಃ ಇವರು ಮಾತ್ರ ದೊಡ್ಡತನದ ದೊಡ್ಡವರು, ತಮ್ಮ ತಪ್ಪನ್ನೊಪ್ಪಿಕೊಂಡು ತತ್‌ಕ್ಷಣವೇ ಕ್ಷಮೆ ಯಾಚಿಸಿ ಆ ಬಗ್ಗೆ ಯಾವ ಕಹಿಯನ್ನೂ ಉಳಿಸಿಕೊಳ್ಳದ ನಿರ್ಮಲಾಂತಃಕರಣಿಗಳು: "ಪರಗುಣ ಪರಮಾಣುವುಮಂ ಗಿರಿಗೈದು-ಬರ್ಪವ ಸುಜನರ್."

ಕುವೆಂಪು-ಗುರುಕೃಪೆ, ಭಾರತೀಯ ಸ್ತ್ರೀತ್ವದ ಪ್ರತೀಕವಾಗಿ ಧರ್ಮಪತ್ನಿಯ ನೈತಿಕ ರಕ್ಷೆ ("ಮನೆ ಮನೆಯಲಿ ನೀನಾಗಿಹೆ ಗೃಹಶ್ರೀ ಪೆಸರಿಲ್ಲದ ಪೆಸರಿದೆ ನಿನಗದು ಗೃಹಸ್ತ್ರೀ" ಕುವೆಂಪು), ತೀನಂಶ್ರೀ ಪುತಿನ ರಂಥ ಜ್ಞಾನವೀರರುಗಳ ಸದಾಶಯಾ-ಶೀರ್ವಾದ, ಅಸಂಖ್ಯ ಬಂಧುಮಿತ್ರ ಉಪಕೃತ ಸಜ್ಜನರಿಂದ ಗೌರವ ಕೃತಜ್ಞತೆ ಇವರಿಗೆ ಸಂದಿವೆ ಮತ್ತು "ಇಫ್ ಯು ಸೀಕ್ ಎ ಮಾನ್ಯುಮೆಂಟ್ ಲುಕ್ ಅರೌಂಡ್" ಎಂಬಂತೆ ಮೈಸೂರು ವಿಶ್ವವಿದ್ಯಾನಿಲಯ, ಶ್ರೀಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಶ್ರೀಕುವೆಂಪು ವಿದ್ಯಾಪರಿಷತ್ತು ಎಲ್ಲವನ್ನೂ ಇವರು ವ್ಯವಸ್ಥಿತವಾಗಿ ಬೆಳೆಸಿ ಅಭಿವೃದ್ಧಿಸಿದ್ದಾರೆ, ಇವರೂ ಪ್ರವರ್ಧಿಸಿದ್ದಾರೆ. ಈ ಚೇತನ "ಬುದ್ಧ, ಬಸವಣ್ಣ, ಸಿದ್ಧನು ಅಲ್ಲ" ದಿರಬಹುದು, ಆದರೆ ಆಗಿದ್ದಾರೆ ಸದಾ ಮಾನವ, "ಸಾವಿತ್ರೀ ಧವನ್, ಗುರುಪದ ಕಮಲ ಭೃಂಗನ್."

ಸ್ವಂತ ದೌರ್ಬಲ್ಯಗಳ ಬಗ್ಗೆ ಇವರು ಪೂರ್ತಿ ಬಯಲಾಗಿರುವ ಪರಿ ಗಾಂಧೀಜಿ ಆತ್ಮಕಥೆ "ಸತ್ಯಶೋಧನೆ"ಯನ್ನು ಮತ್ತೆ ಮತ್ತೆ ನೆನಪಿಗೆ ತರುತ್ತದೆ. ವಸ್ತುತಃ ಪ್ರತಿ ವ್ಯಕ್ತಿಯ ಅಂತರಂಗವೂ ಸದಾಕಾಲ ಅಸಂಖ್ಯ ರಾಗದ್ವೇಷಗಳ ಕ್ವಥನಭಾಂಡ. ಅಲ್ಲಿಯೂ ಪ್ರಾಯಶಃ ಕಾಮಪಿಪಾಸೆಗೆ ಅಗ್ರಸ್ಥಾನ. ವಿಶ್ವಾಮಿತ್ರ ತಪೋಭಂಗ ಅಥವಾ ಮನ್ಮಥ ದಹನ ಪೌರಾಣಿಕ ಸನ್ನಿವೇಶಗಳಾದರೂ ಪ್ರತಿಮಿಸುವುದು ಇದನ್ನೇ. ಆದರೆ ಎಷ್ಟು ಮಂದಿಗೆ ದೇಜಗೌ ಅವರಂತೆ ತಮ್ಮ ಗುಪ್ತಾತಿಗುಪ್ತ ಲೈಂಗಿಕಾನುಭವಗಳನ್ನು ಪ್ರಥಮ ಪುರುಷದಲ್ಲಿ ನೇರವಾಗಿ ಬರೆಯುವ ನೈತಿಕ ಸ್ಥೈರ್ಯವಿದ್ದೀತು? ಇಂಥ ಒಂದೊಂದು ಘಟನೆಯ ನಿರೂಪಣೆ ಓದಿದ ಬಳಿಕ ದೇಜಗೌ ಹೇಗೆ ಈ ಲೇಖನದ ಮೂರನೆಯ ಪರಿಚ್ಛೇದದ ಮೊದಲ ವಾಕ್ಯಕ್ಕೆ ಜೀವಂತ ಭಾಷ್ಯ ಆಗಿರುವರೆಂದು ತಿಳಿದು ನಮಗೆ ಅಧಿಕಪ್ರಿಯರಾಗುತ್ತಾರೆ, ನಮ್ಮ ಗೌರವಕ್ಕೆ ಭಾಜನರಾಗುವ ಹಿರಿಯಣ್ಣ ಆಗುತ್ತಾರೆ: "ಕರುಣೆಗೊಂದು ಕೋಡಿವನ್ ಎದೆಯೊಲುಮೆಗೆ ಬೀಡವನ್!" (ಕುವೆಂಪು)

ಜಿ. ಟಿ. ನಾರಾಯಣರಾವ್

ಕರ್ಮಣ್ಯೇ—ಲೇಖಕರು : ಡಾ॥ ಆರ್. ಆರ್. ಪಾಂಗಾಳ್; ಪ್ರಕಾಶಕರು: ಶಿವರಾಮಕಾರಂತ ವೇದಿಕೆ, ೩೦೭, ೨ನೇ ಬ್ಲಾಕ್, ೧೭ನೇ ಅಡ್ಡರಸ್ತೆ, ಆರ್. ಟಿ. ನಗರ, ಬೆಂಗಳೂರು-೫೬೦೦೩೨, ಪ್ರಥಮ ಮುದ್ರಣ ೧೯೯೬, ಬೆಲೆ : ೩೦ ರೂ.

ಕ್ಯಾನ್ಸರ್ ಕಾಯಿಲೆಗೊಳಗಾದ ಹಳ್ಳಿಯ ಮುಗ್ಧ ಚಿಕ್ಕಮಾದನ ಸುತ್ತ ಹೆಣೆದ ಕಾದಂಬರಿ "ಕರ್ಮಣ್ಯೇ". ಮಗ ಆಹಾರ ನುಂಗಲು ಕಷ್ಟಪಡುವುದನ್ನು ಕಂಡ ತಾಯಿ ಚಿಕ್ಕಮಾದನನ್ನು ಬಲವಂತದಿಂದ ಆಸ್ಪತ್ರೆಗೆ ಕಳುಹಿಸುತ್ತಾಳೆ. ಅಲ್ಲಿ ವೈದ್ಯರು ಆತನ ಖಾಯಿಲೆ ಕ್ಯಾನ್ಸರ್ ಎಂದು ಪತ್ತೆ ಹಚ್ಚುತ್ತಾರೆ ಮತ್ತು ಅದಕ್ಕೆ ಶಸ್ತ್ರಚಿಕಿತ್ಸೆ ಮಾಡಿಸಬೇಕೆಂದು ಹೇಳುತ್ತಾರೆ. ಚಿಕ್ಕಮಾದ ಶಸ್ತ್ರಚಿಕಿತ್ಸೆಗೊಳಗಾಗಲು ಭಯಪಡುತ್ತಾನೆ. ಮನೆಯಲ್ಲಿ ತಾಯಿ, ಆಸ್ಪತ್ರೆಯಲ್ಲಿ ವೈದ್ಯರು ಅವನಲ್ಲಿ ಧೈರ್ಯ ತುಂಬುತ್ತಾರೆ. ಕೊನೆಗೂ ಚಿಕ್ಕಮಾದ ಶಸ್ತ್ರಚಿಕಿತ್ಸೆಗೆ ಒಪ್ಪಿಗೆ ಕೊಡುತ್ತಾನೆ. ಚಿಕಿತ್ಸೆಯೇನೋ ಯಶಸ್ವಿ ಆಗುತ್ತದೆ ಆದರೆ?

ಈ ಕಾದಂಬರಿಯಲ್ಲಿ ವೈದ್ಯರ ಸೋಲು ಗೆಲುವುಗಳನ್ನು ಜನ ಹೇಗೆ ಕಾಣುತ್ತಾರೆ, ಈ ದೃಷ್ಟಿ ವೈದ್ಯರ ಮನಸ್ಸಿನ ಮೇಲೆ ಏನು ಪರಿಣಾಮ ಬೀರುತ್ತದೆ ಎಂದು ಲೇಖಕರು ದೀರ್ಘವಾಗಿ ವಿವರಿಸಿದ್ದಾರೆ. ಶಸ್ತ್ರಚಿಕಿತ್ಸೆ ಚಿಕ್ಕಮಾದನ ರೋಗಕ್ಕೆ ಅಗತ್ಯವಿರಲಿಲ್ಲ, ವಿಕಿರಣ ಚಿಕಿತ್ಸೆ ಸಾಕಾಗಿತ್ತು. ಆದರೆ ವೈದ್ಯರು ತಮ್ಮ ವಿನೂತನ ಶಸ್ತ್ರಚಿಕಿತ್ಸಾ ಅನುಭವಕ್ಕಾಗಿ ರೋಗಿಯನ್ನು ಶಸ್ತ್ರಚಿಕಿತ್ಸೆಗೆ ಒಳಪಡಿಸುವುದನ್ನು ಸ್ವತಃ ವೈದ್ಯರಾದ ಲೇಖಕರು ಸೂಕ್ಷ್ಮವಾಗಿ ಮನ ಮುಟ್ಟುವಂತೆ ವಿವರಿಸಿದ್ದಾರೆ.

ಆಸ್ಪತ್ರೆಯಲ್ಲಿ ಚೇತರಿಸಿಕೊಳ್ಳುತ್ತಿದ್ದ ಚಿಕ್ಕಮಾದನನ್ನು ನೋಡಲು ಕರಿಸಿದ್ಧ ಆಸ್ಪತ್ರೆಗೆ ಒಳ್ಳೆಯ ಉದ್ದೇಶದಿಂದ ಬರುತ್ತಾನೆ. ಆದರೆ ಇವರ ನಡುವೆ ಹಳೇ ದ್ವೇಷವಿತ್ತು. ಕರಿಸಿದ್ಧನನ್ನು ಕಂಡೊಡನೆ ಚಿಕ್ಕಮಾದನಿಗೆ ಹಳೆಯದೆಲ್ಲ ನೆನಪಾಗುತ್ತದೆ. ಕರಿಸಿದ್ದನ ಹಸು ರಾತ್ರಿ ಚಿಕ್ಕಮಾದನ ಹೊಲಕ್ಕೆ ನುಗ್ಗಿದ್ದು ಅದನ್ನು ಚಿಕ್ಕಮಾದ ಹೊಡೆದು ಓಡಿಸಿದ್ದು ಆ ಹಸು ಎಲ್ಲಿಯೊ ಬೇಲಿ ದಾಟುವಾಗ ಬಿದ್ದು ಕಾಲುಮುರಿದುಕೊಂಡದ್ದು, ಚಿಕ್ಕಮಾದನೇ ಹಸುವಿನ ಕಾಲು ಮುರಿಯಲು ಕಾರಣ ಎಂಬ ಕರಿಸಿದ್ದನ ಆರೋಪ. "ನನ್ನ ಹಸು ಕಾಲುಮುರಿದಿರೊ ನಿನ್ನ ಕಾಲು ಮುರಿತೀನಿ, ಇಲ್ದೆ ಇದ್ರೆ ಆ ದೇವರು ನಿನ್ನ ಕಾಲು ಕೊಳೆತು ಹೋಗುವಂತೆ ಮಾಡ್ತಾನೆ" ಎಂದು ಕರಿಸಿದ್ಧ ಶಪಿಸಿದ್ದೆಲ್ಲ ಚಿಕ್ಕಮಾದನ ಕಣ್ಣೆದುರು ಬರುತ್ತದೆ. ಶಸ್ತ್ರಚಿಕಿತ್ಸೆಯಾಗಿ ಗುಣವಾದ ಕರಿಸಿದ್ಧನನ್ನು ನೋಡಿದಾಗ ತಟ್ಟಿದ ಮಾನಸಿಕ ಆಘಾತದಿಂದ ಚಿಕ್ಕಮಾದ ಚೇತರಿಸಿಕೊಳ್ಳಲೇ ಇಲ್ಲ. ಆ ಹಸು ಸಾಯಲು ತಾನೇ ಕಾರಣ. ಅದಕ್ಕೆ ದೇವರು ತನಗೆ ಈ ಕಾಯಿಲೆ ಕೊಟ್ಟಿದ್ದಾನೆ ಎಂಬ ಪಾಪಪ್ರಜ್ಞೆ ಆತನನ್ನು ಕಾಡುತ್ತದೆ. ಸತ್ತೇ ಹೋಗುತ್ತಾನೆ. ಸಾವಿಗೆ ಕಾರಣ ಯಾವುದು? ಶಸ್ತ್ರಚಿಕಿತ್ಸೆಯೋ? ಮನೋದೌರ್ಬಲ್ಯವೋ? ರೋಗಿಗೆ ಮನೋಬಲ

ಗಟ್ಟಿಯಾಗಿದ್ದರೆ ಮಾತ್ರ ಆತ ಎಂತ ಕಾಯಿಲೆಯಿದ್ದರೂ ಬೇಗ ಚೇತರಿಸಿಕೊಳ್ಳುತ್ತಾನೆ ಎಂದು ಅತ್ಯಂತ ನವುರಾಗಿ ಲೇಖಕರು ತಿಳಿಸಿದ್ದಾರೆ.

ರೋಗಿ ಶಸ್ತ್ರಚಿಕಿತ್ಸೆಯಿಂದ ಗುಣಮುಖ ಹೊಂದಿ ಮನೆಗೆ ತೆರಳಿದರೆ ವೈದ್ಯರನ್ನು ಹೊಗಳುವ ಈ ಸಮಾಜ, ಅದೇ ರೋಗಿ ಮೃತನಾದರೆ ಹೇಗೆ ವೈದ್ಯರನ್ನು ನಿಂದಿಸುತ್ತದೆ ಎಂಬ ಕಟು ಸತ್ಯವನ್ನು ಲೇಖಕರು ಚಿಕ್ಕಮಾದ ಸತ್ತಾಗ ಅವನ ತಮ್ಮ ಬಸಯ್ಯ ನಿಂದಿಸಿದ್ದನ್ನು ಈ ಕಾದಂಬರಿಯಲ್ಲಿ ಉಲ್ಲೇಖಿಸಿದ್ದಾರೆ. 'ಕರ್ಮಣ್ಯೇ' ಕೃತಿಯಲ್ಲಿ ಮುಖ್ಯ ಪಾತ್ರಗಳಲ್ಲಿ ಬರುವ ಚಿಕ್ಕಮಾದ, ಡಾ|| ಲಿಂಗಯ್ಯ, ಡಾ|| ಸೂರ್ಯನಾಥ, ಬಸಯ್ಯ ಇವರ ವಿಭಿನ್ನ ಮಾನಸಿಕ ತುಮುಲಗಳನ್ನು ಲೇಖಕರು ಸಮರ್ಥವಾಗಿ ನಿರೂಪಿಸಿದ್ದಾರೆ.

ಜಿ. ಎ. ರುಕ್ಮಿಣಿಮಾಲಾ



ಬೈದರೆ ಬೈದವರ ಬಾಯಿ ನೋಯುವುದು. ಅದರಿಂದ ಇತರರಿಗೆ ಏನಾಗುವುದು? ನಿಂದಿಸಿದರೆ ನಿಂದಿಸಿದವರ ಗುಣವನ್ನು ಹೇಳುವುದು. ಕೆಸರಲ್ಲಿ ಹೊರಳಾಡುವ ಹಂದಿ ಅದರಿಂದ ಇತರರ ಮೈ ಹೊಲಸಾಗುವುದೆಂದು ಸಂತೋಷಪಡುವುದು ಅದರ ಮೂರ್ಖತನ. ಪರಿಣಾಮವಾಗಿ ಅದರ ಮೈ ಹೊಲಸಾಗಿ ಅದನ್ನು ದೂರ ಮಾಡುತ್ತಾರೆಂಬುದು ಅದಕ್ಕೇನು ಪಾಪ ಗೊತ್ತು?

ಯಾರು ದಯವುಳ್ಳವರೋ ಅವರು ಧನ್ಯರು. ಏಕೆಂದರೆ ಅವರು ಕರುಣೆಯನ್ನು ಹೊಂದುತ್ತಾರೆ.

—ಏಸುಕ್ರಿಸ್ತ

ಓದುಗರ ಅನಿಸಿಕೆಗಳು

ಮಾನ್ಯರೆ,

ಡಾ|| ರಾಜ್‌ಕುಮಾರ್ ಅವರ ಗಂಭೀರ ಮುದ್ರೆಯೊಂದಿಗೆ ಬಂದಿರುವ ಸೆಪ್ಟೆಂಬರ್ ೯೭ರ ಪುಸ್ತಕ ಪ್ರಪಂಚವು ಆಕರ್ಷಕವಾಗಿದೆ. ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ವಿಜೇತ ಡಾ|| ರಾಜ್‌ಕುಮಾರ್ ಅವರನ್ನು ಕುರಿತ ದೇಜಗೌ ಅವರ ಲೇಖನ ವಿಚಾರಪೂರ್ಣ ವಾಗಿದೆ. ಡಾ|| ಹಾ. ತಿ. ಕೃಷ್ಣೇಗೌಡ ಅವರ ಲೇಖನವು ರಾಜಕುಮಾರ್ ಅವರ ಬಾಲ್ಯ ಮತ್ತು ಕಲಾರಂಗದ ಜೀವನವನ್ನು ಸಂಕ್ಷಿಪ್ತವಾದರೂ ಮನಮುಟ್ಟುವಂತೆ ನೀಡಿದ್ದಾರೆ.

ವಿಶ್ವ ಸಾಕ್ಷರತಾ ದಿನಾಚರಣೆಯ ಹಿನ್ನೆಲೆಯಲ್ಲಿ ಚಂದ್ರಶೇಖರಾರಾಧ್ಯ ಅವರು ಲೇಖನದಲ್ಲಿ ಯುನೆಸ್ಕೊ ತಜ್ಞರುಗಳಾದ ನ. ಭದ್ರಯ್ಯ, ಟಿ. ಕೃಷ್ಣಮೂರ್ತಿ ಮತ್ತು ಎಸ್. ವಿ. ಶ್ರೀನಿವಾಸರಾವ್ ಅವರನ್ನು ಸ್ಮರಿಸಿಕೊಂಡಿರುವುದು ಸಮಯೋಚಿತ ವಾಗಿದೆ. ವಯಸ್ಕರ ಶಿಕ್ಷಣ ಎಂದರೆ ಏನು ಎಂದು ಇತರ ರಾಜ್ಯಗಳು ಯೋಚಿಸುತ್ತಿರುವಾಗ ಜಗತ್ತಿಗೆ ವಯಸ್ಕರ ಶಿಕ್ಷಣದ ಬಗ್ಗೆ ಮಾರ್ಗದರ್ಶನ ನೀಡಲು ಕರ್ನಾಟಕ ಮುಂದಾದುದು ಹೆಮ್ಮೆಯಲ್ಲವೆ? ಭದ್ರಯ್ಯನವರ ಭಾವ ಚಿತ್ರ ಕೊಟ್ಟಿರುವಂತೆ ಕೃಷ್ಣಮೂರ್ತಿ ಹಾಗೂ ಎಸ್. ವಿ. ಶ್ರೀನಿವಾಸರಾವ್ ಅವರ ಭಾವ ಚಿತ್ರವೂ ಇದ್ದರೆ ಚೆನ್ನಾಗಿತ್ತು.

ಶ್ರೀ ಲತಾ ಕೃಷ್ಣಮೂರ್ತಿ
ಬನಶಂಕರಿ, ಬೆಂಗಳೂರು

ಮಾನ್ಯರೆ,

ಅಕ್ಟೋಬರ್ ಸಂಚಿಕೆಯಲ್ಲಿ ಪ್ರಕಟವಾಗಿರುವ ಶ್ರೀ ಜಿ. ಟಿ. ನಾರಾಯಣರಾವ್ ಅವರ ವಿಜ್ಞಾನಿ ಐನ್‌ಸ್ಟೈನ್ ದೃಷ್ಟಿಯಲ್ಲಿ ಮಹಾತ್ಮಗಾಂಧಿ ಲೇಖನವು ವಿಚಾರ ಪೂರ್ಣವಾಗಿದೆ. ಶ್ರೀಮತಿ ಟಿ. ಎಸ್. ಲಲಿತ ಅವರ ಕೂಲಿಕಾರರ ದಾರಿ ದೀವಿಗೆ ವೀರಾ ಮಹದೇವನ್ ಅನುವಾದ ಲೇಖನವು ಮನಸ್ಸು ಮಾಡಿದರೆ ಮಹಿಳೆಯರು ಯಾವ ಕೆಲಸವನ್ನಾದರೂ ಅಚ್ಚುಕಟ್ಟಾಗಿ ಮತ್ತು ಸಮಾಲಾಗಿ ನಿರ್ವಹಿಸಬಲ್ಲರು ಎಂಬುದನ್ನು ಮನೋಜ್ಞವಾಗಿ ಚಿತ್ರಿಸಿದೆ. ಡಾ|| ಕರವೀರ ಪ್ರಭು ಕ್ಯಾಲಕೊಂಡ ಅವರ 'ಮಾದಕ ವಸ್ತುಗಳ ಮಾಯಾಜಾಲ' ಲೇಖನದಲ್ಲಿ ಮಾದಕ ಪ್ರಪಂಚದ, ಇತಿಹಾಸ, ಈ ಚಟಕ್ಕೆ ಒಳಗಾಗುವ ವರ್ಗ, ಇದರಿಂದಾಗುವ ಪರಿಣಾಮವನ್ನು ವಿವರವಾಗಿ ಉಲ್ಲೇಖಿಸಿ, ಇದನ್ನು ತಡೆಗಟ್ಟದಿದ್ದರೆ ಆಗಬಹುದಾದ ದುರಂತದ ಬಗ್ಗೆ ಎಚ್ಚರಿಸಿದ್ದಾರೆ; ಈ ಬಗ್ಗೆ ಸಮಾಜ ಅತ್ಯಂತ ಜವಾಬ್ದಾರಿಯಿಂದ ನಿರ್ವಹಿಸಬೇಕಾಗಿದೆ.

ಈ ಸಂಚಿಕೆ ಮುಖಪುಟದ ಗಾಂಧೀಜಿ ಹಾಗೂ ಐನ್‌ಸ್ಟೈನ್ ಅವರ ಭಾವಪೂರ್ಣ ಚಿತ್ರಗಳು ಮನೋಜ್ಞವಾಗಿವೆ. ಇದೇ ಸಂಚಿಕೆಯಲ್ಲಿ ಗಾಂಧೀಜಿಯವರ ಸೂಕ್ತಿಗಳು ಅಚ್ಚಾಗಿರುವುದು ಅಕ್ಟೋಬರ್ ಸಂಚಿಕೆಯ ವಿಶೇಷತೆಯನ್ನು ಪ್ರತಿಬಿಂಬಿಸಿದೆ. ಇದಕ್ಕಾಗಿ ನಮ್ಮ ಅಭಿನಂದನೆಗಳು.

ಸೋಮ್ಲಾನಾಯಕ್
ಯಲ್ಲಾಪುರ

ಮಾನ್ಯರೆ,

ಪುಸ್ತಕ ಪ್ರಪಂಚ ನವೆಂಬರ್ ಸಂಚಿಕೆಯು ಈ ಕೆಲವು ಅಂಶಗಳನ್ನೊಳಗೊಂಡಿರುವ ಕಾರಣ ಉತ್ತಮವಾಗಿದೆ.

—ರಕ್ಷಾಪುಟದ ವರ್ಣಮಯ ಚಿತ್ರವು ಪ್ರಪಂಚದ ನಕ್ಷೆಯಿಂದ ಹೊರ ಬರುತ್ತಿರುವ ಕಲ್ಪನೆ ವಿಶಿಷ್ಟವಾಗಿದ್ದು, ಇದು ಅರಿತಷ್ಟೂ ಆಳ ವಿಚಾರಿಸಿದಷ್ಟೂ ವಿಶಾಲ.

—ರಕ್ಷಾಪುಟದ ಹಿಂಭಾಗದಲ್ಲಿನ ಕನ್ನಡ ಕುಲಪುರೋಹಿತ ಆಲೂರು ವೆಂಕಟರಾವ್ ಅವರ ಚಿತ್ರ ಈ ಸಂಚಿಕೆಗೆ ವಿಶೇಷ ಮೆರಗು ನೀಡಿದೆ.

—ಸಂಚಿಕೆಯ ಒಳ ಭಾಗದಲ್ಲಿ ಕನ್ನಡ ನಾಡು-ನುಡಿಗೆ ಸೇವೆ ಸಲ್ಲಿಸಿದ ಕವಿ, ಸಾಹಿತಿಗಳ ಹೇಳಿಕೆಗಳು ಭಾವಚಿತ್ರಗಳೊಂದಿಗೆ ಪ್ರಕಟವಾಗಿರುವುದು ಸಂಗ್ರಹ ಯೋಗ್ಯವಾಗಿದೆ.

—ಕನ್ನಡದ ಗತಿ ಸಂಪಾದಕೀಯ ಲೇಖನ ಓದಿದಾಗ ಅಂದು ಕನ್ನಡದ ಸ್ಥಾನಮಾನ ಹೇಗಿತ್ತೋ ಇಂದೂ ಅದೇ ಸ್ಥಿತಿಯಲ್ಲಿ, ಅದಕ್ಕಿಂತಲೂ ಅತ್ತತ್ತ ಇರುವುದು ಕನ್ನಡಿಗರಾದ ನಮ್ಮ ಅಭಿಮಾನ ಶೂನ್ಯತೆಯ ಸಂಕೇತವಾಗಿದೆ.

—ಚಂದ್ರಶೇಖರಾರಾಧ್ಯ ಅವರ ಕನ್ನಡ ನಾಡು ನುಡಿ ಸಂಸ್ಕೃತಿ ಲೇಖನವು ನಾಡಿನ ರಾಜಕೀಯ, ಭೌಗೋಳಿಕ, ಚಾರಿತ್ರಿಕ ಹಾಗೂ ಸಾಹಿತ್ಯಿಕ ಅಂಶಗಳನ್ನೂ ಒಳಗೊಂಡು ಅರ್ಥಪೂರ್ಣವಾಗಿದೆ. ಭಾಷೆ ಬೆಳವಣಿಗೆಗೆ ಹಲವಾರು ಮಾರ್ಗಗಳಿದ್ದು ಕೆಲವನ್ನು ಮಾತ್ರ ಉದಾಹರಣೆಗಾಗಿ ತಿಳಿಸಿದ್ದಾರೆ. ಇವು ಕಲಿತವರು ದೈನಂದಿನ ವ್ಯವಹಾರಗಳಲ್ಲಿ ಕಾರ್ಯಾನುಷ್ಠಾನ ಮಾಡಬಹುದಾಗಿದೆ. ಇದರಿಂದ ವಿದ್ಯಾವಂತರಾದವರು ಕಿಂಚಿತ್ತಾದರೂ ತಮ್ಮ ಭಾಷೆಗೆ ಸಲ್ಲಿಸಬಹುದಾದ ಕಾಣಿಕೆಯಾಗಿದೆ. ಮನಸ್ಸಿದ್ದರೆ ಮಾರ್ಗ ಇದೆಯಲ್ಲವೆ?

ಮಹದೇವಯ್ಯ ಮಠಪತಿ
ಆಳಂದ, ಗುಲಬರ್ಗ ಜಿಲ್ಲಾ

ದೇವರ ಸೃಷ್ಟಿಯಲ್ಲಿ ವಿರಮಿಸಿರಿ, ಸಂತೋಷಿಸಿರಿ, ನಿಮಗೆ ಒದಗಿರುವ ಇಷ್ಟೆಲ್ಲ ಸೃಷ್ಟಿ ಸಂಪತ್ತಾಗಿ ಆನಂದಿಸಿರಿ. ಹೆಮ್ಮೆ ಪಡಿರಿ. ಜೊತೆಗೆ ಸೃಷ್ಟಿಕರ್ತನಿಗೆ ಕೃತಜ್ಞರಾಗಿರುವುದೂ ನಿಮ್ಮ ಧರ್ಮ ಎಂಬುದನ್ನು ಮರೆಯದಿರಿ.

—ಏಸುಕ್ರಿಸ್ತ

● ಈ ಸಂಚಿಕೆಯ ಲೇಖಕರು—

ಸರ್ವಶ್ರೀಗಳಾದ—

೧. ಡಾ॥ ಎ. ಪಿ. ರಾಧಾಕೃಷ್ಣ
ಚೇತನ, ಆರ್ಯಾಪು ಅಂಚೆ, ಪುತ್ತೂರು (ದಕ್ಷಿಣ ಕನ್ನಡ)–೫೭೪ ೨೧೦

೨. ಸರಸ್ವತಿ ಬಡೆಕ್ಕಿಲ, ಎಂ.೪೯, ೩ನೇ ಹಂತ, ಜೆ. ಮತ್ತು ಟಿ. ಕೆ. ಬಡಾವಣೆ
ಕುವೆಂಪುನಗರ, ಮೈಸೂರು–೫೭೦ ೦೨೩

೩. ಎಚ್. ಆರ್. ಚಂದ್ರವದನರಾವ್, ೨೮೭೭/೧೦, ೭ನೇ ತಿರುವು
ಚಾಮುಂಡಿಪುರಂ, ಮೈಸೂರು–೫೭೦ ೦೦೪

೪. ಬಿ. ಆರ್. ಪರಿಣೀತ, ೫೬೧, ೩ನೇ ಮುಖ್ಯ ರಸ್ತೆ, 'ಎ' ಬ್ಲಾಕ್, ೨ನೇ ಹಂತ
ರಾಜಾಜಿನಗರ, ಬೆಂಗಳೂರು–೫೬೦೦೧೦

೫. ಡಾ॥ ಎಸ್. ಜೆ. ನಾಗಾಲೋಟಿ ಮಠ, ಡೈರೆಕ್ಟರ್
ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್, ಹುಬ್ಬಳ್ಳಿ–೨೨

೬. ಟಿ. ವಿ. ರಾಧ, ೧೨೯, ಅನಂತನಿಲಯ, ೭ನೇ ಮೈನ್, ೪ನೇ ಬ್ಲಾಕ್
ಬೈರಸಂದ್ರ ಅಫಿಶಿಯಲ್ ಕ್ವಾರ್ಟರ್ಸ್, ಜಯನಗರ ಪೂರ್ವ, ಬೆಂಗಳೂರು-೧೧

೭. ಡಾ॥ ಎ. ಎಸ್. ರಾಘವಕುಮಾರಿ, ಶಿಕ್ಷಣಶಾಸ್ತ್ರ ರೀಡರ್
೭೪, ೭ನೇ ಮುಖ್ಯ ರಸ್ತೆ, ಸರಸ್ವತೀಪುರ, ಮೈಸೂರು–೫೭೦ ೦೦೯

೮. ಟಿ. ಎಸ್. ಲಲಿತ, ನಂ. ೭೦೨, ಮೊದಲನೆ ಮಹಡಿ, ೧೭ ನೇ ಮೇನ್
ಸರಸ್ವತೀಪುರ, ಮೈಸೂರು–೫೭೦ ೦೦೯

೯. ಡಾ॥ ಬಿ. ಡಿ. ಸತ್ಯನಾರಾಯಣ, ಚರ್ಮ ಮತ್ತು ಲೈಂಗಿಕ ರೋಗಗಳ ತಜ್ಞರು
ನಂ. ೩೦೫, ಕೆ. ಆರ್. ಆಸ್ಪತ್ರೆ ರಸ್ತೆ, ಮೈಸೂರು–೫೭೦ ೦೦೧

೧೦. ಎ. ಪಿ. ಚಂದ್ರಶೇಖರ, 'ಇಂದ್ರಪ್ರಸ್ಥ' ಸಾವಯುವ ಫಾರ್ಮ್ ಮತ್ತು ನರ್ಸರಿ
ಕಳಲವಾಡಿಗ್ರಾಮ, ಉದ್ಬೂರು ಅಂಚೆ, ಮೈಸೂರು–೫೭೦ ೦೦೭

೧೧. ನೀರದ ನಾಗರಾಜರಾವ್, ೨೨೩೫, ೨೩ನೇ ಕ್ರಾಸ್, ೨ನೇ ಹಂತ
ಬನಶಂಕರಿ, ಬೆಂಗಳೂರು–೫೬೦ ೦೭೦

೧೨. ಡಾ॥ ಕೆ. ವಿ. ರಾಘವೇಂದ್ರರಾವ್, ನಂ. ೨೮೭೭/೧೩,
ಚಾಮುಂಡೀಪುರಂ ಬಸ್ ನಿಲ್ದಾಣ ಎದುರು, ಮೈಸೂರು–೫೭೦೦೦೪


೧೩. ಹಂಸ ಐತಾಳ, ೬೧೧, 'ಚಂದನ' ೭ನೇ ಕ್ರಾಸ್, ಅನಿಕೇತನ ರಸ್ತೆ
ಕುವೆಂಪುನಗರ, ಮೈಸೂರು–೫೭೦ ೦೨೩

೧೪. ಜಿ. ಟಿ. ನಾರಾಯಣರಾವ್, ನಂ. ೮, 'ಅತ್ರಿ' ಕಾಮಾಕ್ಷಿ ಆಸ್ಪತ್ರೆ ರಸ್ತೆ,
ಸರಸ್ವತೀಪುರ, ಮೈಸೂರು–೫೭೦ ೦೦೯

೧೫. ಜಿ. ಎ. ರುಕ್ಮಿಣಿಮಾಲಾ, ನಂ. ೮, ಅತ್ರಿ, ಕಾಮಾಕ್ಷಿ ಆಸ್ಪತ್ರೆ ರಸ್ತೆ
ಸರಸ್ವತೀಪುರ, ಮೈಸೂರು–೫೭೦ ೦೦೯

Reg. No. KRNN.29 / WPP 6

LICENCE No. 21
LICENCED TO POST WITH PAYMENT



Edited by Chandrashekhararadhya, Printed by M. Krishnappa
Printed & Published by Karnataka State Adult Education Council,
5/1, Vinoba Road, Manasa Gangothri, Mysore-570 006.

Phone : 512485